# ಒಡಲಾಳ

## ದೇವನೂರ ಮಹಾದೇವ

**ನವ್ವಾಲೆ ಪ್ರಕಾಶನ**
**ಮೈಸೂರು-23**

**Odalala:** A Novella, written by Devanoora Mahadeva, Published by Navvale Prakashana, 53, 11th cross, Navilu Road, Kuvempu Nagar, Mysore-23, Pages: 64
Impression : 2012
Price: Rs. 30-00

C : ಲೇಖಕ

**ಬೆಲೆ:** 30 ರೂ.

**ಮುಖಪುಟ:** ದೇಶಾಭಿಮಾನಿ ಕೃಪೆ

**ಅಧಿಕೃತ ಮಾರಾಟಗಾರರು**
ಅಭಿರುಚಿ ಪ್ರಕಾಶನ
ನಂ.೩೮೬, ೧೪ನೆಯ ಮುಖ್ಯರಸ್ತೆ
೩ನೆಯ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು-9
Ph : 9980560013

**ಅಕ್ಷರ ಜೋಡಣೆ:** ಪ್ರಬೋಧ ಮತ್ತು ಅಭಿರುಚಿ

**ಮುದ್ರಣ:** ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು

### *ನೆನೆಕೆಗಳು*

ಈ ಕತೆಯನ್ನು ಪ್ರಕಟಿಸಿದ ಪ್ರಜಾವಾಣಿ ಪತ್ರಿಕೆಗೆ, ಈ ಕೃತಿಯನ್ನು ಮೊದಲು ಪ್ರಕಟಿಸಿದ ನೆಲಮನೆ ಪ್ರಕಾಶನದ ಶ್ರೀ ಕೆ. ದೇವೇಗೌಡ ಅವರಿಗೆ, ಒಡಲಾಳದ ಒಳನೋಡಿ ಅದರ ಬೆಲೆ ಹೆಚ್ಚಿಸಿದ ಡಾ. ಯು.ಆರ್. ಅನಂತಮೂರ್ತಿ ಅವರಿಗೆ, ಹಾಗೂ ತಮ್ಮ ಬೆಚ್ಚಗಿನ ಅನಿಸಿಕೆಗಳನ್ನು ಬರೆದ ಡಾ. ಕೆ.ವಿ. ನಾರಾಯಣ, ಎಚ್.ಎ.ಅನಿಲ್ ಕುಮಾರ್ ಅವರಿಗೆ, ಈ ಕಥಾಸಂಕಲನವನ್ನು ಪಠ್ಯವಾಗಿ ಆಯ್ಕೆ ಮಾಡಿದ ಮಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಬೆಳಗಾವಿಯ ರಾಣಿಚೆನ್ನಮ್ಮ ವಿಶ್ವವಿದ್ಯಾಲಯಗಳ ಪಠ್ಯಪುಸ್ತಕ ಆಯ್ಕೆ ಮಂಡಳಿಗೆ, ಇಲ್ಲಿನ ಒಡಲಾಳದ ಅಕ್ಷರ ಜೋಡಣೆಯನ್ನು ತನ್ನ ಖುಷಿಗೆ ಮಾಡಿಟ್ಟುಕೊಂಡಿದ್ದನ್ನು ನೀಡಿ ಉಪಕರಿಸಿದ ಕನ್ನಡ ಖುಷಿಗಾರ ಡಾ. ಪಂಡಿತಾರಾಧ್ಯ ಅವರಿಗೂ ಹಾಗೂ ಉಳಿಕೆ ಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟ ಅಭಿರುಚಿ ಪ್ರಕಾಶನದವರಿಗೆ ಹಾಗೂ ಆತ್ಮೀಯವಾಗಿ ಮುದ್ರಿಸಿದ ವಿಶ್ವಾಸ್ ಪ್ರಿಂಟರ್ಸ್ ಕಾರ್ಮಿಕ ವರ್ಗಕ್ಕೆ ಕೃತಜ್ಞತೆಗಳು.

***-ದೇವನೂರ ಮಹಾದೇವ***

ಆಗಸ್ಟ್ - 17
ಮೈಸೂರು

## ಮುನ್ನುಡಿ

ದಲಿತ ಜೀವನದ ಸ್ಥಿತಿ ಮತ್ತು ಸಾಧ್ಯತೆ _ ಇವುಗಳನ್ನು ಒಟ್ಟಾಗಿ ಹಿಡಿದು, ಹೀಗೆ ಒಟ್ಟಾಗಿ ಹಿಡಿಯುವ ಕ್ರಮದಿಂದಾಗಿ ಚಿತ್ರಣವನ್ನು ಚೈತನ್ಯಪೂರ್ಣವಾಗಿಸುವ ಸಾಹಿತ್ಯದ ಈವರೆಗಿನ ಪ್ರಯತ್ನಗಳನ್ನು ಅವಲೋಕಿಸಿದಾಗ ಮೂರು ಮುಖ್ಯ ಬಗೆಗಳನ್ನಾದರೂ ನಾವು ಕಾಣುತ್ತೇವೆ. ಮೊದಲು ಕನ್ನಡದಲ್ಲಿ ಪ್ರಸಿದ್ಧವಾದ ಎರಡು ಬಗೆಗಳನ್ನು ನೋಡೋಣ: ಧೀಮಂತ ವಿಮರ್ಶಕರಾದ ಡಾ. ಡಿ.ಆರ್.ನಾಗರಾಜ್‌ರ ಜೊತೆಗೆ ಇದನ್ನು ಒಮ್ಮೆ ಚರ್ಚಿಸುವಾಗ ಕಾರಂತರ ಚೋಮ ಮತ್ತು ಕುವೆಂಪುರವರ ನಾಯಿಗುತ್ತಿಯರಲ್ಲಿ ಯಾರು ಹೆಚ್ಚು ಸಮರ್ಪಕ ದಲಿತ ಪಾತ್ರವೆಂಬ ಪ್ರಶ್ನೆಯೆದ್ದಿತು. ಚೋಮನ ಕಲ್ಪನೆ ಟ್ರಾಜಿಡಿಯ ರೀತಿಯದು; ನಾಯಿಗುತ್ತಿ ಕಾಮಿಕ್ ಎನ್ನಬಹುದಾದ ಪಾತ್ರ. ಡಾ.ನಾಗರಾಜರು ಗುತ್ತಿಯ ಪರವಾಗಿ ವಾದಿಸಿದರು. ಈ ಬಗ್ಗೆ ಅವರು ನಮ್ಮ ತಿಳಿವನ್ನು ಬೆಳೆಸುವಂತೆ ಹೇಳುವ ತುಂಬ ಸೂಕ್ಷ್ಮಗಳು ಇವೆ. ಅವುಗಳನ್ನು ಸದ್ಯಕ್ಕೆ ಕಡೆಗಾಣಿಸಿ, ಗಂಭೀರನಾದ ಚೋಮನನ್ನೂ ಮೃದು ಹಾಸ್ಯದಲ್ಲಿ ತನ್ನ ಜೀವಂತಿಕೆಯಿಂದ ಹೊಳೆಯುವ ವೈನೋದಿಕ ಪಾತ್ರವಾದ ಗುತ್ತಿಯನ್ನೂ ದಲಿತನ ಇರುವ ಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳನ್ನು ಒಟ್ಟಾಗಿ ಬಿಂಬಿಸಬಲ್ಲ ಎರಡು ಸಾಹಿತ್ಯ ಮಾದರಿಗಳೆಂದು ತಿಳಿದು ಮುಂದುವರಿಯುವೆ. ಚೋಮ ತಾನು ಹಾಯಲಾರದ ಗೋಡೆಗಳಿಗೆ ತಲೆ ಚಚ್ಚಿಕೊಂಡು ಸಾಯುತ್ತಾನೆ. ತನ್ನ ಹೋರಾಟದಲ್ಲಿ, ಹಠದಲ್ಲಿ ನಮ್ಮ ಅನುಕಂಪವನ್ನೂ, ಗೌರವವನ್ನೂ ಗಳಿಸಿಕೊಳ್ಳುತ್ತಾನೆ. ತನ್ನ ದುಃಖ ದುಮ್ಮಾನಗಳನ್ನು ಹೇಳಿಕೊಳ್ಳಲು ದುಡಿಯನ್ನು ಉನ್ಮಾದದಲ್ಲಿ ಬಾರಿಸುವ ಚೋಮ,ನಮಗೆ ಗೊತ್ತಿರಬಹುದಾದ ಯಾವ ವಿಶಿಷ್ಟ ಹರಿಜನರಿಗಿಂತಲೂ ದೊಡ್ಡವನು. ಅವನ ಗಾತ್ರ ಹೀಗೆ ವಾಸ್ತವಕ್ಕಿಂತ ಸ್ವಲ್ಪ ದೊಡ್ಡದಾದ್ದು ಎನ್ನಿಸುವುದರಿಂದಲೇ ಅವನು ಎಲ್ಲ ಕಾಲದ, ದೇಶದ ದಲಿತರನ್ನೂ ಪ್ರತಿನಿಧಿಸಬಲ್ಲ ಕಾವ್ಯ ಪ್ರತಿಮೆಯಾಗಿಬಿಡುತ್ತಾನೆ. ಇಂಗ್ಲಿಷಿನಲ್ಲಿ ಹೈ ಮೈಮಟಿಕ್ (high mimetic=ಘನ ಅನುಕರಣೆ?) ಎಂಬ ಬಗೆಯ ಚಿತ್ರಣ ಚೋಮನದು. ನಾಯಿಗುತ್ತಿಯಾದರೋ 'ಲೋ

ಮೈಮಟಿಕ್' (Low mimetic=ಲಘು ಅನುಕರಣೆ?) ಎಂಬ ಬಗೆಯದು. ಇವನು ತಲೆ ಘಟ್ಟಿಸಿಕೊಳ್ಳುವುದಿಲ್ಲ, ಸಿಕ್ಕಿಬೀಳುವುದಿಲ್ಲ; ಇವನಿಗೆ ತಾಳಿ ಬಾಳುವ ಒಳದಾರಿಗಳು ಗೊತ್ತು. ಸ್ಪಷ್ಟ ದಿಟ್ಟ ಗೆರೆಗಳಿಂದ ಕಡೆದು ನಿಲ್ಲಿಸಿದ ಚಿತ್ರ ಚೋಮನದ್ದಾದರೆ, ಗುತ್ತಿ ಮೂಡುವುದು ಹಲವು ದೇಸೀ ನಡೆನುಡಿಗಳ ವಿವರಗಳಲ್ಲಿ. ಚೋಮನನ್ನು ನಾವು ಕಾಣುವುದು ಎಷ್ಟು ಬೇಕೋ ಅಷ್ಟೇ ವಿವರಗಳಲ್ಲಿ; ಎಲ್ಲ ದೇಶ ಕಾಲಗಳ ದಲಿತ ಪ್ರತಿಮೆಯಾಗಲು ಅವನು ಹಾಗೆ ಕಣ್ಣಿಗೆ ಹೊಡೆಯುವಂತೆ ಕಾಣಬೇಕು. ಗುತ್ತಿಯದು ದಟ್ಟವಾದ ಚಿತ್ರಣ; ಅವನನ್ನು ಕಂಡು ನಗುವುದು ಸಾಧ್ಯವಾಗುವುದು ಅವನು ಹೀಗೆ ತೀರಾ ಎನ್ನಿಸುವಷ್ಟು ವಿಶಿಷ್ಟನಾಗುವುದರಿಂದಲೇ. ಚೋಮನಂತೆ ಹರಿಜನರ ಪ್ರತಿನಿಧಿಯೆಂದು ಗುತ್ತಿಯನ್ನು ನಾವು ಗುರುತಿಸುವುದೇ ಆಗಿದ್ದಲ್ಲಿ, ಅವನನ್ನು ಕಂಡು ನಗುವುದು ಕ್ರೌರ್ಯವಾಗಿರುತ್ತಿತ್ತು. ನಗುವವನ ಶ್ರೇಷ«ತೆಯ ಹಮ್ಮಾಗಿರುತ್ತಿತ್ತು. ಬಾಳುವ ಉಪಯೋಗಗಳನ್ನು ತಿಳಿದಿರುವ ಗುತ್ತಿ ನಮ್ಮನ್ನು ನಗಿಸುತ್ತಲೇ ಅವನಂಥವರ ಆಳವಾದ ಪ್ರಕೃತಿದತ್ತ ಚೈತನ್ಯವನ್ನೂ ನಮಗೆ ಹೊಳೆಯುವಂತೆ ಮಾಡುತ್ತಾನೆ _ಗಟ್ಟಿ ಮಾತಲ್ಲಲ್ಲ, ಪಿಸುಮಾತಿನಲ್ಲಿ; ನಿಲುವಲ್ಲಲ್ಲ, ಚಲನೆಯಲ್ಲಿ.

ಈ ಎರಡು ಕ್ರಮಗಳ ಬಗ್ಗೆ ಇನ್ನೂ ಹೇಳುವುದಿದೆ. ನಗಿಸುತ್ತಲೇ ನಮ್ಮನ್ನು ದೃಢಗೊಳಿಸುವ ಕ್ರಮಕ್ಕೆ ಚಾಪ್ಲಿನ್‌ನ 'The Great Dictator' ಅಪೂರ್ವ ಉದಾಹರಣೆ. ಯಹೂದ್ಯರನ್ನು ಸುಟ್ಟು, ಬೇಯಿಸಿ ಅವರ ತಲೆ ಬುರುಡೆಗಳನ್ನು ಆಶ್‌ಟ್ರೇ ಮಾಡಿಕೊಳ್ಳುತ್ತಿದ್ದ ಕಾಲದಲ್ಲೇ ಹಿಟ್ಲರ್‌ನನ್ನು ಹಾಸ್ಯಾಸ್ಪದ ಮಾಡಿದ ಚಾಪ್ಲಿನ್ ನಮಗೆ ಕೊಡುವುದು ಭವ್ಯವಾದ ಆಧ್ಯಾತ್ಮಿಕ ಅನುಭವವನ್ನೇ. ಸಾಹಿತ್ಯ ತನ್ನ ಓದುಗರ ಮಾನವೀಯತೆಯನ್ನು ಪೊರೆದು ಬೆಳೆಸುವುದು, ಆತಂಕಗಳನ್ನು ಗೆಲ್ಲುವ ಕ್ರಮಗಳನ್ನು ಕಲಿಸುವುದು ಹೀಗೆ ಹಲವು ರೀತಿಗಳಲ್ಲಿ. ಕಲೆಗಾರಿಕೆ ಕೇವಲ ಮೆರುಗಲ್ಲ; ಅದು ವಾಸ್ತವದಲ್ಲೆ ನಮ್ಮಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಕಾಪಾಡಬಲ್ಲ ಸಾಧನ. ಅಂದರೆ ಜೀವನದ ಸ್ಪಂದನಶೀಲ ಆರೋಗ್ಯವನ್ನು ಕಾಯುವ ಉಪಾಯ. ಬದುಕಿ ಉಳಿಯುವ ಉಪಾಯವಾಗಿ ದಲಿತರು ಹಾಡುವಾಗ, ಕಥೆ ಕಟ್ಟುವಾಗ, ನಗುವಾಗ, ಕುಣಿಯುವಾಗ ವ್ಯಕ್ತವಾಗುವ ಕಲೆ ಆಧ್ಯಾತ್ಮಿಕವೆನ್ನಬಹುದಾದ ಚೈತನ್ಯದ್ದೇ. ಕಷ್ಟವನ್ನೂ ದುಷ್ಟವನ್ನೂ ಮೀರುವ ಕ್ರಮಗಳು ಹಲವು: ಕ್ರಾಂತಿಕಾರಕವಾದ ಸಮಾಜದ ನೈಜ ಬದಲಾವಣೆಯ ಸಾಧ್ಯತೆಯನ್ನು ಇಲ್ಲೇ,ಈ ಸೋಲಿನ ನಿರಾಶೆಯಲ್ಲೇ ಸಾಧ್ಯವೆಂದೂ ಸಾಧುವೆಂದೂ ತರ್ಕಾತೀತವಾಗಿ ಒಪ್ಪಿಸುವಂತೆ ಮಾಡುವುದು ಹಲವು ಉಪಾಯಗಳನ್ನು ಪಡೆದ ಕಲೆಗಾರಿಕೆ.

ಚೋಮ ಮತ್ತು ಗುತ್ತಿಯರ ಎರಡು ಮಾದರಿಗಳಂತೆ ಪ್ರೇಮ್‌ಚಂದರ 'ಹೆಣದ ಬಟ್ಟೆ'(ಕಫನ್) ಕಥೆಯ ಇನ್ನೊಂದು ಮಾದರಿಯಿದೆ _ ನಮ್ಮನ್ನು ಸಾಮಾಜಿಕ ನ್ಯಾಯಕ್ಕಾಗಿ ಹಂಬಲಿಸುವಂತೆ ಮಾಡುವ ಉಪಾಯವಾಗಿ. ಬಡತನ ಮತ್ತು ಅದರಿಂದ ಹುಟ್ಟುವ ಅತಿ ದೈನ್ಯತೆ ಪ್ರೇಂಚಂದರ ಅಂತ್ಯಜರನ್ನು ಅಮಾನವರನ್ನಾಗಿ ಮಾಡಿದೆ. ಸತ್ತ ಹೆಣ್ಣಿಗೆಂದು ಹೆಣದ ಬಟ್ಟೆಯನ್ನು ಬೇಡಿ ತಂದು, ಅದನ್ನು ಮಾರಿ, ಅವರು ಕುಡಿದು ತಿಂದು ಮೈಮರೆಯುತ್ತಾರೆ. ನಮ್ಮಂತೆ ಮನುಷ್ಯರಾದ ಈ ಇಬ್ಬರು ನಾವು ಪೊರೆಯುವ ವ್ಯವಸ್ಥೆಯಿಂದಾಗಿ ಪಶುಸಮಾನರಾಗುವುದು ಕಂಡು, ಬಡತನ ಎಲ್ಲ ಮಾನವೀಯ ಲಕ್ಷಣಗಳನ್ನೂ ಇಂಗಿಸಬಲ್ಲುದೆಂದು ತಿಳಿದು ನಾವು ಬೆಚ್ಚುತ್ತೇವೆ. ತೀವ್ರ ಮುಜುಗರದಲ್ಲಿ ನಮ್ಮ ಬಗ್ಗೆ ನಾವು ಹೇಸುವಂತೆ ಮಾಡಿ ಪ್ರೇಂಚಂದರು ನಮ್ಮಲ್ಲಿ ಮೌಲ್ಯ ಪ್ರಜ್ಞೆ ಅಂಕುರಿಸುವಂತೆ ಮಾಡುತ್ತಾರೆ. ಈ ಮಾದರಿಯ ಬರವಣಿಗೆಯನ್ನು ಕನ್ನಡದಲ್ಲಿ ನಾನು ಅಷ್ಟಾಗಿ ಕಂಡಿಲ್ಲ. ಹಿಂದಿ ಮತ್ತು ಉರ್ದುವಿನಲ್ಲಿ ಪ್ರೇಂಚಂದರ ಕಥೆ ಒಂದು ವಿಶಿಷ್ಟ ಪ್ರಗತಿಶೀಲ ಪರಂಪರೆಯನ್ನೇ ಬೆಳೆಸಿದೆಯೆಂದು ಕೇಳಿದ್ದೇನೆ. ಚೋಮ, ಗುತ್ತಿಯದಂತೆ ಈ ಬಗೆಯೂ ಮಹತ್ವದ್ದೆಂದು ಗುರುತಿಸಲು ಮಾತ್ರ ಪ್ರೇಂಚಂದರನ್ನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ.

ಮೇಲಿನ ದೀರ್ಘ ಪ್ರಸ್ತಾವನೆಯ ಉದ್ದೇಶ: ದೇವನೂರ ಮಹಾದೇವರ ಅಪೂರ್ವ ಶೋಭೆಯ ಕಥಾನಕವಾದ 'ಒಡಲಾಳ'ದ ಅಧ್ಯಯನಕ್ಕಾಗಿ ಒಂದು ಚೌಕಟ್ಟನ್ನು ನಿರ್ಮಿಸಿಕೊಳ್ಳುವುದು. ಲೀವಿಸ್ ಎಂಬ ವಿಮರ್ಶಕ, ಹಾಪ್‌ಕಿನ್ಸ್ ಎಂಬ ಇಂಗ್ಲಿಷ್ ಕವಿಯ ಬಗ್ಗೆ ಬರೆಯುತ್ತಾ ಅವನ ಒಂದು ಪದ್ಯದಲ್ಲಿ ಟೆಕ್ನಿಕಲ್ ಟ್ರಯಂಫ್ (technical triumph=ರೀತಿಯ ಜಯ) ಎಂಬುದೇ ಸ್ಪಿರಿಚುಯಲ್ ಟ್ರಯಂಫ್(spiritual triumph=ಆಧ್ಯಾತ್ಮಿಕ ಜಯ) ಆಗುತ್ತದೆ ಎನ್ನುತ್ತಾನೆ. ಕವಿಯ ಮನಸ್ಸಲ್ಲಿ ಒಂದು ತೀವ್ರ ತಳಮಳವೆದ್ದಿದೆ. ಅದನ್ನು ಅವನು ಗೆಲ್ಲಬೇಕಾಗಿದೆ. ಗೆದ್ದು ಬರೆಯುವುದಲ್ಲ, ಗೆಲ್ಲಲೆಂದೇ ಬರೆಯುವುದು ಅವನ ಕ್ರಮ; ಹಾಗೆ ನೋಡಿದರೆ ಎಲ್ಲ ದೊಡ್ಡ ಲೇಖಕರ ಕ್ರಮ ಅದೇ. ಹಾಗಾದ್ದರಿಂದಲೇ ಬರೆದುಕೊಳ್ಳುವ ಕ್ರಮ ಸಾಹಿತ್ಯದ ರೀತಿಯ ಪ್ರಶ್ನೆ ಮಾತ್ರವಾಗದೆ, ತನ್ನ ಮನಸ್ಸಿನ ತಳಮಳವನ್ನು ಗೆಲ್ಲುವ ಕ್ರಮವೂ ಆಗಿಬಿಡುತ್ತದೆ. ದೇವನೂರರ 'ಒಡಲಾಳ'ದ ಭಾಷಾ ಪ್ರಯೋಗ, ಕಥನ ಕ್ರಮಗಳಿಗೆ ಅಪೂರ್ವ ಶೋಭೆ ಉಂಟಾಗುವುದು ಲೇಖಕನಿಗೆ ಬರೆಯುವ ಕ್ರಿಯೆಯೇ ನೈತಿಕ ಕ್ರಮವೂ ಆಗಿದೆ ಎಂದು ನಮಗೆ ಅನ್ನಿಸುವುದರಿಂದ. ಇರುವುದನ್ನು ಇದ್ದಂತೆಯೇ ಸ್ವೀಕರಿಸುವ ಪ್ರಕ್ರಿಯೆಯಲ್ಲಿ ಪ್ರೀತಿ ಹುಟ್ಟುವುದು, ಹೀಗೆ ಪ್ರೀತಿಗೆ ಪಾತ್ರರಾದ ಜನಗಳು

ಶೋಭಾಯಮಾನರಾಗುವುದು 'ಒಡಲಾಳದ'ದ ಕ್ಷುಲ್ಲಕವೆನ್ನಿಸಬಹುದಾಗಿದ್ದ ದೈನಿಕ ಜಗಳ ಮತ್ತು ಚೌರ್ಯದ ಕಥೆಯಲ್ಲಿ ಸಾಧ್ಯವಾಗಿದೆ. ಇದೊಂದು ಬೆರಗು ಹುಟ್ಟಿಸುವ ಯಶಸ್ಸು ಎನ್ನಬಹುದು.ಇದನ್ನು ಸಾಧ್ಯವಾಗಿಸಿದ್ದು ಲೇಖಕರ ನೋಟ, ಅಂದರೆ ನೋಡುವ, ಅರಿಯುವ ಕ್ರಮ; ತೋರಿಕೆಗೆ ಕ್ಷುಲ್ಲಕವಾಗಿ ಕಾಣುವುದರಲ್ಲೂ ಚೈತನ್ಯವನ್ನು ಗುರುತಿಸುವ ಶಕ್ತಿ. ಸ್ವತಃ ಹರಿಜನ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದು ವಿದ್ಯಾವಂತರಾದ ಮಹಾದೇವರಂಥ ಲೇಖಕರೊಬ್ಬರು, ತಾವು ಹುಟ್ಟಿದ ತಾಣದಿಂದ ಅನಿವಾರ್ಯವಾಗಿ ದೂರವಾಗುತ್ತಿರುವಾಗ ಈ ಕಥಾನಕವನ್ನು ಬರೆದಿದ್ದಾರೆಂಬುದನ್ನು ಗಮನಿಸಿದಲ್ಲಿ, ಈ ಬರೆಯುವ ಪ್ರಕಿಯೆಯೇ ಅವರಿಗೆ ಕಳೆದುಕೊಳ್ಳುತ್ತಿರುವುದನ್ನು ಮತ್ತೆ ಪಡೆದುಕೊಳ್ಳುವ, ತನ್ನ ಜನದ ಬಗ್ಗೆ ಮತ್ತೆ ಪ್ರೀತಿಯನ್ನು, ಸಲಿಗೆಯನ್ನು ಗಳಿಸಿಕೊಳ್ಳುವ ಕ್ರಿಯೆಯಾಗಿದೆ ಎನ್ನಿಸುತ್ತದೆ. ಬೆಂಕಿಯ ಸುತ್ತಾ ಕೂತು ಕಡಲೆಕಾಯಿಯನ್ನು ತಿನ್ನುತ್ತ ಹರಿಜನ ಕುಟುಂಬ ಬೆಂಕಿಯ ಪ್ರಭೆಯಲ್ಲಿ ಹೊಳೆಯುವಾಗ, ಗೌರಿ ಚಿತ್ರಿಸಿದ ನವಿಲು ಕುಣಿಯುವಾಗ, ಸಾಕವ್ವ ಮೂರನೇ ಕ್ಲಾಸಿನ ಶಿವೂಗೆ ಕಥೆ ಹೇಳುವಾಗ, ಪೋಲೀಸ್ ಕಾನ್ಸ್‌ಟೇಬಲ್ ರೇವಣ್ಣ ಉಚ್ಚೆ ಹೊಯ್ಯುವುದನ್ನು ಕಂಡು ಹರಿಜನ ಹೆಂಗಸರು ನಗುವಾಗ, ಲೇಖಕರು ಈ ಪಾತ್ರಗಳ ಬಗ್ಗೆ ಅನುಭವಿಸುವ ಪ್ರೀತಿ ನಮ್ಮದೂ ಆಗುತ್ತದೆ. ಅವರೂ ನಾವೂ ಒಂದಾಗುತ್ತೇವೆ; ಕರುಣೆಯಲ್ಲಲ್ಲ, ತಾದಾತ್ಮ್ಯದಲ್ಲಿ. ಹೊಟ್ಟೆಪಾಡಿನ ರಿಕ್ತವಾದ ಅರ್ಥವ್ಯವಸ್ಥೆಯಲ್ಲಿ(Subsistence economy) ಹೇಗೋ ಬದುಕುವ, ಕದ್ದಾದರೂ ಬಾಳುವ ಉಪಾಯಗಾರರಾದವರು ಮಾನವನ ಅದಮ್ಯ ಚೈತನ್ಯಕ್ಕೆ ಉದಾಹರಣೆಗಳಾಗುತ್ತಾರೆ.

ಅಂದರೆ 'ಒಡಲಾಳ' ಹೀಗೆ ಖುಷಿಪಡಿಸಿ ತಣಿಸುವ ಕೃತಿ ಮಾತ್ರವಾಗಿದ್ದರೆ ಅದು ದೋಷಯುಕ್ತವಾಗಿಬಿಡುತ್ತಿತ್ತು. ವೈಭವೀಕರಿಸುವ ಬರವಣಿಗೆಯ ಕ್ರಮ ಅಹಿತವಾದದ್ದನ್ನು ಮರೆಸುತ್ತದೆ. ಹಾಗಾಗುವ ಅಪಾಯದಿಂದ 'ಒಡಲಾಳ' ತಪ್ಪಿಸಿಕೊಂಡಿದೆ. ಒಂದು ಸಿಪ್ಪೆಯೂ ಪೋಲಿಸರಿಗೆ ಸಿಗದಂತೆ ಕಡಲೇಕಾಯಿಯನ್ನು ತಮ್ಮ ಒಡಲಿನ ಉರಿಯಲ್ಲಿ ಜೀರ್ಣಿಸಿಕೊಂಡ ಉಪಾಯಗಾರರ ಹಿರಿಯವ್ವನಾದ ಸಾಕವ್ವ ತನ್ನ ಇನ್ನೊಂದು ಹುಂಜವನ್ನೂ ಪೋಲೀಸರಿಗೆ ಕಳೆದುಕೊಂಡು ಪೆಚ್ಚಾಗುತ್ತಾಳೆ. ಪೋಲೀಸರು ತಪಾಸಣೆ ಮಾಡುವ ಸಾಕವ್ವನ 'ನಾಕುಕಂಬದ ತೊಟ್ಟಿ ಹಟ್ಟಿ'ಯಲ್ಲಿ "ಗೋಡೆಯ ದೊಡ್ಡ ಮೊಳೇಲಿ ನೂಲೊ ರಾಟೆಯ ಕತ್ತಿಗೆ ಹಗ್ಗ ಬಿಗಿದು ನೇಣಾಕಿತ್ತು"ಎಂಬ ಒಂದು ವಿವರ ಕಾಣಿಸಿಕೊಳ್ಳುತ್ತದೆ. ಇದು ಅತ್ಯಂತ ಮಹತ್ವದ ವಿವರ. ಹೊಟ್ಟೆಪಾಡಿನ ಸಬ್‌ಸಿಸ್ಟೆನ್ಸ್ ಅರ್ಥವ್ಯವಸ್ಥೆಯಲ್ಲೂ ದುಡಿಮೆಯ ಮಾರ್ಗವನ್ನು ಕೊಟ್ಟಿದ್ದ ರಾಟೆ ನಿಷ್ಪ್ರಯೋಜಕವಾಗಿದೆ. ಬೆಳವಣಿಗೆಯನ್ನು ಕಳೆದುಕೊಂಡ ರೋಗಿಷ್ಟ ಬಾಲಕ ಸದಾ ದುಪಟಿ ಹೊದ್ದ 'ದುಪಟಿ ಕಮೀಷನರ್' ಆಗಿದ್ದಾನೆ. ಬಡತನ ಮತ್ತು ನಿರುದ್ಯೋಗ ದಲಿತರನ್ನು ಹಿಂಡಿ ಹಿಪ್ಪೆ ಮಾಡಿದೆ; ಆದರೂ ಅವರು ಜ್ವಲಿಸಬಲ್ಲವರಾಗಿ ಉಳಿದಿದ್ದಾರೆ. 'ಲೋ ಮೈಮೆಟಿಕ್'ನ ವೈನೋದಿಕ ಕ್ರಮದ ಬರವಣಿಗೆ, ಇರುವ ಸ್ಥಿತಿಯನ್ನೂ, ಅಂತರ್ಗತ ಸಾಧ್ಯತೆಯನ್ನೂ ಹೀಗೆ ಒಟ್ಟಾಗಿ ಬಿಂಬಿಸುತ್ತದೆ. ಕಥಾನಕ ಕೊಡುವ ಖುಷಿ ನಮ್ಮನ್ನು ತಣಿಸುವಂಥದಲ್ಲ; ನಮ್ಮ ಏಕಾಗ್ರ ಗಮನವನ್ನು ಕಥೆಯ ಲೋಕಕ್ಕೆ ಉತ್ಕರ್ಷದಲ್ಲಿ ಒದಗಿಸಿ ಕೊಡುವಂಥದ್ದು. ಎಂಥ ಸ್ಥಿತಿಯಲ್ಲೂ ಹರಿಜನರು ಎಷ್ಟು ಜೀವಂತವಾಗಿದ್ದಾರೆ ಎಂದು ನಮಗೆ ಅನ್ನಿಸುತ್ತಿರುವಂತೆಯೇ, ಅವರನ್ನು ಅವುಕಿರುವ ದಾರಿದ್ರ್ಯ ಮಾಯವಾದಲ್ಲಿ ಅವರ ಶಕ್ತಿ ಎಷ್ಟು ಅಪಾರ ಸಾಧ್ಯತೆಗಳನ್ನು ಪಡೆದಿರುವಂಥದ್ದು ಎಂದು ನಮಗೆ ಅನ್ನಿಸುವಂತೆ ಕಥಾನಕ ನಮ್ಮ ಗಮನವನ್ನು ಪ್ರಚೋದಿಸುತ್ತದೆ. ನಮ್ಮ ಚೈತನ್ಯ ಹೀಗೆ ಹೆಚ್ಚದ ಹೊರತು ಕ್ರಾಂತಿಕಾರತೆ ಹೇಗೆ ತಾನೇ ಸಾಧ್ಯವಾದೀತು? ಹೇಗೋ ಜೀವವುಳಿಸಿಕೊಂಡು ಸಾಯದಂತೆ ಬದುಕಿರುವವರ ಸರ್ವೈವಲ್‌ನ ಕಥೆಯೊಂದು, ಮನುಷ್ಯ ಚೈತನ್ಯ ಅದಮ್ಯವೆಂಬ ಪಾರಮಾರ್ಥಿಕ ಅನುಭವವನ್ನು ಕೊಡುವ ಮೂಲಕ ಓದುಗರ ಕ್ರಾಂತಿಯ ಅಪೇಕ್ಷೆಯನ್ನು ಹೇಗೆ ಕುದುರಿಸುತ್ತದೆಂಬುದನ್ನು_ 'ಲೋ ಮೈಮೆಟಿಕ್'ಕ್ರಮದಲ್ಲಿ ಅದನ್ನು ಹೇಗೆ ಸಾಧಿಸುತ್ತದೆಂಬುದನ್ನು_ ಇನ್ನಷ್ಟು ಪರಿಶೀಲಿಸೋಣ.

ಮನುಷ್ಯನ ಅಸ್ತಿತ್ವಕ್ಕೇ ಅಡಿಪಾಯವಾದ 'ಕಾಮ' ಮತ್ತು 'ಪಾಲನೆ' ಗಳಲ್ಲಿ ಕಾಮದ ಮಹತ್ವವನ್ನು ಮನಗಾಣಿಸುವ ಎಷ್ಟೋ ಕನ್ನಡ ಕೃತಿಗಳಿವೆ. ಆದರೆ 'ಪಾಲನೆ'ಯನ್ನೇ ಕೇಂದ್ರವಸ್ತುವಾಗಿ ಪಡಕೊಂಡ ಈಚಿನ ಮುಖ್ಯ ಕೃತಿಯೆಂದರೆ 'ಒಡಲಾಳ'. ಸಂಸಾರ, ಸಮಾಜ, ಪ್ರಭುತ್ವ, ಒಟ್ಟಿನಲ್ಲಿ ಮಾನವನ ನಾಗರಿಕತೆ ಮತ್ತು ಸಂಸ್ಕೃತಿ_ ಇವುಗಳಿಗೆ ಪ್ರೇರಕವಾದ ಶಕ್ತಿಯೆಂದರೆ ಮಾನವನಲ್ಲಿರುವ ಪಾಲನೆಯ ಪ್ರವೃತ್ತಿ. ಸಾಮಾಜಿಕ ವ್ಯವಸ್ಥೆಯೊಂದು ವಿನಾಶಕಾರಿಯಾಗಿದೆಯೆಂದು ನಮಗೆ ಅನಿಸುವುದು ಮನುಷ್ಯನಿಗೆ ಸಹಜವಾದ 'ಪಾಲನೆ'ಗೆ ಅದು ಅಡ್ಡಿಯನ್ನುಂಟು ಮಾಡಿದಾಗ. ಮಕ್ಕಳನ್ನು ಬೆಳೆಸುವುದು, ಓದಿಸುವುದು, ವಂಶಾಭಿವೃದ್ಧಿಗೆ ಹಾತೊರೆಯುವುದು, ಆಸ್ತಿಗಾಗಿ ಆಸೆಪಡುವುದು_ ಎಲ್ಲವುದಕ್ಕೂ ತಳದಲ್ಲಿರುವುದು 'ಪಾಲನೆ'ಯ ಪ್ರವೃತ್ತಿಯೇ. ನಮ್ಮ ನೈತಿಕತೆಯ ಉಗಮವಿರುವುದೂ ಈ 'ಪಾಲನೆ' ಯಲ್ಲೇ. 'ಒಡಲಾಳ'ದ ಸಾಕವ್ವನ

ಮೂಲಕ, ಅವಳ ಹೆಸರಿನಿಂದಾಗಿ ಕೂಡ, ನಮ್ಮ ಗಮನವನ್ನೆಲ್ಲ ದುಡಿಸಿಕೊಳ್ಳುವುದು ಹೇಗೆ ಒಂದು ರಿಕ್ತ ಹೊಟ್ಟೆ ಪಾಡಿನ ಅರ್ಥವ್ಯವಸ್ಥೆಯಲ್ಲೂ ಈ ಪಾಲನೆಯ ಕ್ರಿಯೆ ನಡೆದುಕೊಂಡು ಬಂದಿದೆ ಎಂಬುದು.

ತಾನು ಸಾಕಿದ ಒಂದು ಹುಂಜ (ಅದು ದೇವರಿಗೆ ಬಿಟ್ಟುದ್ದೆಂಬುದು ಅರ್ಥಪೂರ್ಣ)ಉಳಿದವರಿಗೆ ಯಃಕಶ್ಚಿತ್ ಎನ್ನಿಸುತ್ತಿದ್ದರೂ ಕಳೆದುಹೋಯಿತೆಂದು ಹಂಬಲಿಸುವ ಸಾಕವ್ವ ನಮ್ಮನ್ನು ಪಾಲನೆಯ ಹಲವು ಮಜಲುಗಳ ಬಗ್ಗೆ ವೈನೋದಿಕವಾಗಿ ಚಿಂತಿಸುವಂತೆ ಮಾಡುತ್ತಾಳೆ. (ಹುಂಜದ ಮೂಲಕ ಪಾಲನೆಗೂ ದೈವೀಕ ಕಲ್ಪನೆಗೂ ಇರುವ ಸಂಬಂಧ ಸಾಕವ್ವನ ಪ್ರಜ್ಞೆಯಲ್ಲಿ ವ್ಯಕ್ತವಾಗುತ್ತದೆ.) "ಚರುಮಗಳು ಸ್ವತಂತ್ರವಾಗಿ ಅಲ್ಲಾಡುವ"ಸಾಕವ್ವ ತನ್ನ ವೃದ್ಧಾಪ್ಯದಲ್ಲಿ ಸಾವಿಗೆ ಹತ್ತಿರವಾದವಳು. ಆದರೂ ಅವಳ ಛಲ ಅದಮ್ಯವಾದದ್ದು. ಸವುತಿ ಕೆಂಪಮ್ಮನ ಬಗ್ಗೆ ಅವಳು ಅಂದುಕೊಳ್ಳುವುದು, ಕಡಲೆಕಾಯನ್ನು ತಿನ್ನುವಾಗ ನೆರೆಮನೆಯ ಕಾಳಕ್ಕನಿಗೆಂದು ಸೊಸೆ ಎತ್ತಿಕೊಂಡ ನಾಲ್ಕು ಬೊಗಸೆಯಲ್ಲಿ ಒಂದು ಬೊಗಸೆ ತೆಗೆದು ಗುಡ್ಡೆಗೆ ಹಿಂದಿರುಗಿಸುವುದು, ಕಳೆದ ಹುಂಜಕ್ಕಾಗಿ ಅವಳು ಗೋಳಿಡುವುದು, ಮಣ್ಣೆರಚುತ್ತಾ ಶಾಪ ಹಾಕುವುದು, ಮಗ ಸೊಸೆಯರ ಜೊತೆ ಆಸ್ತಿಗಾಗಿ ವ್ಯಾಜ್ಯಮಾಡುವುದು-- ಈ ಎಲ್ಲದರಲ್ಲೂ ನಮಗೂ, ಅವಳ ಸುತ್ತಲಿನವರಿಗೂ ಕೂಡ, ವಿನೋದವೆನ್ನಿಸುವ ಅತಿಯಿದೆ. ಆದರೆ, ಅವಳ ಈ ಹಠದ ಇನ್ನೊಂದು ಮುಖವೇ 'ಪಾಲನೆ'ಯಾಗಿದೆ. ಸೊಸೆ ಚೆಲುವಮ್ಮನ ಜೊತೆ ಆಸ್ತಿ ತನ್ನದು 'ಸ್ವಾರ್ಜಿತ'ಎಂದು ಜಗಳವಾಡುವಾಗಲೂ ಚೆಲುವಮ್ಮನ ಕೂಸು ಅವಳ ಜೊತೆ ಆಡುತ್ತಿರುತ್ತದೆ. ತನಗೆ ತಿನ್ನಲು ಕುಡಿಯಲು ಕೊಟ್ಟಿದ್ದನ್ನು ಅವಳು ಯಾವಾಗಲೂ ಮಕ್ಕಳ ಜೊತೆ ಹಂಚಿಕೊಳ್ಳುತ್ತಾಳೆ. ಅವಳು ಸೊಸೆ ಜೊತೆ ಜಗಳವಾಡುವ ಕ್ರಮ ಕೂಡ ಅವಳು ತನ್ನ ಪ್ರೀತಿಯನ್ನೂ ಪಾಲನೆಯ ಕಾಳಜಿಯನ್ನೂ ವ್ಯಕ್ತಗೊಳಿಸುವ ಒಂದು ಕಟುವಾದ ರೀತಿಯೇ ಆಗಿಬಿಡುತ್ತದೆ. ಹಟ್ಟಿ, ಹೊಲದ ಮಾತೇ ತುಂಬಿರುವ ಈ ಜಗಳದಲ್ಲಿ ಚೆಲುವಮ್ಮನ ಕೈಗೂಸು ಅಜ್ಜಿಯ ಸುತ್ತಾ ಆಡುತ್ತಿರುತ್ತದೆ.ಹೇಗಾದರೂ ಬಾಳುವುದೊಂದೇ ಮೌಲ್ಯವೆನ್ನುವಂತೆ, ತೀರಾ ಈ ಮಣ್ಣಿಗೆ ಸೇರಿದವಳು ತಾನೆಂಬುವಂತೆ ಸಾಕವ್ವ ಮಾತಾಡುತ್ತಾಳೆ. ಪುಟಗೌರಿ ಬರೆದ ನವಿಲಿನಿಂದ ಖುಷಿಯಾದ ಶಿವೂ ಅಜ್ಜಿಯನ್ನು ಕರೆದು ಅದನ್ನು ತೋರಿಸಬೇಕೆಂದಾಗ "ತಗಾ ಅದ್ಯಾರೋ ಒಬ್ಬಳು ಕುಟ್ಟ ಬತ್ತ ಬುಟ್ಟು ಹುಟ್ಟೋ ...... ನೋಡ್ಕತ್ತಿದ್ಲಂತೆ"ಎನ್ನುತ್ತಾಳೆ. ಆದರೆ ಮಾತ್ರ, ಯಾವ ನಿರುಪಯುಕ್ತ ಸೊಗಸಿಗೂ ಜಾಗವಿಲ್ಲವೆನ್ನುವಂತೆ ಹೊಟ್ಟೆಪಾಡಿನ ಕಾಯಕಜೀವಿಯಾದ ಇದೇ ಸಾಕವ್ವ ತನ್ನ ಪರದಾಟಗಳ ಪ್ರಪಂಚವನ್ನೂ ಮೀರಿ ಮಾತಾಡುವಾಗ ತತ್ವಜ್ಞಾನಿಯಾಗಿಬಿಡುತ್ತಾಳೆ: ಯಮಧರ್ಮರಾಜನ ಕತೆಹೇಳುವ ಪ್ರಸಂಗದಲ್ಲಿ ಮೂರನೇ ಕ್ಲಾಸಿನ ಶಿವೂನಲ್ಲಿ ಅವಳು ಕಾಣುವ ಭವಿಷ್ಯದ ಕನಸು, ತನ್ನ ಹೋರಾಟದ ಜೀವನವನ್ನು ಅವಳು ನಿರುದ್ವಿಗ್ನಳಾಗಿ ಭಾವಿಸುವ ರೀತಿ, 'ಒಡಲಾಳ'ದ ಬರವಣಿಗೆಯ ಎಲ್ಲ ಚೆಲುವನ್ನು ಸಾರವಾಗಿ ಪಡೆದುಕೊಂಡಿದೆ. ಮಹಾದೇವರ ಭಾಷೆಗೆ ಇರುವ ಕಾವ್ಯ ಚೈತನ್ಯಕ್ಕೆ ಇದೊಂದು ಅತ್ಯುತ್ತಮ ಉದಾಹರಣೆ. ಸಾಕವ್ವನ ದುಡಿಮೆ, ಜೀವನದ ದೈನಿಕ ಬವಣೆ ಹೇಗೆ ಮೌಲಿಕವಾದ ಜೀವನ ದೃಷ್ಟಿಯಾಗಿ ರೂಪಾಂತರವಾಗುತ್ತದೆ ಗಮನಿಸಿ. ಹೆಗೆಲ್ ಹೇಳುವಂತೆ ದೈನಿಕದ ಒಡಲಲ್ಲೇ ಗುಣಾತ್ಮಕವಾದ ಪುರಾಣ ಸೃಷ್ಟಿಯಾಗುವ ಕ್ರಮ(Quantitative change becomes qualitative change) ಇಲ್ಲಿದೆ. ಈ ಪುರಾಣ ಸೃಷ್ಟಿಯ ಮೂಲವಿರುವುದು ಸಾಕವ್ವನ ಪಾಲನೆಯ ಛಲದಲ್ಲಿ. ಈ ಪ್ರಸಂಗದಲ್ಲಿ ಮೂರನೇ ಕ್ಲಾಸಿನ ಶಿವೂ ಕಣ್ಣಿಂದ ಸಾಕವ್ವನನ್ನು ನೋಡುವುದರಿಂದಾಗಿ (ಭಾಷೆಯಲ್ಲಾಗುವ ಬದಲಾವಣೆಯನ್ನು ಗಮನಿಸಿ) ಸಾಕವ್ವ ಒಂದು ಪುರಾಣ ಪಾತ್ರವಾಗುತ್ತಾಳೆ. ನವಿಲು ಬರೆದ ಪುಟಗೌರಿಯ ಜೊತೆ ಮಿಲನವಾಗುತ್ತಾಳೆ.ಕಥಾನಕದ ವೈನೋದಿಕ ಧಾಟಿಯಿಂದಾಗಿ ಸಾಕವ್ವ ಯಮನನ್ನೂ ಎದುರಿಸುವುದು ನಮ್ಮ ಭಾವನೆಗೆ ಹೊರೆಯಾಗದಂತೆ ಅವಳ ಒಟ್ಟು ಜೀವನದ ಮೇಲೆ ವಿಶೇಷವಾದ ಪ್ರಭೆಯನ್ನು ಚೆಲ್ಲುತ್ತದೆ. ಕೊನೇಲಿ ಅವಳು ಶಿವೂನ ಧ್ಯಾನ ಮುರುದು 'ಈಗ ನನ್ನುಂಜನ ನೋಡ್ಕಂಬರವ. ಬಾ ಕೂಸು' ಎನ್ನುವುದಂತೂ ಇಡೀ ಕಥೆ ಅವಳ ಹುಂಜದ ತಪಾಸಣೆಗೆ ('ಪಾಲನೆ'ಗೆ) ಶಿವೂನನ್ನು ಬಳಸುವ ಉಪಾಯವಾಗುತ್ತದೆ. ದೈನಿಕದ ಇಕ್ಕಟ್ಟಿನಲ್ಲೇ ಅವಳ ಕಲ್ಪನೆ ಮೊಳೆಯುತ್ತದೆ. ಕಥೆಯುದ್ದಕ್ಕೂ ಅವಳಲ್ಲಿ ಕಾಣುವ ಜಗಳಗಂಟಿತನ, ದಿಟ್ಟತನ, ಜಿಗುಟುಗಳು ವಂಶ ಪಾಲನೆಗೆ ಅಗತ್ಯವಾದ ಗುಣಗಳಾಗಿ ಕಾಣುತ್ತವೆ. ಹೀಗೆ ನಾವು ನಮ್ಮ ಜಗತ್ತಿನಲ್ಲಿ ನೆಗೆಟಿವ್ ಎಂದುಕೊಳ್ಳುವ ವಿಷಯಗಳು _ ಜಗಳಗಂಟಿತನ, ಜಿಪುಣತನ, ಚೌರ್ಯ ಇತ್ಯಾದಿ _ ಹೊಟ್ಟೆಪಾಡಿನ ಅರ್ಥವ್ಯವಸ್ಥೆಯಲ್ಲಿ ಪಾಸಿಟಿವ್ ಮೌಲ್ಯಗಳನ್ನು ಪೋಷಿಸುವ ಉಪಾಯಗಳಾಗುತ್ತವೆ.

ಫೆಲನಿಯ ಸಿನಿಮವೊಂದರಲ್ಲಿ ಊರಿನೊಳಗೆ ಹಠಾತ್ತನೆ ಬಂದು ನಮ್ಮನ್ನು ಬೆರಗುಗೊಳಿಸುವ ನವಿಲಿನಂತೆ 'ಒಡಲಾಳದ' ರಿಕ್ತ ಪ್ರಪಂಚದೊಳಗೆ ಪುಟಗೌರಿ ಗೋಡೆಯ ಮೇಲೆ ನವಿಲು ಬರೆಯುತ್ತಾಳೆ. 'ಶಿವೂ ತಲೆ ಎತ್ತಿ ನೋಡಿದರೆ ನಡುಮನೆ ಗೂಡ ಬಲಪಕ್ಕದಲ್ಲಿ ನೀಲಿಲಿ ಮೂಡಿದ್ದ ನವುಲು ಶಿವೂನ ನೋಡ್ತಾ ಕುಣೀತಿತ್ತು'. ನಂತರ ಪೋಲಿಸರು ಸಾಕವ್ವನ ಹಟ್ಟಿಯನ್ನು ತಪಾಸಣೆ ಮಾಡುವಾಗ 'ಯಾವ ಜಪ್ತಿಗೂ ಸಿಗದೆ ಗೋಡೆ ಮೇಲಿನ ನವುಲುಗಳು

ಕುಣಿಯುತ್ತಿದ್ದವು'. ಶಿವೂ, ಪುಟಗೌರಿ, ವಾಚು ಕಟ್ಟಿದ ಗುರುಸಿದ್ದು, ಸಿಪ್ಪೆ ಸಿಗದ ಹಾಗೆ ಕಡಲೆಕಾಯನ್ನು ತಿಂದುಬಿಡುವ ಎಲ್ಲರೂ ಬೇರೆ ಬೇರೆ ಬಗೆಗಳಲ್ಲಿ ಈ ಹಟ್ಟಿಯೊಳಗಿನ ಬದುಕಿನ ಕಾರ್ಪಣ್ಯವನ್ನು ಮೀರಬಲ್ಲ ಶಕ್ತಿ ಪಡೆದಿದ್ದಾರೆ. ಗುರುಸಿದ್ದು ಹೋಟೆಲಿಗೆ ನುಗ್ಗಿ ಕಾಸು ಬಿಸಾಕಿ 'ದೋಸೆ ಟೀ ಕೊಡ್ರಿ' ಎಂದು ರಾಜಕೀಯವಾಗಿಯೇ ದಲಿತ ಸ್ಥಿತಿಯನ್ನು ಮೀರಬಲ್ಲವನು. (ಕಡಲೇಕಾಯಿ ತಿನ್ನುತ್ತಾ ಬೆಂಕಿ ಎದುರು ಇಡೀ ಹಟ್ಟಿ ಸೇರಿದಾಗ ಇವನೇ 'ಸಹವೀರ್ಯಂ ಕರವಾವಹೈ' ಕ್ರಿಯೆಗೆ ಕುಮ್ಮಕ್ಕು ಕೊಡುವವನು.) ವಂಶದ ಪಾಲನೆಯಲ್ಲಿ ಜೀವ ಸವೆಸಿದ ಸಾಕವ್ವ ನೋವನ್ನು ಉಂಡವಳಾದ್ದರಿಂದ ಯಮನಿಗೇ ಸವಾಲು ಹಾಕಬಲ್ಲವಳಾಗಿ ತನ್ನ ಸ್ಥಿತಿಯನ್ನು ಮೀರುವವಳು. 'ಒಡಲಾಳ'ದ ಕಥಾನಕ ಹೀಗೆ ತನ್ನ ಮಿತಿಗಳ (Necessity)ಇಕ್ಕಟ್ಟಿನ ಪ್ರಪಂಚದಲ್ಲೇ ಸ್ವಾತಂತ್ರ್ಯ (Freedom)ವನ್ನು ಸೂಚಿಸುತ್ತದೆ. ಕಥೆಯ ದಾಟಿ ವೈನೋದಿಕದಾದ್ದರಿಂದ ಭಾವನೆಗಳನ್ನು ಒಂದರ ಮೇಲೊಂದು ಪೇರಿಸಿ, ಶೃಂಗಸ್ಥಿತಿ ಮುಟ್ಟಿಸಿ, ಕಥೆಯನ್ನು ಕೊನೆಯಲ್ಲಿ ಮುಕ್ತಾಯಕ್ಕೆ ತರುವ ಅಸಹಜ ಒತ್ತಡ ಲೇಖಕನ ಮೇಲಿಲ್ಲ. ಅಥವಾ ಅಂಥ ಮುಕ್ತಾಯದ ಅಪೇಕ್ಷೆಯೂ ನಮ್ಮಲ್ಲಿ ಹುಟ್ಟುವುದಿಲ್ಲ. ನಿಜಜೀವನದಲ್ಲಿ ನಾವು ಕಾಣದ ಕ್ರಾಂತಿಕಾರತೆಯನ್ನಾಗಲೀ, ಸಮಸ್ಯೆಗೆ ಉತ್ತರವನ್ನಾಗಲೀ ಕಥೆಯಲ್ಲಿ ಕೊಡಬೇಕಾದ ತಾತ್ವಿಕ ಬಿಕ್ಕಟ್ಟಿಗೆ ಲೇಖಕ ಒಳಗಾಗಲ್ಲ. ನಮ್ಮಲ್ಲಿ ಪ್ರೀತಿಯನ್ನು ಹುಟ್ಟಿಸುವ ಮೂಲಕ ನಮ್ಮ ಅರಿವನ್ನು ಬದಲಾಯಿಸಿ ಹಿಗ್ಗಿಸುವ ಕೆಲಸವನ್ನು ಮಹಾದೇವರ ಕಥನ ಕ್ರಮ ಮಾಡುತ್ತದೆ. ಪ್ರತಿಯೊಬ್ಬರೂ ಕಥೆಯಲ್ಲಿ ಒಂದಲ್ಲ ಒಂದು ಬಗೆಯ ಕನಸುಗಾರರಾಗಿಯೇ ಬೆಳೆಯುತ್ತಾರೆ. ಸಾಹುಕಾರ್ ಎತ್ತಪ್ಪನವರ ಸಮೃದ್ಧಿಯೂ ಇವರ ಕನಸುಗಾರಿಕೆಗೆ ಪುಷ್ಟಿಕೊಡುತ್ತದೆ. ಅವರ ಹೊಲದ ಕಡಲೇಕಾಯಿ ಅವರ ಜಠರಾಗ್ನಿಯಲ್ಲಿ ನಿರ್ನಾಮವಾಗುತ್ತದೆ. ಸ್ಥಿತಿಯಲ್ಲೇ ಸಾಧ್ಯತೆ ಹೀಗೆ ಬಿಂಬುತ್ತದೆ.

ಕಥೆಯ 'ಇಹ'ದಲ್ಲಿ 'ಪರ' ಎಂದು ಅನ್ನಿಸುವುದು 'ಯಾವ ಜಪ್ತಿಗೂ' ಸಿಗದಂತೆ ಹಟ್ಟಿಯ ಗೋಡೆ ಮೇಲೆ ಕುಣಿಯುತ್ತಿರುವ ನವಿಲುಗಳು. ಓದುತ್ತಿರುವ ಶಿವೂ ಬಿಟ್ಟು ಉಳಿದೆಲ್ಲರ ಅವಜ್ಞೆಗೆ ಒಳಗಾಗುವ ಈ ನವಿಲುಗಳು ಕಥೆಯ ಲೋಕದಲ್ಲೇ ಹುಟ್ಟಿಯೂ ಆ ಲೋಕ ಬಿಟ್ಟು ನಿಲ್ಲುತ್ತದೆ ಎನ್ನಿಸಬಹುದಾದರೂ, ಕಥೆಯ ಲೋಕದ ದೈನಿಕಗಳ ಕ್ಷುದ್ರತೆ ಈ ಬಗೆಯ ಪರ ಎನ್ನಿಸುವ ಸೌಂದರ್ಯವನ್ನು ಮಾತ್ರ ಸೃಷ್ಟಿಸಿದೆಯೆಂದು ತಿಳಿದರೆ ತಪ್ಪಾಗುತ್ತದೆ. ರಿಕ್ತವಾದ ಅರ್ಥವ್ಯವಸ್ಥೆಯ ಈ ಪ್ರಪಂಚದಲ್ಲಿ ಕಳೆದ ಹುಂಜಕ್ಕಾಗಿ ನಡೆಯುವ ತಪಾಸಣೆ, ಇಲ್ಲದಿರುವ ಆಸ್ತಿ ಬಗ್ಗೆ ಅದೇನೋ ಮಹತ್ತಿನದು ಇದೆ ಎಂಬಂತೆ ಸಾಕವ್ವ ನಡೆಸುವ ಸಂಭ್ರಮದ ಜಗಳ, ಶಿವೂನನ್ನು ಹುಂಜದ ತಪಾಸಣೆಗೆ ಎಳೆದೊಯ್ಯುವ ಉಪಾಯವಾಗಿ ಅವಳು ಹೇಳುವ ಪುರಾಣದ ಶೋಭೆಯುಳ್ಳ ಕಥೆ, ಬೆಂಕಿಯೆದುರು ಕಡಲೆಕಾಯಿ ತಿನ್ನುವಾಗ ನಡೆವ ಮಾತುಕತೆ_ಈ ಎಲ್ಲ ಪ್ರಸಂಗಗಳೂ ಕ್ಷುದ್ರವಾಗಬಹುದಾಗಿದ್ದ ದೈನಿಕವೇ ಹುಟ್ಟು ಹಾಕಿದಂಥವು. ಉಣ್ಣುವಂಥ  ಒಂದು ನಿತ್ಯದ ಸಾಮಾನ್ಯ ಕ್ರಿಯೆಯೂ ಇಲ್ಲಿ ಯಜ್ಞಕ್ಕೆ ಸಮಾನವಾದ ರಿಚ್ಯುಯಲ್. ಸಾಕವ್ವನ 'ಪಾಲನೆ'ಯ ಪ್ರಪಂಚದಲ್ಲಿ ಹೀಗೆ ಸಾಮಾನ್ಯವಾಗಬಹುದಾದ್ದೆಲ್ಲವೂ ವಿಶೇಷ. ಅವಳು ಪಾಲಿಸುತ್ತಿರುವ ಕಿರಿಯರಾದ ಪುಟಗೌರಿ, ಶಿವೂರಿಂದಾಗಿ ನವಿಲು ಕೂಡಾ ಈ ದೈನಿಕಗಳೇ ಹೊಳೆಯಿಸುತ್ತಿರುವ ಇನ್ನೊಂದು ಸಂಭ್ರಮ. ಈ ಹಟ್ಟಿಯಲ್ಲಿ ಹೀಗಾಗಿ ದೀಪ ಹಚ್ಚುವುದೂ, ಅದನ್ನು ಹಂಚಿಕೊಳ್ಳುವುದೂ, ಒಟ್ಟಾಗಿ ಉಣ್ಣುವುದೂ 'ಸಹನಾಭವತು| ಸಹನೌ ಭುನಕ್ತು| ಸಹವೀರ್ಯಂ ಕರವಾವಹೈ|' ಎಂಬಂಥ ಉಪನಿಷತ್ತಿನ ಆದರ್ಶವಾದ ಮಾನವ ಸಾಹಚರ್ಯದ ಕ್ರಿಯೆಯೇ. 'ಪಾಲನೆ'ಯಿಂದಾಗಿ ದೈನಿಕವನ್ನೂ ವಿಶೇಷವಾಗಿಸಿಕೊಂಡ ಸಾಕವ್ವನ ಹಟ್ಟಿ ಪೋಲಿಸರಿಂದ ತಪಾಸಣೆಗೆ ಒಳಗಾಗುತ್ತದೆ. ಇದು ಇಡೀ ಹಟ್ಟಿಯ ಜಗತ್ತನ್ನು ನಾಶ ಮಾಡುವಂತೆ ದೇವನೂರರು ಚಿತ್ರಿಸಬಹುದಿತ್ತು. ಹೈ ಮೈಮೆಟಿಕ್ ಮಾದರಿಯ ಕಥೆಯಾಗಿದ್ದಲ್ಲಿ 'ಒಡಲಾಳ'ದ ಪಾತ್ರಗಳು ಈ ಪೋಲೀಸ್ ತಪಾಸಣೆಯನ್ನು ಒಂದೋ ಗೆಲ್ಲಬೇಕಾಗಿತ್ತು; ಅಥವಾ ಅದರಿಂದ ಕರುಣಾಜನಕ ವೆಂಬಂತೆ ನಾಶವಾಗಬೇಕಾಗಿತ್ತು. ಚಾಪ್ಲಿನ್‌ನ ಬೌಲರ್ ಹ್ಯಾಟ್ ಧರಿಸಿದ ಪುಟ್ಟ ಮನುಷ್ಯನಿಗೆ ನಾಶವಾಗದಂತೆ ಹೇಗೆ ಬಾಳುವುದು ಗೊತ್ತು; ಚಾಪ್ಲಿನ್‌ನ ಆಧ್ಯಾತ್ಮಿಕವೆಂಬಂಥ ಧೈರ್ಯ ವ್ಯಕ್ತವಾಗುವುದು ಇದನ್ನು ಸಾಧ್ಯಮಾಡುವ ಕಾಮೆಡಿಯಲ್ಲಿ. ಅಂಥ ಕಾಮಿಡಿಯ ಶಕ್ತಿಯನ್ನು ಪಡೆದ ಕಥೆ 'ಒಡಲಾಳ'ವಾದ್ದರಿಂದ ಕಡಲೇಕಾಯನ್ನು ಕದ್ದು ತಂದು ತಿನ್ನುವುದು ಕೂಡ ನವಿಲನ್ನು ಗೋಡೆ ಮೇಲೆ ಕುಣಿಸುವ ಕ್ರಿಯೆಗೆ ಸರಿಸಮವೆನ್ನಿಸುವ ಶೋಭೆಯನ್ನು ಪಡೆದುಕೊಳ್ಳುತ್ತದೆ. ಕ್ಷುದ್ರವಾಗಬಹುದಾಗಿದ್ದ ದೈನಿಕ ಉದ್ದೀಪನಗೊಳ್ಳುತ್ತದೆ. ಪಾಲನೆಯ ಪರದಾಟದಲ್ಲಿ ಕ್ರಾಂತಿಗೆ ಹದಗೊಳ್ಳಬಲ್ಲ ನೆಲೆ ಸೂಚಿತವಾಗುತ್ತದೆ.

ಹೀಗಾಗಿ ಭಾರತದ ಕಥಾಸಾಹಿತ್ಯದಲ್ಲೆ ನಾನು ತಿಳಿದಂತೆ ದೇವನೂರ ಮಹಾದೇವರ 'ಒಡಲಾಳ' ಒಂದು ಅಪೂರ್ವ ಶೋಭೆಯ ಕೃತಿ ಎನ್ನಬಹು;j"å

***-ಪ್ರೊ. ಯು.ಆರ್. ಅನಂತಮೂರ್ತಿ***

# ಒಡಲಾಳ

## ೧

ಸಾಕವ್ವನ ನಾಕು ಕಂಬದ ತೊಟ್ಟಿ ಹಟ್ಟಿ ಅನ್ನೋದು ದೇಹವ ಭೂಮಿಗೆ ಇಳಿಬಿಟ್ಟು ಹಂಚು ಹುಲ್ಲು ತೆಂಗಿನಗರಿಯ ಅರರೆ ಮುಸುಡಿ ಮಾಡಿಕೊಂಡು ನಿಂತಿತ್ತು. ಆ ಹಟ್ಟೀಲಿ ಯಜಮಾನಿ ಸಾಕವ್ವ, ಮೂಗಿನ ತುದೀಲಿ ಬಿಂಕಿಕೆಂಡ ಇಟುಗೊಂಡು ಉರಿಯೂತ ಕೂತಿದ್ದಳು. ಅವಳು ಕುಳಿತಿದ್ದರೂ ಸಪೋರ್ಟಿಗಾಗಿ ತನ್ನ ಚಕಳದ ಕಯ್ಯನ್ನು ನೆಲಕ್ಕೆ ಚಲ್ಲಿದ್ದಳು. ಸಾಕವ್ವನ ಚರುಮಕ್ಕೂ ಮೂಳೆಗೂ ಹೊಂದಾಣಿಕೆ ತಪ್ಪಿತ್ತಾದ್ದರಿಂದ ಮಯ್ಯ ಚರುಮಗಳು ಸ್ವತಂತ್ರವಾಗಿ ಅಲ್ಲಾಡುತ ತಮ್ಮಷ್ಟಕ್ಕೆ ತಾವಿದ್ದವು. ಅವಳ ನಡುವಾಗಿದ್ದ ಆಸರೆಗೋಲು ತಬ್ಬಲಿಯಾಗಿ ಮುಂದೆ ಬಿದ್ದಿತ್ತು. ಆ ಕೋಲಿಗೆ, ನೊಣಗಳು ಸಾಕವ್ವನನ್ನೂ ಕೇರು ಮಾಡದೆ ಗುಂಪುಕಟ್ಟಿ ಧಾಳಿ ಮಾಡುತ್ತಿದ್ದವು.

ಮುಖ್ಯ, ಅವಳ ಖಾಸ ಹುಂಜವೊಂದು ನೆನ್ನೆ ಚಂದಗಾಣವಾಗಿ ಹಟ್ಟಿ ಬಿಟ್ಟದ್ದು ಇಂದಾದರೂ ಬಾರದೆ ಚಕಿತಗೊಳಿಸಿತ್ತು. ಅದು ದೇವರಿಗೆ ಬುಟ್ಟುದ್ದಾದ್ದರಿಂದ ಅಂಥ ಅಪಶಕುನಕ್ಕೇನು ಎಡೆ ಇರಲಿಲ್ಲ. ರಾತ್ರಿ ಎಲ್ಲೊ ಕುಂತದೆ ಈಗಲ್ಲದಿದ್ದರೂ ಇನ್ನೊಂದು ಗಳಿಗೆಗೆ ಬತ್ತದೆ ಎಂಬೊ ಆಸೆ ನೆನ್ನೆ ತುಂಬಾ ಅವಳ ಸುತ್ತಾಡಿತ್ತು. ಹಾಗೂ ತನ್ನ ಮನೆದೇವತೆ ತನ್ನ ದುಡ ಪರಿಕಿಸುತಿರಬಹುದೆನ್ನಿಸಿ ಆಗ ಸಾಕವ್ವನ ಹಠವೂ ಹೆಚ್ಚುತ್ತಿತ್ತು. ಕೈಲಾಗದ ಮುದುಕಿ ತಾನು ಬವಣೆ ಪಡುತ್ತಿದ್ದರೂ ತನ್ನ ಮಕ್ಕ ಮೊಮ್ಮಕ್ಕ ಸೊಸೇರು ಇದೇನ ಅನ್ನದಿರೋದ ಕಂಡು ಅವಳ ದುಕ್ತಿ ಒಳಗಿಂದ ಉಕ್ಕಿ ಬರುತ್ತಿತ್ತು. ಸಾಕವ್ವ ಆ ರಾತ್ರೀಲಿ ಎಡವಿ ತಡವರಿಸಿ ಕೊಕ್ ಕೊಕ್ ಎಂದು ಬೀದಿಬೀದೀಲಿ ಕರ್ದು ಅತ್ತು ಊರೆಲ್ಲ ಮಲಗಿದ ಮೇಲ ಹಟ್ಟಿಗೆ ಬಂದು ಉಸ್ಸೋ ಎಂದು ಕಾಲುನೀಟಿ ಕೂತುಕೊಂಡಳು. ಯಾರೂ ಇದ್ಯಾಕ ಅನ್ನಲಿಲ್ಲ. ಅವಳು ಆ ರೀತಿಯಾಗಿ ಇರಲು ನಿದ್ರಾದೇವಿ ಬೇಜಾರಲಿ ಬಂದು ಸಾಕವ್ವನ ಕಣ್ಣುಗಳ ಸವುರಿ ಮಾಯವಾದಳು.

ಊರು ಕಣ್ಬುಡುವ ಮೊದಲು ಕಣ್ಣುಬಿಟ್ಟ ಸಾಕವ್ವನ ಜೀವವು ಹುಂಜನ ಕಾಣಲು ಪತರಗುಟ್ಟಿತು. ಯಾವ ಮಾಯದಲ್ಲಾದರೂ ಹುಂಜನು ರಾತ್ರೀನೆ ಬಂದಿರಬಹುದಾ ಅನ್ನಿಸಿ ಕಣ್ಬೆಳಕು ಕಾಣುವವರೆಗೂ ಕಣ್ಣೋಡಿಸಿದಳು. ಕಾಣದೆ, ಹಟ್ಟಿ ತುಂಬಾ 'ಬಾ...ಬಾ...., ಕೊ...ಕೊ' ಅನ್ನುತ್ತ ನಡೆದಾಡಿದಳು. ಹಟ್ಟೀಯ ಬಲಮೂಲೆ ನೆರಕೇಲಿ ಮಲುಗಿದ್ದ ಅವಳ ದೊಡ್ಡ ಮಗ ಕಾಳಣ್ಣನಿಗೆ ಅವರವ್ವನ ಕೊರಕೊರದಿಂದಾಗಿ ನಿದ್ದೆ ಮುರುದು ತಡೆಯಲಾರದೆ 'ಅವ್ವೌ ಹೊತ್ಮೂಡ್ಲಿ. ಈಗ ಮಲಿಕ್ಕೊ' ಅಂದನು. ಸಾಕವ್ವನ ಸುಮ್ಮನಿದ್ದ ನರವಾಗಿದ್ದ ನರಗಳೆಲ್ಲ ಎದ್ದು ನೆಗದಾಡತೊಡಗಿದವು. ಸಾಕವ್ವ 'ಏನಂದೆ ಕಂದಾ! ಹೊತ್ಮೂಡಲಿ ಅಂದ್ಯ. ಹೊತ್ಮೂಡಿ ಏಡು ಮಾರು ಬಂದ್ರೂನು ನೀನು ಏಳ್ದೆ ಇದ್ದುದಕ್ಕಲ್ವ ನನ್ನ ಹಟ್ಟಿ ಮೂರು ಪಾಲಾದ್ದು...' ಎಂದು ಮಾತು ಮುಗಿಸಿ ಹಣೆ ಚಚ್ಚಿಕೊಳ್ಳುವುದನ್ನು ಮುಂದುವರಿಸಿದಳು.

ಇನ್ನು ಮಾತಾಡಿದರೆ ಮಾತು ಬೆಳೆಯುತ್ತದೆ ಅಂದುಕೊಂಡು ಕಾಳಣ್ಣನ ದಿಕ್ಕಿಂದ ಮಾತು ಏಳಲಿಲ್ಲ. ಅವುನು ಮಲಗಿದಂತೆ ಮಾಡಿದನು. ಅವ್ವ ಅಣ್ಣಂದಿರ ಮಾತಿಗೆ ಕಿರುಮನೆಯ ಎರಡನೆಯ ಮಗ ಸಣ್ಣಯ್ಯನೂ ಕಣ್ಬಿಟ್ಟು ಹೆಡ್ತಿ ಪಿಸುಗುಟ್ಟಲು ಕಣ್ಮುಚ್ಚಿದನು. ಸಣ್ಣಯ್ಯನ ಮೂರು ಮಕ್ಕಳು ಒಂದರ ಕಾಲ ಇನ್ನೊಂದರ ಮೇಲಾಕಿ ಬಿದ್ದಿದ್ದವು. ಅವುಗಳ ಹೊದ್ದಿದ್ದ ಹೊಸ ದುಪ್ಪಟಿ, ಮೂವರನ್ನೂ ಹೊದ್ದುಕೊಳ್ಳಲು ತನ್ನ ಶಕ್ತಾನುಸಾರ ಯತ್ನಿಸುತಿತ್ತು. ಇನ್ನೊಂದು ಕೈಗೂಸು ಅವ್ವ ಚಲುವಮ್ಮನ ಎದೆ ಹೊಟ್ಟೆಗಂಟಿ ಬೆಚ್ಚಗಿತ್ತು.

ಇತ್ತ ನಡುಮನೇಲಿ ಸಾಕವ್ವನ ದೊಡ್ಡಮಗಳು ಗೌರಮ್ಮನ ರೋಗಿಷ« ಮಗ ಗೋಡೆಗಂಟಿಕೊಂಡು ಬಿಳಿ ದುಪ್ಪಟಿ ಹಾಸ್ಕೊಂಡು ಅದೇ ದುಪ್ಪಟಿಯ ಹೊದ್ಕೊಂಡು ಮಲಗಿತ್ತು. ಅದರ ಪಕ್ಕವೆ ಅದರವ್ವ ಗೌರಮ್ಮ ಅವುಳುದ್ದ ಅವಳಗಲದ ಚಾಪೇಲಿ ಒಂದು ಹಳೆ ಸೀರೆ ಹೊದ್ದು, ಒಂದು ಕಯ್ಯ ಮಗನ ಮೇಲಾಕಿ ಮಲಗಿದ್ದಳು. ಅಲ್ಲೆ ಇನ್ನೊಂದು ಮೂಲೇಲಿ ಹಾಸಿದ್ದ ಹಳೆಮಂದಲಿಗೆ ಮೇಲೆ ಗೌರಮ್ಮನ ತಂಗಿ ಪುಟ್ಟಗೌರಿ, ಅವಳಿಗಂಟಿ ಗೌರಮ್ಮನ ಕಿರೀಮಗ ಮೂರನೆ ಕ್ಲಾಸಿನ ಶಿವೂ ಇಬ್ಬುರೂನು ಒಂದು ದುಪ್ಪಟಿ ಹೊದ್ದು ಮಲಗಿದ್ದರು.

ಶಿವೂನ ಅವ್ವ ಗೌರಮ್ಮನ ಗಂಡನು ಊರೂರು ಅಲೆಯ ಲಾರಂಭಿಸಿದಲಾಗಾಯ್ತು ಅವುಳು ತನ್ನ ತೌರಿಗೆ ಬಂದು ನೆಲೆಗೊಂಡಿದ್ದಳು. ಅವಳ ಗಂಡನೊ, ಮೂರು ತಿಂಗಳಿಗೊಮ್ಮೆ ಆರು ತಿಂಗಳಿಗೊಮ್ಮೆ ಬಂದು ಮೊಖ ತೋರಿಸಿ ಪುಡಿಗಾಸ ಕೊಟ್ಟು ಮಾಯವಾಗುತ್ತಿದ್ದನು. ಇಲ್ಲಿ ಗೌರಮ್ಮ ಕೂಲಿನಾಲಿಗೆ ಹದ್ದಿನಂತೆ ಕಾಯ್ತ ಸಿಕ್ಕಿದ್ದು ತಂದು ತನ್ನ ಇರೋ ಏಡು

ಹೈಕಳ ಹೊಟ್ಟೆಗಾಕುತ ಒಡಬಾಳ ಪಾಡುತ್ತಿದ್ದಳು. ತಂಗಿ ಪುಟಗೌರಿ ಕಿರಿಯವಳು, ಮದುವೆಗೆ ಬಂದು ಅಣಿಯಾಗಿ ನಿಂತಿದ್ದಳು. ಅವಳ ಕಯ್ಯಿಗೆ ಬಂದ ಕೂಲಿ ಅವುಳು ಅವಳವ್ವನ ಬಾಯಿಗಾಗುತ್ತಿತ್ತು. ಕೂಲಿ ಸಿಗದೆ ಅವಳು ಕೈಚೆಲ್ಲಿ ಕುಂತಲ್ಲಿ, ಶಿವೂನ ಹರಿದ ಅಂಗಿಚಡ್ಡಿ ಬ್ಯಾಗು ಹೊಲಿಯೋದು ಆ ಬಟ್ಟ ವಗ್ದು ಮಡ್ಸಿ ತಲೆಗಿಟ್ಟು ಇಸ್ತ್ರಿ ಮಾಡೋದು ಮಾಡುತ್ತಿದ್ದಳು. ದಿನಾಲು ಶಿವೂನ ಮೊಖ ತೊಳದು ಕರಾಪು ಬಾಚಿ ಕೂದಲಿಗೆ ಕುಪ್ಪೆ ಕೂರಿಸಿ ಹಣೆಗೆ ಕಪ್ಪಿಟ್ಟು ಇಸ್ಕೂಲಿಗೆ ರಡಿಮಾಡುತ್ತಿದ್ದಳು.

ಇನ್ನು ಉಳಿದವನು ಗುರುಸಿದ್ದು, ಸಾಕವ್ವನ ಕಿರೀ ಮಗ. ಅವನ ಪಾಲಿಗೇ ನಡುಮನೆ ಸೇರಿದ್ದುದು. ಅವುನು ಮನೆಗೆ ನೆಂಟನಂತಿದ್ದು ಮಾರಿಗುಡೀನ ತನ್ನ ವಾಸಸ್ಥಾನವಾಗಿ ಮಾಡಿಕೊಂಡಿದ್ದನು. ಊರೂರು ಸುತ್ತುತ್ತ, ಹಾಲಿ ಗಾರೆ ಕೆಲಸ ಮಾಡುತ್ತಿದ್ದನು. ರೇಷ್ಮೆಗೂಡಿನ ಯಾಪಾರ ಮಾಡಿ, ಚಿಲ್ಲರೆ ಅಂಗಡಿ ಇಟ್ಟು, ದನದ ದಳ್ಳಾಳಿಯಾಗಿ ಈಗ ಗಾರೆಕೆಲಸದಲ್ಲಿ ನಿಂತಿದ್ದನು. ಕೈಲಿ ಕಾಸಿದ್ದಾಗ ಅವ್ವನ ಎಲೆ ಅಡಕೆಗೂ ಕೊಡುತ್ತಿದ್ದನು. ಏಡುಬೇಳೆ ಪೈರಿನಿಂದಲೂ ಅವನಿಗೆ ಗುಂಪು ನಾಟಕ ಅನ್ನೋವು ತಲೆಗಂಟಿ ಈಗ ದಾನಸೂರಕರ್ಣದಲ್ಲಿ ಕರ್ಣನ ಮಗನ ಪಾರ್ಟು ಮಾಡುತ್ತಿದ್ದನು. ಅವನು ಮಾಮೂಲಿಯಾಗಿ ಮಾರೀಗುಡಿಯಲ್ಲಿ ಮಲಗಿದ್ದನು.

ಬೆಳಕು ಕತ್ತಲಿಗೆ ಬೆರೆತುಕೊಳ್ಳುತ್ತಿದ್ದ ಆಗ, ಹೊರ ಬಂದು ಸಾಕವ್ವ ತನ್ನ ಹುಂಜ ನಿಲ್ಲುತ್ತಿದ್ದ ಕೂರುತ್ತಿದ್ದ ಜಾಗವ ಕಣ್ತುಂಬಿ ನೋಡಿದಳು. ಅಂಥದೇನೂ ಕಾಣದೆ ಅವುಳು ಹೀಗೆ ನಾಕಾರು ಸಲ ಎಟತಾಕುತಿರಲು ಬೆಳಕಾಯ್ತು. ಒಳಗಿರೊ ಕೋಳಿಗಳಾರು ತನ್ನ ಹುಂಜನ ಕರೆತರಬಹುದೆಂದು ಪಂಜರವ ಎತ್ತಲು ಇದ್ದ ಬದ್ದ ಕೋಳಿಗಳು ಎಂದಿನಂತೆ ಉತ್ಸಾಹದಿಂದಲೆ ಹಾರ್ತ ಹೊರಹೋದವು. ಯಾವುದರ ಮೊಖದಲ್ಲು ದುಕ್ಕದುಗುಡ ಕಾಣದೆ ಸಾಕವ್ವನಿಗೆ ಎತ್ತಿ ಕುಕ್ಕಿದಂತಾಯ್ತು. 'ಅಯ್ಯೋ ಪಾಪಿ ನನ್ಮಕ್ಕಳಾ' ಎಂದು ಹತ್ತಾರು ಸಲ ಅಂದುಕೊಂಡಳು.

ಆಗಲೇ ಎದ್ದು ಎರಡನೆ ಮಗ ತೊಟ್ಟೀಲಿ ಹಲ್ಲುಜ್ಜುತ್ತಿದ್ದನು. ಸಣ್ಣಯ್ಯ, ಅವ್ವ ಆ ಕಡೆ ಬಂದರೆ ಈ ಕಡೆ ಮೊಖ ತಿರುವುತ್ತ, ಅವ್ವ ಈ ಕಡೆ ಬಂದರೆ ಆ ಕಡೆ ಮೊಖ ತಿರುವುತ್ತ ಯಾವ ಪಟ್ಟಿಗೂ ಸಿಗದೆ, ತಾನು ತನ್ನ ಕೆಲಸ ಅನ್ನುವಂತಿದ್ದನು. ಸಾಕವ್ವ ಒಂದು ಸಲ ತೊಟ್ಟಿಗೆ ಕ್ಯಾಕರಿಸಿ ಉಗುದು ಹೊರಬಂದು ಅಂಗಳದಲಿ ನಿಂತಳು.

ಅಂಗಳದಲ್ಲಿ ನಿಂತಂಥ ಸಾಕವ್ವನ ಕಣ್ಮುಂದೆ ಅವಳ ಹುಂಜನ ಅಂದಚಂದವು ಓಡಾಡಿತು. ಯಾರೋ ಪಾಪಗೇಡಿಗಳು ದೇವುರುದಿಂಡರ ಲೆಕ್ಕಿಸದೆ ತನ್ನ ಹುಂಜನ ಮುರುದಿರಬೇಕೆಂದು ಅನ್ನಿಸುತ್ತ, ಅದು ಹೊತ್ತೇರಿದಂತೆ ದುಡವಾಗತೊಡಗಿತು. ಸಾಕವ್ವ, ತನಗಾಗದವರು ಯಾರಾರೆಂದು ಒಂದೊಂದಾಗಿ ನೆಪ್ಪಿಡಿಯತೊಡಗಿದಳು. ಅವುಳ ಸವುತಿ ಕೆಂಪಮ್ಮ ಮೂಡಿನಿಂತಳು. ಸಾಕವ್ವನ ಗಂಡನನ್ನು ತನ್ನ ಕಿರುಬೆರಳಲಿ ಕುಣಿಸೀಕುಣ್ಸಿ ಮುಪ್ಪಾಗಿದ್ದ ಕೆಂಪಮ್ಮನ ತಿಪ್ಪೆ ದಿಕ್ಕಿಗೆ ಸಾಕವ್ವ, ಹಿಂದಕ್ಕೆಳೆಯುತ್ತಿದ್ದ ಕಾಲೆಳೆದುಕೊಂಡು ನಡೆದಳು.

ಸಾಕವ್ವ ಆ ತಿಪ್ಪೇನ ಒಂದು ಕಡೆಯಿಂದ ಚೂರೂ ಬುಡದೆ ನೋಡೂ ಏನೂ ಕಾಣದೆ, ಅಲ್ಲೊಂದು ಇಲ್ಲೊಂದು ಸಿಕ್ಕಂಥ ತುಪ್ಪಟ ಪುಕ್ಕಗಳ ಕಣ್ಣಿಗಂಟಿಸಿ ನೋಡೂ ಅವು ಅವಳ ಹುಂಜನದಾಗಿರದೆ ಆ ತಿಪ್ಪೆ ಅವಳ ಹಠಕ್ಕೆ ಸವಾಲೊಡ್ಡಿ ನಿಂತಿತ್ತು. ಕೈ ಬುಡದೆ ಸಾಕವ್ವ 'ಎಲ್ಗೋದ್ಯೆ ನನ್ನ ಸವುತಿ? ಸಿಕ್ತಿಯಾ ಸಿಕ್ತಿಯಾ' ಅನ್ನುತ್ತ ಊರುಗೋಲಿಂದ ತಿಪ್ಪೇನೆ ಬುಡಮೇಲು ಮಾಡಿ ಕೆದುಕಿದಳು. ಹಾಗೂ ಏನೂ ಸುಳುವಾಗದೆ ಸುಸ್ತಾಗಿ 'ಥೂ ನನ್ನ ಸವುತಿ... ಮಾಯಕಾತಿ, ಅಷ್ಟು ಸುಲಭವಾಗಿ ನಿನ್ನ ಮರ್ಮ ಬುಟ್ಟುಕೊಟ್ಟಯಾ' ಎಂದು ತಿಪ್ಪೆಗೆ ಉಗುದು ಮುಂದಿನದಕ್ಕೆ ಸಾಗಿದಳು.

ಹತ್ತಾರು ತಿಪ್ಪೇನ ಮುಗಿಸುವಲ್ಲಿ ಸಾಕವ್ವನ ತ್ರಾಣ ಅನ್ನೋದು ಏರುತ್ತಿದ್ದ ಬಿಸುಲಿಗೆ ಒಣಗಿ ಗಾಳಿ ಅಲ್ಲಾಡಿದರೆ ಇವುಳೂ ಅಲ್ಲಾಡುವಂತಾಯ್ತು. ಆಗ ಅಲ್ಲಿಗೆ ಕಸ ಹೊತ್ತು ಬಂದ ಪುಟ್ಟಿ 'ಇದೇನಮ್ಮ ಇಷ್ಟೊತ್ತಲಿ...' ಎಂದು ಕೇಳಿದಳು. ಅದಕೆ ಸಾಕವ್ವ 'ತಿಪ್ಗ ಬಂದಿದ್ದಿಕಾ ಕೂಸು ಅಷ್ಟಿಯಾ' ಅಂದಳು. ಪುಟ್ಟಿ 'ಅಷ್ಟಿಯಾ' ಅಂದು ನಗಾಡ್ತ ಕಸ ಸುರುದು ಹೋದಳು. ಪುಟ್ಟಿಯ ಧಿಮಾಕು ಗಣ್ಯೆ ಸಾಕವ್ವನ ಮೊಖಕ್ಕೊಡದಿತ್ತು. ಪುಟ್ಟಿ ಅಂಬೋಳು ಕಣ್ಗೆ ಮರೆಯಾಗುವವರ್ಗೂ ತಿಪ್ಗ ಕುಂತವಳಂತೆ ಕುಂತಿದ್ದು ಆಮೇಲ ಮುಂದಿನದಕ್ಕೆ ಬಂದಳು.

ಹೊತ್ತುನಂತೆ ಎದ್ದವಳೆ ತಿಪ್ಪೆ ಕಸ ಕಡ್ಡೀಯ ಕಣ್ತುಂಬಾ ನೋಡಿ, ಅವು ಕಣ್ಣಿಗಚ್ಚೊತ್ತಿ, ಸಾಕವ್ವ ಯಾವ ದಿಕ್ಕು ನೋಡಿದರೂ ಕಸಕಡ್ಡಿಗಳು ಬಂದು ಪಾರ್ಟು ಮಾಡುತ್ತಿದ್ದವು. ಮುಂದೆ ನಡೆಯಲು ತೊಡೆ ಬಂಡಾಯವೆದ್ದು ನಿಂತಾಗ ಸಾಕವ್ವ 'ನನ್ನ ಮನೆ ದೇವ್ರ ಸತ್ಯ ಇದ್ರ ನನ್ನುಂಜ ಹಟ್ಟಿಗೋಗಿರಲಿ, ಇಲ್ಲದಿದ್ರ ಇಲ್ಲ' ಎನ್ನುತ್ತ ಅನ್ನುತ್ತಾ ಊರದಿಕ್ಕ ತೊಡ ಎಳೆದಳು.

ಸಾಕವ್ವ ಎತ್ತ ಹೋಗಿದ್ದಳು ಏನು ಮಾಡಿದಳು ಎಂಬುದು ಚಿನಾಲಿ ಪುಟ್ಟಿಯಿಂದಾಗಿ ಪ್ರಚುರಗೊಂಡು ಹೋಗಿಬರೋರು ಕುಂತವರು ಎಂದೂ ಮಾತಾಡಿಸದವರೂ 'ಏನವ್ವೋ' 'ಏನಮ್ಮೋ' ಅನ್ನುತ್ತಿದ್ದರು. 'ನನ್ನುಂಜಕಪ್ಪ', 'ನನ್ನುಂಜಕಾ ನನ ಕಂದ,' ಎನ್ನುತ್ತ ಸಾಕವ್ವ ಬರುತ್ತಿದ್ದಳು. ಕೇಳಿದವರು, ಅವುಳು ಮರೆಯಾದ ಮೇಲ ನಗಾಡ್ತ ಹೋಗುತ್ತಿದ್ದರು _ ಹೀಗೆ ಆಗುತ್ತಿತ್ತು.

ಹಾಗೂ ಹೀಗೂ ಸಾಕವ್ವ ಹಟ್ಟೀ ಅಂಗಳಕ್ಕೆ ಮುಟ್ಟಿದಳು. ವಸ್ತುಲ ಮೇಲ ಅವಳ ಮಗಳ ಮಗ ಶಿವೂ ನಿಂತಿದ್ದನು. ಸಾಕವ್ವ 'ಬಂತಾ ನನಕಂದಾ' ಎಂದು ಶಿವೂನ ಕೇಳಿದಳು. ಶಿವೂ 'ಏನಮ್ಮಾ' ಅಂದಿತು. ಶಿವೂ ಬಾಯಿಂದ ಆ ವಾಕ್ಯ ಕೇಳಿದ ಸಾಕವ್ವನಲ್ಲಿ ದುಕ್ಕ ಕೋಪ ಅನ್ನೋವು ಉಕ್ಕಿದವು. 'ಅಯ್ಯೋ ನನ್ನ ಮಗಳ ಮಗ್ನೇ... ನಾನು ಬಂತಾ ಅಂತ ಕೇಳಿದ್ರ... ಏನ್ನಮ್ಮಾ ಅಂತೀಯಲ್ಲೋ' ಎಂದು ಅಳುತ್ತ ಅಂಗಳದಲ್ಲೆ ಕೂತಳು. ಆ ಹೈದಗೆ ಗಲಿಬಿಲಿ ಎದ್ದು ಅದರವ್ವನಲ್ಲಿಗೆ ಓಡಿತು.

ದೊಡ್ಡ ಮಗಳು ಗೌರಮ್ಮ ಬಂದು ನೋಡಿದರೆ—ಅವ್ವ ಅಂಗಳದೊಳಗ ಮುಳುಗಿ ತನ್ನ ಸುತ್ತಗೂ ಮಣ್ಣೂ ಧೂಳೂ ಬಾಚುತ್ತಿದ್ದಳು. ಮಣ್ಣು ಬೊಗಸೆಯಾಗಲು ಅದನ್ನು ಹೂಪಟಾಕಿಯಂತೆ ಎರಚಿ 'ನನ್ನ ಕೋಳಿ ತಿಂದವರ ಮನೆ ಮಣ್ಣಾಗ್ಲೋ... ನನ್ನ ಮನೆದೇವ್ರ ಸತ್ಯ ಇದ್ದುದೇ ಉಂಟಾದ್ರೆ... ನನ್ನ ಕೋಳಿ ಮುರ್ದವರ ಮನೆ ಮುರ್ದೋಗಲೋ' ಅನ್ನುತ್ತ ಒಂದು ಬೈಗುಳ ಬಯ್ಯೋದು ಒಂದು ಸಲ ಧೂಳು ಎರಚೋದು ಮಾಡ್ತ ನಾಕದಿಕ್ಕೂ ಧೂಳು ಬಾಣ ಬುಡುತ್ತಿದ್ದಳು. ಕ್ರಮಬದ್ಧವಾಗಿ ಒಂದೊಂದು ಸಲ ಆ ಧೂಳ್ನ ಮೇಲ ಬಿದ್ದು ಒರಳಾಡುವಳು. ಎದ್ದು ನಟುಕೆ ಮುರಿದಳು. ಬಾಚಿ ಧೂಳ ತಗುದು ಎರುಚಿದಳು. ಮಗಳು ತಾಳಲಾರದೆ ಬಂದು ಅವ್ವನ ಕಯ್ಯ ಹಿಡಿದು 'ಸಾಕು ಏಳವ್ವ, ವೋದ್ದು ತಿರ್ಗಾ ಬಂದದಾ' ಎಂದು ಎತ್ತಿದಳು. ಸಾಕವ್ವ ಕಯ್ಯ ಕಿತ್ತುಕೊಂಡು ಇನ್ನೊಂದು ಸಲ ಅಂಗಳ ತುಂಬುವಂತೆ ಮಣ್ಣೆರಚಿದಳು. ಅಲ್ಲಿಗೆ ಕಿರಿಮಗಳೂ ಬಂದು ಅವ್ವನ ಒಂದೊಂದು ಕಯ್ಯ ಒಬ್ಬೊಬ್ಬರು ಹಿಡಿದು ಎತ್ತಿ ಏಳಿಸಿ ನಡೆಸುತ ಹಟ್ಟಿಗೆ ತಂದರು. ಸಾಕವ್ವನ ಇರಬಹುದಾದ ಮಯ್ಯಿಕಯ್ಯಿ ದೇಹವು ಮಣ್ಣು ಧೂಳು ತೊಪ್ಪೆಯಾಗಿ ಅವಳು ಆ ದೇಹವ ಭೂಮಿಗಿಳಿಬಿಟ್ಟು ಕೂತಳು.

## ೨

ಮಗಳು ಗೌರಮ್ಮ ತಂದಿಟ್ಟ ಗಡುಗೇಲಿ ನೀರು ಕುಡಿದಾದ ಮೇಲ ಸಾಕವ್ವನ ದೇಹಕೆ ಉಸುರು ಕೂಡಿಕೊಂಡಿತು. ಸಾಕವ್ವ, ಮಗಳ ತಲಸವುರೂತ 'ನೀನು ತಣ್ಣಗಿರು ನನಕಂದ, ಕಡಗಾಲ್ಕು ನೀನೆ ನನಗಾಗೋಳು. ನನ್ನ ಇರೋ ಆಸ್ತಿನೆಲ್ಲ ನಿನ್ನ ಕಿರಿಮಗನ್ಗೆ ಬರ್ದು ಸತ್ತೋಯ್ತೀನಿ.....' ಎಂದು ದುಕ್ಕದ ರಾಗ ಬೆರಸಿ ಹಾಡತೊಡಗಿದಳು. ಅವ್ವನ ಈ ರಾಗ, ಈಗ ನಿಲ್ಲಬಹುದು ಇನ್ನೊಂದು ಗಳಿಗೇಲಿ ನಿಲ್ಲಬಹುದು ಎಂದು ಕಾದು ಕಾದು ನಿಲ್ಲದಿರಲು ಎರಡನೆ ಮಗ ಸಣ್ಣಯ್ಯನಿಗೆ ತಡದುಕೊಳ್ಳಲಾಗಲಿಲ್ಲ. ಹೆಂಡತಿ ಸನ್ನೆ ಮಾಡಿದರೂ ದಕ್ಕದೆ 'ಏನವ್ವ ನೀ ಅನ್ನೋದು' ಎಂದು ಹೊರಕ್ಕೆ ನೆಗದು ಬಂದನು.

ಸಣ್ಣಯ್ಯ ಅನ್ನೋನು ಪೀಚಲಾಗಿ ಕಟುವಾಗಿದ್ದನು. ಅವನ ಕಯ್ಯಿ ಕಾಲುಗಳು ಕಡ್ಡಿಯಂತೆ ಒಣಗಿಕೊಂಡಿದ್ದೂ ನಾರಿನಂತೆ ಗಟ್ಟಿಯಾಗಿದ್ದವು. ಮಕ್ಕಳಿಲ್ಲದ ಅಣ್ಣನಾಸ್ತಿಗೂ ಕಣ್ಣಾಕಿದ್ದವನಿಗೆ ಅವ್ವನ ಮಾತುಗಳು ನೇರವಾಗಿ ಎದೆಗೇ ಬಂದು ಒದೆಯುತ್ತಿದ್ದವು. ಅವನು ಹೊರಗೆಲ್ಲಾ ಜೋರೊತ್ತಾಗಿದ್ದರೂ ಹೆಡ್ತಿ ಎದುರಾ ಮೆದುವಾಗಿರುತ್ತಿದ್ದನು. ಅಂಥವನೇ ಈಗ ಹೆಡ್ತಿಯ ಕಣ್ಸನ್ನೆಯನ್ನೂ ಲೆಕ್ಕಿಸದೆ ಆಸ್ತಿದನಿ ಕೇಳುತಲೆ ಅವ್ವನ ಎದುರಾ ರಾವುಳಾಸುರನಂತೆ ನಿಂತಿದ್ದನು.

ಸಾಕವ್ವನ ಮಂಜುಗಣ್ಣೊಳಗ ಮಗ ಸಣ್ಣಯ್ಯ ರಾವುಳಾಸುರನಂತೆ ಮೂಡಿ ನಿಂತಿದ್ದನು. ನೆನ್ನಿಂದಲೂ ಹುಂಜನೊಡನೆ ಹೆಣಬಾಳು ಪಟ್ಟು ಸುಸ್ತಾಗಿದ್ದ ಸಾಕವ್ವನ ಗಂಟಲಲ್ಲಿ ಬಡಪಟ್ಟಿಗೆ ಮಾತುಗಳು ಹುಟ್ಟಲಿಲ್ಲ. ಗಡುಗೇಲಿ ನಾಕು ನೀರು ಕುಡಿದು ಮಗನ ದಿಕ್ಕ ಕಣ್ಣ ಮೆಡರಿಸಿ 'ಕೇಳವ್ವ್ನ ನೀ ಯಾರ?' ಅಂದಳು. ಸಣ್ಣ, ಕಡ್ಡಿ ಮುರುದಂತೆ 'ನಾನು ಅಕ್ಕುದಾರ' ಅಂದ. ಸಾಕವ್ವಗೂ ಕಮ್ಮಿ ಕಾನೂನು ಗೊತ್ತಿರಲಿಲ್ಲ. 'ಏನಂದೆ ಇನ್ನೊಂದ್ಸಲ ಅನ್ನು... ಅಕ್ಕದಾರನಾ ನೀನು? ಹುಟ್ಟಿದ್ದು ಹೆಣ್ಣೆಂಗ್ಸಾದರೂ ಗಂಡ್ಸ ಮೀರ್ಸಿ ಕಚ್ಚೆಕಟ್ಕಂಡು ಗೇದು ಸಂಪಾದ್ಸಿವ್ನಿಕನೊ ಭೂಪತಿ. ಆಸ್ತಿ ನನ್ನ ಸ್ವಾರ್ಜತ ಸ್ವಾರ್ಜತ...' ಅಂದಳು. ಸಣ್ಣಯ್ಯನಿಗೆ ಒಂದು ಚಣ ಅದೂ ದಿಟ ಅನ್ನಿಸಿ ದಿಗುಲುಂಟಾಯ್ತು. ಈಗ ದನೀನ ವದ್ದೆ ಮಾಡಿ 'ಹಂಗಾರ ನನ್ನ ಇರೋ ನಾಕ್ಕೈಕಳ ನಿನ್ನ ಕಯ್ಯಾರ ಬೀದ್ಗ ತಳ್ಳು ಮತ್ತ...' ಎಂದು ಅಂದು ಮಕ್ಕಳನ್ನು ಎಳೆದೆಳೆದು ತಂದು ಅವ್ವನ ಮಡಲಿಗಿಟ್ಟು ಪಟ್ಟು ಬದಲಿಸಿ ನಿಂತನು.

ಸಣ್ಣಯ್ಯನ ಮಾತು ವರ್ಸೆ ಈಗ ಮೆದುವಾಗಿದ್ದರೂ ಹುಂಜನಿಂದಾಗಿ ದಿಕ್ಕೆಟ್ಟವಳಾಗಿದ್ದ ಸಾಕವ್ವಗೆ ಜೋರತ್ತು ಮಾಡಬೇಕೆನ್ನೊ ಒಳಗುದಿ ಎದ್ದೆದ್ದು ಕುಣಿಯುತ್ತಿತ್ತು. ಮಕ್ಕಳು ಅನ್ನೋ ಮಾತ ಮರೆಸಿ ಸಾಕವ್ವನೂ ವರ್ಸೆ ಬದಲಿಸಿ—

'ಅಲ್ಲೋ ಮನತಾನಸ್ಥ ನನ್ ಮಗನೆ... ನಿನ್ನ ಪಾಲ್ಗೆ ಹಂಚಾಕ್ಸದೆ ಹುಲ್ಲಾಕ್ಸಿದ್ದೀಯಲ್ಲೊ... ಹೊಟ್ಟಗ ತಣ್ಣೀರ್ ಬಟ್ಟೆ ಕಟ್ಕಂಡು ತೊಟ್ಟಿ ಹಟ್ಟಿ ಕಟ್ಸಿದ್ನಲ್ಲೋ... ನೋಡ್ದವರು ಮೂಗ್ಗೆ ಬೆರಳಿಟ್ಟು...' ಏರಿಳಿಯುತ್ತಿದ್ದ ಮಾತುಗಳು ಕೊನೆಗಾಣದೆ ಸಣ್ಣಯ್ಯನ ನಿಂತ ಕಾಲುಗಳು ನೆಲಕ್ಕಿಳಿಯುತ್ತಿದ್ದವು. ಅವ್ವ ಆಂತುಕೊಂಡು ಹಟ್ಟೀಯ ಒಂದು ಮೂಲೆ ಹಿಡಿದು ಸ್ಟಾರ್ಟು ಮಾಡಿ ನಿಧಾನವಾಗಿ ಕಣ್ಣು ಚಲಿಸುತ ಅಲ್ಲಲ್ಲಿ ನೆಡುತ್ತ ಕಂಡದ್ದು ವರ್ಣಿಸುತ್ತ ರಾಗವಾಗಿ ದನಿ ಎತ್ತರಿಸಿ ಹಾಡುತ್ತಿದ್ದಳು.

ಒಂದು ಕಾಲದಲ್ಲಿ ಪೂರ್ತವೆ ಹಂಚು ಹೊದ್ದು ಮೆಡುಗಾರಿಕೆ ಮಾಡಿದ್ದ ಆ ಹಟ್ಟೀಯ ಹಂಚು ಕಯ್ಯಾಡಿಸಿದಾಗ ಕಮ್ಮಿ ಬೀಳೋ ಹಂಚುಗೆ ಬದಲು ಹಂಚು ತರಲು ಕಯ್ಲಾಗದೆ ಮುಂದಿನ ವರುಷಕ್ಕೆ ಹಂಚಾಕಿಸಿದರಾಯ್ತು ಅಂದುಕೊಂಡು ಆ ಖಾಲಿಗೆ ಹುಲ್ಲೂ ತೆಂಗಿನ ಗರೀನ ಕವುಚೀ ಕವುಚಿ ಈಗ ಹಂಚೂ ಹುಲ್ಲೂ ತೆಂಗೀನಗರೀಗಳು ಅನೂನ್ಯವಾಗಿದ್ದವು. ಹಟ್ಟೀಯ ಹೊತ್ತು ನಿಂತಿದ್ದ ಕಂಬ ಕಮಾನು ತೊಲಗಳು ಕುಗ್ಗಿ ಬಗ್ಗಿ ತಮ್ಮ ನೆರಳಡಿ ಉಸುರಾಡುತ್ತಿದ್ದ ಜೀವಿಗಳ ಬಗ್ಯೆ ದಯ ತೋರುತ್ತ ನಿಂತಿದ್ದವು.

ಹಟ್ಟೀನ ಕಣ್ಗೆ ತುಂಬಿಕೊಂಡಂಥ ಸಾಕವ್ವ ಕುಂತಲ್ಲೆ ಕುಸುದು, ಕಡ್ಡಿಯಂತೆ ಎದುರು ನಿಂತಿದ್ದ ಮಗ ಸಣ್ಣಯ್ಯನ ಕಡೆಗೆ, ಕಣ್ಣಮೊನೆಗೆ ಸಾಣೆ ಹಿಡಿದು ನೋಡುತ್ತ ತನ್ನೇಡು ಕೈಗಳಿಂದಲೂ ನೆಲವ ತಾರಿಸಿ ಆ ಕೈಗಳ ಚಟಕ್ಕನೆ ಮಗನ ದಿಕ್ಕ ಚಾಚಿ ಅಲ್ಲಾಡಿಸುತ್ತ 'ಎಂಥ ರೂಪ್ಗೆ ತಂದ್ರ್ಯಪ್ಪ ನನ್ನ ಹಟ್ಯ' ಎಂದು ದುಕ್ಕವ ತುಂಬಿಕೊಂಡು ನೋಡಿದಳು. ಮಗನಿಗೂ ಆ ರೀತೀಲಿ ಅವ್ವನ ನೋಡಲಾಗಲಿಲ್ಲ. ಸಣ್ಣಯ್ಯ 'ಅದ್ಕ ನಾ ಯಾನ್ನ ಮಾಡ್ಲವ್ವ' ಅಂದನು. ಸಾಕವ್ವ ಒಂದು ಸಲ ಕ್ಯಾಕರಿಸಿ ತೊಟ್ಟಿಗೆ ಉಗುದು ಒಂದೇ ಮಾತು — 'ಕೆರ್ಗ ಬೀಳು' ಅಂದಳು. ಸಣ್ಣ, ಹೊಟ್ಟ ಒಳಗ ಕುಣಿದಾಡುತ್ತಿದ್ದ ಮಾತುಗಳಿಗೆ ಬೀರುಗುಣಿಕೆ ಹಾಕಿ 'ನಿನ್ನೊಂದ್ಗ ಮಾತಾಡು ಕೇಮಿಲ್ದಿಯ' ಅಂದು ತನ್ನ ಪಾಲು ಕಿರುಮನೆ ದಿಕ್ಕುಗ ಮೊಖ ಇಟ್ಟನು.

ಸಣ್ಣಯ್ಯ ಇನ್ನೂ ಮೊಖ ಇಟ್ಟಿದ್ದನೊ ಇಟ್ಟಿರಲಿಲ್ಲವೊ, ಕಿರುಮನೆಯಿಂದ ಬಾಣದಂತೆ ಸಣ್ಣನ ಹೆಂಡತಿ ಹೊರಬಂದು ಅತ್ಯಮ್ಮನಿಗೆ ಸವಾಲಿನಂತೆ ನಿಂತಳು. ಚಲುವಮ್ಮ, ಮುವ್ವತ್ತಾಗಿಲ್ಲದಿದ್ದರೂ ನಾಕು ಮಕ್ಕಳ ತಾಯಿ, ಇದ್ದುದರಲ್ಲಿ ಹೊಟ್ಟಬಟ್ಟಗ ನೇರವಾಗಿದ್ದವರ ಮನೆಯಿಂದ ಕಾಲಿರಿಸಿದವಳು. ಚಲುವಮ್ಮನ ತೌರಿಂದ ತಾಯಿ ಕಡೇಯ ಒಳ ಸರಬರಾಜೂ ಉಂಟೂ ಅದಕ್ಕೇನೆ ಹೆಡ್ತಿ ಮುಂದ ಸಣ್ಣಯ್ಯನು ಬಾಲ ಮುದುರುವನು ಅನ್ನುವವರೂ ಇದ್ದರು. ಯಾರಾರು ಸುತ್ತಿ ಬಳಸಿ ಕೇಳಿದರೆ 'ವೂ ಕಯ್ಯೋ ನಾ ಉಣ್ತಾ ಇರೋದು ನಮ್ಮತ್ತೆ ಮನೇದೆ' ಎಂದು ರೇಗುತ್ತಿದ್ದನು. ಅಣ್ಣನಿಗೆ ಮಕ್ಕಳಾಗದು ಎಂಬುದು ದಿನಗಳೆದಂತೆ ದಿಟವಾಗುತ್ತ, ಸಣ್ಣಯ್ಯನೂ ಹುಮ್ಮಸ್ಸಿನಿಂದ ದೇವರ ಮೇಲ ಭಾರ ಹಾಕಿ ಒಂದಾದ ಮೇಲೊಂದರಂತೆ ನಾಕು ಮಕ್ಕಳ ಮಾಡಿದ್ದನು. ಕೊನೆಯದು ಕೈಕೂಸು.

ಆ ಕೈಗೂಸು ಬೆಟ್ಟು ಚೀಪುತ್ತ ಪೆಕರು ಪೆಕುರಾಗಿ ನೋಡ್ತ, ಅತ್ತೆಗೆ ಸವಾಲಾಗಿ ನಿಂತಿದ್ದ ಚಲುವಮ್ಮನ ಕಂಕುಳಲಿ ಆಡುತ್ತಿತ್ತು. ಚಲುವಮ್ಮ ಆ ಕೂಸನ್ನು ಒಂದು ಕಂಕುಳಿಂದ ಇನ್ನೊಂದು ಕಂಕುಳಿಗೆ ಕುಕ್ಕರಿಸಿ 'ಅದೇನತ್ತಮ್ಮ ನೀವು ಮಾತೆತ್ತಿದರ ನನ್ನಟ್ಟಿ ನನ್ನಟ್ಟಿ... ನನ್ನಾಸ್ತಿ ನನ್ನಾಸ್ತಿ ಅಂತೀರಲ್ಲ...' ಅಂದು ಅತ್ಯಮ್ಮನ ಉತ್ತರಕ್ಕೆ ಕಾದಳು. ಸಾಕವ್ವ ಹಿಡುತವಾಗಿ 'ಅದೇಕಾನಮ್ಮಿಯೆಣ್ಣ ನನ್ನಟ್ಟಿ, ನನ್ನಾಸ್ತಿ' ಅಂದಳು. ಅದರಲ್ಲೆಕಾ ಬಿಕನಾಸಿ ನೀನೂವೆ ಬಿದ್ದಿರೋದು ಎಂಬೊ ದನಿ ಆ ಮಾತಿನಿಂದ ಹೊರಟು ಅದು ಚಲುವಮ್ಮನ ಕೆಣುಕಿತು. ಚಲುವಮ್ಮ ಕಂಕುಳಲ್ಲಿದ್ದ ಕೂಸ ಗಂಡನ ಹೆಗಲಿಗೆ ಬಿಸಾಕಿ, ಅತ್ಯಮ್ಮನ ಮುಂದ ಕೈಯಾಡಿಸುತ್ತ 'ಅವ್ವೆ...ನಾನೂವಿ ಅದ್ನೆ ಕೇಳೋದುಕನ್ಯತ್ತಮ್ಮ... ಎಷ್ಟು ಇಟ್ಟೀವ್ರಿ...ಅಂತ' ಎಂದು ಕೆಕ್ಕರಿಸಿಕೊಂಡು ಕೇಳಿದಳು.

ಮಾತಾಡಿ ಮಾತಾಡಿ ಸಾಕವ್ವನ ಹೊಟ್ಟ ಒಳಗಲ ದ್ರವ ಮಂಗರಮಾಯವಾಗಿದ್ದ ಪ್ರಯುಕ್ತ ಗಡುಗೇಲಿದ್ದ ನೀರ ಒಂದು ಗುಟುಕಿಗೆ ಕುಡಿದು 'ನಿನ್ನ ಕಣ್ಣು ಕುಂಡಾ?' ಅಂದಳು. ಅತ್ಯಮ್ಮನ ಮಾತು ಸೊಸಮುದ್ದಿಯ ಮಯ್ಯ ರೋಷ ಉಕ್ಕಿಸಿತು. ಚಲುವಮ್ಮ ಅಂದಳು—'ನನ್ನ ಕಣ್ಯಾಕತ್ಯಮ್ಮ ಕುಂಡೂ...ನಾನೂವಿ ಕಂಡಿವ್ನಿ ಕಣ ತಕ್ಕಳ್ಳಿ... ಪರದೇಸಿ ನಿಂತ ಥರ ಇರೋ ಈ ಹಟ್ಟಿ ಕಂಡಿಲ್ವಾ... ಮಳದೇವರು ಕಣ್ಣುಬುಟ್ಟರೂ ಬೆಳೆಕಾಣ್ದ ನಾಕು ಎಕ್ರ ಹೊಲ ಕಂಡಿಲ್ವಾ... ನಿಮ್ಮ ಇರೊ ಮೂರು ಗಂಡ್ಮಕ್ಕಳ್ಗ ತಲಗೆರಡು ಎಕ್ರನಾರು ಹಂಚಿ ಮತ್ತ ನೋಡವು...'ಅನ್ನುತ್ತ ಅತ್ತೆ ಮುಂದ ಕೂತುಬುಟ್ಟಳು. ಗಂಡ ಸಣ್ಣಯ್ಯ ಹೆಡ್ತಿಕಯ್ಯ ಹಿಡಿದೆಳೆಯುತ್ತ 'ನೀ ಏಳಮ್ಮಿ... ನೀ ನಡಿಯಮ್ಮಿ' ಎಂದು ತೊದಲುತ್ತಿದ್ದನು. ಚಲುವಮ್ಮ ಗಂಡನಿಗೆ ಕೇರುಮಾಡದೆ ಕಯ್ಯ ಕೊಸರಿ ಮತ್ತೂ ಪಟ್ಟಾಗಿ ಕೂತಳು. ಸಾಕವ್ವ ನಿಧಾನವಾಗಿ ಆದರೆ ಕಟುಕಾಗಿ 'ನನ್ನಾಸ್ತಿ ಅಂಗೈಯಗಲಾನೆ ಇರ್ಲಿಕಾ ಗರ್ತಿ.....ಅದರಲ್ಲೇನೆ ನೀನೂವಿ ಉಣ್ತಿರೋದು' ಅಂದಳು. ಚಲುವಮ್ಮನಿಗೆ ತನ್ನ ಕತ್ತು ಕತ್ತರಿಸಿ ಮುಂದಿಟ್ಟಂತಾಯ್ತು. ಅವಳು ನೆಲವ ಕುಟ್ಟಿ ತಟ್ಟಿ ಎದ್ದು ಬೆಂಕಿ ಕಕ್ಕುವಳಂತೆ 'ಅತ್ಯಮ್ಮೊ ನೀವು ಹಿಂಗೇ ಅನ್ತಾ ಇರಿ. ನಾನು

ಹುಚ್ಚತ್ತಿದರ ಹುಚ್‌ಮುಂಡೆ. ತಲ ಒಳ್ಗಲ ಹುಳಾ ಪತರಗುಟ್ತವ. ಒಂದಲ್ಲಾ ಒಂಜಿನ ನಿಮ್ಮ ಹಟ್ಗ ಬಿಂಕಿ ಹತ್ಸುಬುಟ್ಟು ನಿಮ್ಮ ಹೊಲ್ಕ ಧೂಳ ಎರುಚು ಬುಟ್ಟು ಇಲ್ಲಿಂದ ಕಡ್ದು ಹೊಂಟೋಯ್ತೀನಿ...' ಎಂದವಳೆ ಕಯ್ಯ ಬೀಸ್ಗಂಡು ಮೇಲಕೂ ಕೆಳಕೂ ಉಸುರು ಬುಡ್ತ ಕಿರುಮನೆಗೆ ಬಿರುಗಾಳಿಯಂತೆ ನುಗ್ಗಿದಳು. ಅವಳ ಕೈಗೂಸು ಅಜ್ಜಿಯ ಸುತ್ತ ಆಡುತ್ತಿತ್ತು.

ಯಾಕಾರು ಮಾತೆತ್ತಿದೆನೊ ಎಂದು ಮಂಕಾಗಿ ಸಣ್ಣಯ್ಯ ನಿಟ್ಟುಸಿರು ಬುಡುವುದ ಬಿಟ್ಟು ಬೇರೇನೂ ತೋಚದೆ ನಿಂತಿದ್ದನು. ಹೆಡ್ತಿ ಚಲುವಮ್ಮ ಈಗಾಡಿದ ಮಾತು ಅವನ ತಲೆಗೂ ಸಿವುರಾಗಿತ್ತು. ಅವ್ವ ಧಮಾರ್ ಅನ್ನಲು ನೆಲವ ಕುಟ್ಟುತ್ತ ತಟ್ಟುತ್ತ ರಡಿಯಾಗುತ್ತಿದ್ದಳು. ಉಸುರು ಅನ್ನೊದ ಹಿಡಿದು ಮಗ ನಿಂತಿದ್ದನು. ಕೂಸು ತನ್ನಜ್ಜಿ ಸುತ್ತ ತವುದಾಡುತ್ತಿತ್ತು.

ಸಾಕವ್ವ ನೆಲ ಸವುರುವುದ ಕುಟ್ಟುವುದ ನಿಲ್ಸಿ 'ಕೇಳ್ದೇನೋ ಗ್ರಾಸ್ತ ನಿನ್ನೆಡ್ತಿ ಮಾತ...?' ಎಂದು ಒಂದು ಸಲ ಚೀರಿದಳು. ಆ ಚೀರು ಹಟ್ಟೀನ ಒಂದು ಸಲ ಕಿತ್ತುಕೊಂಡು ಇಡೀ ಹಟ್ಟೀನ ಒಂದು ಸಲ ಅಲ್ಲಾಡಿಸಿತು. ಮಗನಿಗೆ ಬಾಯಿ ಬರಲಿಲ್ಲ. ದುಕ್ಕವೇ ಬಾಯಿಬುಟಗೊಂಡು ಕುಂತಥರ ಅವ್ವ ಕೂತಿದ್ದಳು. ಮಗನ ದಿಕ್ಕಿಂದ ಮಾತು ಹುಟ್ಟದಿರಲು ಇನ್ನೊಂದು ಸಲ ಅವ್ವ 'ಕೇಳ್ದೇನೋ ಗ್ರಾಸ್ತ ನಿನ್ನೆಡ್ತಿ ಮಾತ' ಎಂದು ಕೂಗಿದಳು. ಸಣ್ಣಯ್ಯ ಬಾಯಿಕಟ್ಟಿದವನಾಗಿ 'ಸುಮ್ಕಿರವ್ವ... ಸುಮ್ಕಿರು' ಅಂದನು. ಸಾಕವ್ವನ ಕ್ಯಾಣ ಅದಕ್ಕೂ ಎದ್ದಿತು. 'ನಿನ್ನ ಹೆಡ್ತಿ ಸುಮ್ಕಿರ್ಸಕ ಆಗ್ದವ, ನನ್ನ ಸುಮ್ಕಿರ್ಸಕ ಬಂದ್ಯಾ ನನ್ನ ಮಗ್ನೇ. ಸಭಾಸ್...ಸಬಾಸ್. ಅವುಳೇನಾರು ಈವತ್ತು ನನ್ನ ಹಟ್ಟೀಲಿ ಇದ್ರ ಅವುಳು ಅವಳಪ್ಪನ್ಗ ಹುಟ್ಟಿದ ಮಗಳಲ್ಲ... ಅಷ್ಟಿಯಾ ನಾ ಹೇಳೋದು...ಅಷ್ಟಿಯಾ ನಾ ಹೇಳೋದು...' ಎಂದು ಇಪ್ಪತ್ತು ಸಲ ಹೇಳಿದ್ದನ್ನು ಹೇಳುತ್ತ ಹೇಳತೊಡಗಿದಳು.

ಅತ್ಯಮ್ಮನ ಬಾಯಿಂದ ಆ ವಾಕ್ಯ ಬಂದುದೇ ತಡ ಕಿರುಮನೆಯಲ್ಲಿ ತಡಬಡ ದಡಬಡ ಸದ್ದು ಎದ್ದಿತು. ಸಣ್ಣಯ್ಯನಿಗೆ ನಿಲ್ಲಕೂ ಆಗದೆ ಹೂತ ಕಾಲು ಕಿತ್ತು ಕಿರುಮನೆ ದಿಕ್ಕ ನಡೆದನು. ನಡುಮನೆಯ ವಸ್ತುಲಲ್ಲಿ ತಂಗಿ ಗೌರಮ್ಮ ಕಣ್ತುಂಬಾ ನೀರು ತುಂಬಿ ನಿಂತಿದ್ದವಳು, ಅಣ್ಣಯ್ಯನ ಮೊಖ ಕಾಣುತ್ತಲೆ ಫಳಾರನೆ ಕಣ್ಣೀರ ಚಲ್ಲಿ 'ಅಣ್ಣೊ, ಅವ್ವ ಹೆಂಗಾರು ಪೇಚ್ಕಳಲಿ. ನಾನೇನ ಇಲ್ಗ ಆಸ್ತಿಗ ಬಂದಿದ್ದನಣ್ಣ. ಅವ್ವ ಬರ್ಕೊಡ್ತೀನಿ ಅಂದ್ರೂ ನಾನು ಬರಸ್ಕಂಡನಾ...' ಎಂದಳು. ಗೌರಮ್ಮನ ಹಿರಿಮಗ ಹುಟ್ಟಿದಲಾಗಾಯ್ತು ಬಿಳುಚಿಕೊಂಡಿರುವಂಥವನು ತಲತುಂಬಾ ಬಿಳಿ ದುಪ್ಪಟಿ ಹೊದ್ದು ನಡುಮನೆ ಗೋಡೆಗೆ ಮೊಖ ಹಾಕಿ ಕೂತವನು ಕಷ್ಟದಿಂದ ತಿರುಗಿ, ತನ್ನವ್ವ ಮಾವನ ಕಡೆಗೆ ನೋಡಿದನು. ನಡುಮನೆ ದೀಪಾಲೆ ಕಂಬದ ಬಳಿಯ ಮಸಿ ತೊಡೆಯೂತಲಿದ್ದ ಕಿರಿತಂಗಿ ಪುಟಗೌರಿ ಯಾವ ದಿಕ್ಕೂ ತಿರುಗೂ ನೋಡದೆ ಅಣ್ಣನಿಗೆ ಚುಚ್ಚುವಂತೆ 'ನಾನು ಯಾವೊತ್ತು ಈ ಹಟ್ಟೀಬುಟ್ಟು ಕಡ್ದು ಹೊಂಟೋದನೊ ಸಿವ್ನಾ...ಅಂತಿವಿನಿ' ಎಂದು ಮಾತೆಸೆದು ಮಸೀ ಕೆರೆಯತೊಡಗಿದಳು. ಸಣ್ಣಯ್ಯ ಗೌರಮ್ಮಗೆ 'ನೀನು ಸುಮ್ಕ ಒಳಕ್ಕ ನಡೆಯವ್ವ...' ಅಂದವನೆ ಕಿರುಮನೆಗೆ ಬಿರುಸಾಗಿ ಬಂದನು.

ಇತ್ತ ಹೊರಬಾಗಿಲು ತಳ್ಳಿಕೊಂಡು ಕಿರಿಮಗ ಗುರುಸಿದ್ದು ಒಳಬಂದನು. ಬಂದವನ ಕಣ್ಗೆ —ಅವ್ವ ಭೂಮಿಗಂಟಿ ಕುಂತ ಥರ, ಅಕ್ಕ ವಸ್ತುಲಿಗಂಟಿ ನಿಂತ ಥರ, ಕಿರುಮನೇಲಿ ತಡಬಡ ಗುಸುಪಿಸು, ಕಾಳಣ್ಣನ ನೆರುಕೇಲಿ ಸದ್ದಿಲ್ಲದ್ದು— ಕಂಡು, ಬಂದವನು ನಿಲ್ದೆ ಹಿಂದುಕೆ ತಿರುಗಿದನು. ಸಾಕವ್ವ, ಮಗ ಬಂದುದು ಕಂಡರೂ ಅವನೇ ಏನವ್ವ ಎಂದು ಕೇಳಲಿ ಅಂದುಕೊಂಡಿದ್ದು ಈಗ ಮಗ ಬಂದವನು ಮಂಗರಮಾಯ ಆಗುತ್ತಿರುವುದನು ಕಂಡು ಸಾಕವ್ವ 'ಗುರುಸಿದ್ದೂ'ಎಂದು ಕರೆಯುವಷ್ಟರಲ್ಲಿ ಅವುನು ಅಂಗಳಕ್ಕಿಳಿದು 'ಬಂದಿ ತಡಿಯವ್ವೆ' ಅಂದು ತಿರುಗೂ ನೋಡದೆ ಮರೆಯಾದನು.

ಇಲ್ಲಿ ಕಿರುಮನೆಯಲ್ಲಿ ಹೆಡ್ತಿ ಚಲುವಮ್ಮ ಸಾಮಾನು ಸರಂಜಾಮು ಕಟ್ಟೋದು, ಗಂಡ ಸಣ್ಣಯ್ಯ ಕಿತ್ತು ಕಿತ್ತು ಇಡೋದು, ಅವುಳು ಹಣೆ ಚಚ್ಚಿಕೊಳ್ಳೋದು ನಿಂತಾಗ ಇವುನು ಹಣೆ ಚಚ್ಚಿಕೊಳ್ಳೋದು, ನಡೀತಾ ಇತ್ತು. ಅವರ ಹಸಿಗೂಸು ಅಜ್ಜಿ ಹತ್ತಿರ ಆಡುತ್ತಿದ್ದರ, ಇನ್ನೊಂದೆಲ್ಲೊ ಹೊರಕ್ಕೋಗಿದ್ದು ಉಳಿದೆರಡು ಬೆಪ್ಪಾಗಿ ಅಪ್ಪ ಅವ್ವರ ಕಿತ್ತಾಟ ನೋಡ್ತ ಕೂತಿದ್ದವು. ಇದುವರಗೂ ಗಲುಗು ಗದ್ದಲಗಳನ್ನು ಬಾನಿಗಂಚುತ್ತಿದ್ದ ಹಟ್ಟಿಯು ಈಗ ತಲ್ಲಣಗೊಂಡು ಕೇವಲ ನಡುಗುವಂತಿತ್ತು.

ಆಗ ಮಾರಿಗೊಂದು ಹೆಜ್ಜೆ ಇಡುತ್ತ ಹಿರಿಮಗ ಕಾಳಣ್ಣ ಒಳ ಬಂದನು. ಅವ್ವನ ಕಂಡು, ಏನೊ ಆಗದೆ ಅನ್ನಿಸಿ 'ಏನವ್ವೌ' ಅಂದರೂ ಆ ಅವ್ವ ಬಿಟ್ಟಂಥ ಕಣ್ಬಾಯ ಮುಚ್ಚದೆ ಅಥವಾ ತಗೆಯದೆ ಕೂತಿರಲು, ಸರಸರ ತನ್ನ ನೆರುಕೆಗೆ ಬಂದನು. ಬಂದವನ ಕಿವಿಗೆ ಅವುನು ಉಸ್ಸೊ ಎಂದು ಕೂರುವ ಮೊದಲು, ಹೆಂಡತಿ ಕೂತಿದ್ದವಳು ಆದುದ್ದ ಒಂದೂ ಬುಡದೆ ತುಂಬಿದಳು. ಕಾಳಣ್ಣ ತನ್ನ ದೊಡ್ಡ ಘಟವನ್ನು ಹಿಡಿಮಾಡಿ ಕೂತನು. ಬೇಕಾದರೆ ಸುತ್ತಾ ನಾಕು ಗ್ರಾಮಕ್ಕೆ

ತಿಳುವಳಿಕೆ ಹೇಳಿ ಸೈ ಅನ್ನಿಸಿಕೊಂಡರೂ ತನ್ನ ಹಟ್ಟೀಲಿ ಕ್ಯಾಬಿನ್ಯೆ ಆಗುತ್ತಿತ್ತು. ಹೆಡ್ತಿಗೆ 'ಏನ್ಮಾಡಿದ್ದೀಯಾ' ಎಂದು ಕೇಳಿದನು. ಹೆಡ್ತಿ 'ಟೀನೀರು ಕಾಯ್ಸಿವ್ನಿ. ನೆನ್ನ ಸಂತ ಕಳ್ಳಪುರಿ ಒಂದಷ್ಟವೆ' ಅಂದಳು.

ಆಗಲೆ ಚಲುವಮ್ಮ ಸಣ್ಣಯ್ಯನಿಂದ ಕೊಸರಾಡಿ ಕಿತ್ತುಕೊಂಡು ತನ್ನ ಬಟ್ಟಬರೆ ತುಂಬಿದ್ದ ತೌರಟ್ರಂಕ ಎಡಗ್ಯೆಲಿ ಹಿಡ್ಕಂಡು ಬಲಗೈಲಿ ಅವಳ ಎರಡನೆ ಮಗನ ಎಳ್ಕಂಡು ಕಿರುಮನೆಯಿಂದ ಬರುತ್ತಿದ್ದಳು. ಆ ಹೈದ 'ಬುಡವ್ವೊಂ ಬುಡವ್ವೊ' ಎಂದು ಅವ್ವನಿಂದ ಕಿತ್ತುಕೊಳ್ಳುತ್ತಿತ್ತು. ಚಲುವಮ್ಮ ರೋಷಗೊಂಡು ಆ ಹೈದನ ಜಾಡಿಸಿ ತಳ್ಳಿ ಆಮೇಲ ಟ್ರಂಕ ಭಾರಕ್ಕೂ ಜಗ್ಗದೆ ಅದರಜ್ಜಿ ಪಕ್ಕ ಆಡುತ್ತಿದ್ದ ಕೂಸನ್ನು ಎತ್ತಿ ರಭುಸವಾಗಿ ಕಂಕುಳಿಗೆ ಒಂದುಸಲ ಕುಕ್ಕರಿಸಿಕೊಂಡಳು. ಆ ಕೂಸಿಗೆ ಗಕ್ಕಿಟ್ಟಂತಾಗಿ ಚೀರಿತು. ಅವಳ ಹಿಂದೆ ನಿಂತು ಗಂಡ ಸಣ್ಣಯ್ಯ 'ಯಾನಮ್ಮೀ ನೀ ಮಾಡೋದು...ಯಾನಮ್ಮೀ ನೀ ಮಾಡೋದು' ಅನ್ನುತ್ತ, ಬೆಬಗರಿಯುವುದ ಬಾಕಿ ಉಳಿಸಿಕೊಂಡು ನಿಂತಿದ್ದನು.

ಕಾಳಣ್ಣ ಒಳಗಿದ್ದವನು ಹೊರಬಂದು ನಿಲ್ಲಲು ಎಲ್ಲವೂ ಚಣ ಅಲ್ಲಲ್ಲೆ ನಿಂತಿತು. ಕಾಳಣ್ಣ ಎಲ್ಲರನೂ ಒಂದು ಸಲ ನೋಡಿ, ಕಿರುಮನೆ ದಿಕ್ಕು ಬೆರಳುಮಾಡಿ ಚಲುವಮ್ಮನಿಗೆ—'ನೀ ಮೊದ್ಲು ಒಳಕ್ಕೋಗು ಇವ್ವಾ' ಅಂದನು. ಚಲುವಮ್ಮ ಹಿಡಿದಿದ್ದ ಟ್ರಂಕ ನೆಲಕೆ ದಬ್ಬನಿಟ್ಟು ತಾನು ಕೊಸಕ್ಕನೆ ಕೂತು, ಕೂಸ ಆಡಲು ಕೆಳಬಿಟ್ಟು ' ಅಲ್ಲಕನ್ನಿ ಭಾವಯ್ಯ... ಈ ಮನೇಲಿ ನಾ ಏನಂದ್ರೂ ತಪ್ಪಾಯ್ತದಲ್ಲ.... ನಾನು ಇರ್ಬೇಕ ಸಾಯ್ಬೇಕ...' ಎಂದು ಸೆರುಗ ಮೊಖಕ್ಕೆ ಮುಚ್ಕಂಡು ಗೋಳೆಂದಳು. ಚಲುವಮ್ಮನ ಅಳು ಕಂಡು ಅವಳ ಎರಡನೆ ಮಗನೂ ಬಾಯಿತಗುದು ಅವ್ವನ ಅಳುಗೆ ತನ್ನ ದನೀ ಕೂಡಿಸಿತು. ಸಾಕವ್ವ ಕೈಯಾಡಿಸೂತ 'ಅವ್ವವ್ವಾ... ಈ ಘನಗರ್ತಿ ಮಾತ್ ನೋಡ್ರವ್ವ...' ಎಂದು ಚಲುವಮ್ಮನ ದಿಕ್ಕು ನಟಿಕೆ ಮುರಿದಳು. ಬಚ್ಚಲ ದಿಕ್ಕಿಗೆ ತವೆಯುತ್ತಿದ್ದ ಕೈಗೂಸ ಗೌರಮ್ಮ ಎತ್ತುಕೊಂಡಳು. ಚಲುವಮ್ಮನ ಪಕ್ಕದಲ್ಲಿದ್ದ ಟ್ರಂಕ, ಸಣ್ಣಯ್ಯ ಕೈಲಿಡುದು ಕಿರುಮನೆಗೆ ನಡೆಯುತಲೆ ಚಲುವಮ್ಮ ಸೊರಗುಟ್ಟುತ್ತ ಎದ್ದು ಗಂಡ ಮತ್ತು ಟ್ರಂಕ ಅನುಸರಿಸಿ ನಡುದು ಕಿರುಮನೆಯಲಿ ಕುಕ್ಕರಬಡಿದಳು.

ಅಷ್ಟಾಯ್ತು. ಅಲ್ಲಿಗೆ ಕಾಳಣ್ಣನಿಗೆ ನಿಲ್ಲಕಾಗದೆ ಮನೆತುಂಬೆಲ್ಲ ಒಂದ್ಸಲ ಕಣ್ಣ ಕೆಂಪಗಾಡಿಸಿ "ಅಲ್ಲಾ ಕನ್ರಮ್ಮೇ...ಹಟ್ಟೀಯಮ್ಮಕಳೆಲ್ಲ ಎತ್ತಾಗು ಹೋಗ್ದೇನೆ ಗುಡ್ಡಾಕ್ಕಂಡಿದ್ದೀರಲ್ಲ... ನಿಮ್ಗ ಉಣ್ಣಾಕ ಬಾನಿಂದ ಇಳ್ದು ಬಂದದಾ...' ಅಂದನು. ಯಾರ ಬಾಯಿಂದೂ ಮಾತು ಹೊರಡದೆ ಕೊನೆಗೆ ತಂಗಿ ಗೌರಮ್ಮ 'ಕೆಲ್ಸಕ ಕರದ್ರಲ್ವಣ್ಣ ವೋಗದು. ನಾವೂನು ಮೇಲ್ಬಿದ್ದು ಮೇಗಲ ಕೇರಿನೆಲ್ಲ ತಿರಿಕಂಡು ಬಂದ್ವು. ನೀ ಯಾರ ಅನ್ನೋರಿಲ್ಲ' ಅಂದಳು. ಕಾಳಣ್ಣ ನಿಂತವನು ನಿಂತಿದ್ದನು.

ಆಗ ಕಿರುಮನೆಯಿಂದ ಚಲುವಮ್ಮ ಕೈಲಿ ಕುಡ್ಲು ಹಿಡಿದು ಹೊರಬಂದು ಕಾಳಣ್ಣನ ಹೆಡ್ತಿಗೆ 'ಅಕ್ಕಯ್ಯ...ಬನ್ನೀ ಸೌದೆಗಾರು ಹೋಗಿದ್ದು ಬರೋವು' ಅಂದಳು. ಅದಕ್ಕ ಕಾಳಣ್ಣನ ಹೆಡ್ತಿ 'ಅಯ್ಯೋ ತಡೀ ತಾಯಿ, ಇವ್ರು ಈಗ ತಾನೆ ಬಂದ್ರು. ಉಣ್ಣಾಕಿಕ್ಕು ಬುಡ್ತೀನಿ. ಸೌದಗೇನ ಸಂಜಗೋದ್ರೂ ಒಂದಿಷ್ಟು ತರಬೌದು...' ಅಂದು ಗಂಡನಿಗ 'ಇನ್ನು ಬನ್ನಿ ಮತ್ತ' ಅಂದಳು. ಕಾಳಣ್ಣ ಅಲ್ಲೆ ನಿಂತು 'ಅವ್ವಗ ತಂದ್ಕೊಡು' ಅಂದನು. ಕಾಳಣ್ಣನ ಹೆಡ್ತಿ ಒಳಗಿಂದ ಒಂದು ಬೋಸೀಲಿ ಟೀನೀರು, ಒಂದು ಮೊರದಲ್ಲಿ ನಾಕು ಹಿಡಿ ಪುರಿ ತಂದು ಸಾಕವ್ವನ ಮುಂದಿಟ್ಟಳು. ಸಾಕವ್ವ 'ಅಯ್ಯೊ ನನ್ಗ ಬ್ಯಾಡಕಾ... ನನ ಕಂದ' ಅಂದಳು. ಕಾಳಣ್ಣ 'ಸುಮ್ನ ಕುಡಿಯವ್ವ ಮತ್ತ' ಅಂದನು. ಕಾಳಣ್ಣನ ಹೆಡ್ತಿ 'ಅವ್ರು ಕುಡದ್ರು ಕಣ...ನೀವ್ರು ಕುಡೀರಿ ಅತ್ಯವ್ರು' ಅಂದ್ಳು.

ಸಾಕವ್ವ ಮೂರು ಪುರೀನ ತಗದು ಚಿಕ್ಕವನ ಕೂಸಿನ ಮುಂದಿಟ್ಟು ನಾಕು ಪುರಿ ತಗದು ತನ್ನ ಬಾಯ್ಗೆ ಹಾಕ್ಕೊಂಡು 'ಗೌರಿ ತಕ್ಕೊ... ಆ ನಿನ್ನ ಹಿರೀಗಂಡ್ಗೇಡು ಕೊಡು' ಅಂದಳು. ಗೌರಮ್ಮ ಒಂದು ಹಿಡಿ ಪುರಿ ಈಸ್ಕಂಡು ತನ್ನ ಹಿರೀಮಗನಿಗೆ ನೀಡಿದಳು. ಆ ಹೈದ ತೊಗಟ ತೆಗೆದ ಕಡ್ಡಿಯಂತಿದ್ದ ತನ್ನ ಕೈ ನೀಡಿತು.

ಗೌರಮ್ಮನ ಆ ಹಿರೀ ಹೈದ ಕೊಟ್ಟಿದ್ದ ಈಸ್ಕಂಡು ತಿಂದ್ಕಂಡು ಅದರಷ್ಟಕ್ಕೆ ಅದಿತ್ತು. ಅದಕ್ಕೆ ಇದ್ದಂಥ ಕಾಯಿಲೆ ಯಾವ ಕಾಲಕ್ಕು ವಾಸಿಯಾಗುವುದಲ್ಲ ಎಂದು ಅದ ನೋಡಿದವರು ಅದರೊಡನೆ ಅದರ ಅವ್ವನೂ ಅಂದುಕೊಂಡಿದ್ದರು. ಅದೂನು ಅಂತಲೇ ಅಂದುಕೊಂಡಿತ್ತು. ಅದು ಯಾವಾಗಲೂ ಒಂದು ಬಿಳಿದುಪ್ಪಟಿಯ ತಲಮುಚ್ಚುವಂತೆ ಹೊದ್ದುಕೊಂಡಿರುತ್ತಿದ್ದು ಅದನ್ನು ಒಂದು ಚಣವೂ ಬಿಟ್ಟಿರುತ್ತಿರಲಿಲ್ಲ. ಅದಕ್ಕೇ ಅದರ ಚಿಕ್ಕಮಾವ ಗುರುಸಿದ್ದು ಆ ಹೈದನಿಗೆ ದುಪ್ಪಿಕಮಿಷನರು ಎಂದು ಕರೆಯುತ್ತಿದ್ದು ಈಗ ಅದೇ ಹೆಸರು ನಿಂತಿತ್ತು. ಅದರ ಹುಟ್ಟೆಸರು ಆ ಹೈದಗು ನೆಪ್ಪಿದ್ದಂತೆ ಕಾಣದು. ಆ ಹೈದ ಈ ಲೋಕದಿಂದ ಎಂದೋ ಚುಕ್ತವಾದ್ದು ಎಂದೇ ಎಲ್ಲರೂ ಅಂದುಕೊಂಡಿದ್ದರು. ಅದರಷ್ಟಕ್ಕೆ ಅದು

ಕೂತಿರುತ್ತಿತ್ತು. ಉಳಿದ ಯಾಪಾರಗಳು ಅವರಷ್ಟಕ್ಕೆ ಅವು ನಡೆಯೂತ ಹೋಗುತ್ತಿದ್ದವು. ದೀಪಾಲೆ ಕಂಬದ ಬಳಿಯ ಮಸೀನ ಪುಟಗೌರಿ ಪೂರ್ತ ತೊಡದು ಈಗ ಬೆಳ್ಳಗ ಕಾಣುತ್ತಿತ್ತು.

೩

ನಡೊತ್ತಿನಲಿ ಕೈಲಿ ಸ್ಕೂಲುಪ್ಪಿಟ್ಟು ಹಿಡಿದು ಇಸ್ಕೋಲು ಮುಗುಸಿ ಶಿವೂ ಬಂದನು. ಮೇಲ ಉರಿಯೊ ಸೂರ್ಯ ನೆಲಕ್ಕೆ ಕೆಂಡ ಉಗುಳುತ್ತಿದ್ದನು. ಆ ಝಳಕ್ಕೆ ಹಟ್ಟಿ ಸುಸ್ತಾಗಿ ಬೆವುತು ಮಲುಗಿತ್ತು. ಸಾಕವ್ವ ಕುಂತಲ್ಲೆ ತೂಕಡಿಸಿಕೊಂಡು ವಾಲಾಡುತ್ತಿದ್ದಳು. ದೊಡ್ಡಮಾವ ಕಾಳಣ್ಣ ತನ್ನ ನೆರುಕೆ ಬಾಗಲಿಗೆ ತಲ ಹಾಕ್ಕೊಂಡು ಒಳಕ್ಕ ಕಾಲಾಕಿಕೊಂಡು ಗೊರಕೆ ವಡೀತ ಮಲಗಿದ್ದನು. ಮಾವನ ತಲ, ಮಾವನ ಹೆಡ್ತಿ ತೊಡ ಮೇಲಿತ್ತು. ಅವಳು ಮಾವನ ತಲೇನ ಬಗ್ದು ಬಗ್ದು ನೋಡ್ತ ಹೇನು ಬೇಟೆಯಲ್ಲಿ ಮುಳುಗಿದ್ದಳು. ನಡುಕಲ ಮಾವ ಸಣ್ಣಯ್ಯ ಎಲ್ಲೋ ಹೋಗಿದ್ದನು. ಅವನ ಎರಡು ಹೈಕಳು ಅಂಗಳದಲ್ಲೇ ಬಿದ್ದುಕೊಂಡಿದ್ದವು.

ಅತ್ತ, ಕಿರುಮನೆಯೊಳಗ ಚಲುವಮ್ಮ ಮಲೀಕಂಡು ತನ್ನ ಕೂಸ ತಟ್ಟೀ ತಟ್ಟಿ ಮಲಗಿಸುತ್ತಿದ್ದಳು. ಅವಳ ತಲೆದೆಸೆಯಲ್ಲಿ ಕೂತು ಅವಳ ಎರಡನೆ ಹೈದ ಬೋಸಿಯಲ್ಲಿ ಮಿಕ್ಕಿದ್ದ ಉಳುಕೆ ಅಂಬಲಿಗೆ ನಾಲಗೆ ಅರ್ಪಿಸಿತ್ತು. ಇತ್ತ ನಡುಮನೇಲಿ ಶಿವೂ ಅವ್ವ ಗೌರಮ್ಮ ನೆಲಕ್ಕೆ ಸೆರುಗ ಹಾಸ್ಕೊಂಡು ತನ್ನ ಹೀರೀಮಗನ ಪಕ್ಕ ಮಲಗಿದ್ದಳು. ಶಿವೂ ಅಣ್ಣ ದುಪ್ಪಿಕಮಿಷನರು ಬಿಳಿ ದುಪ್ಪಟಿ ಹೊದ್ದುಕೊಂಡು ಅಲ್ಲಾಡದೆ ಕುಂತಿದ್ದು ಗೋಡೆ ನೋಡುತಲಿತ್ತು.

ಆ ನಡುಮನೆ ಬೆಳುಕಲ್ಲಿ ಶಿವೂನ ಚಿಕ್ಕಮ್ಮ ಪುಟಗೌರಿ ಕುಕ್ಕರಗಾಲಲ್ಲಿ ಕೂತು ಲಂಗದ ಮೇಲಕ್ಕ ಸೀರೇನ ಎತ್ತಿಕಟ್ಟಾಕ್ಕೊಂಡು, ಒಂದು ಗಳಾಸಲ್ಲಿದ್ದ ನೀರಿಗೆ ನೀಲಿ ಕಲಸುತ್ತಿದ್ದಳು. ಶಿವೂ ಬಂದು ಎದುರಾ ನಿಲ್ಲುತಲೆ ಅವುಳು ತುಟೀಯ ಹಿಂದಕೂ ಮುಂದಕೂ ಮಾಡಿ 'ನವುಲು ಬರೀತೀನಿ ನೋಡ್ಕ' ಅಂದಳು. ಶಿವು ಎಷ್ಟಾಗುತ್ತೊ ಅಷ್ಟೂ ಕಣ್ಣಗಲಿಸಿ ಅಲ್ಲೇ ಕೂತಿತು.

ನೀಲಿ ಕಲಸಾದ ಮೇಲ ಪುಟಗೌರಿ ಶಿವೂ ಕೈಲಿದ್ದ ಸ್ಕೂಲುಪ್ಪಿಟ್ಟು ನೋಡಿ 'ತಿಂದ್ಕ ಅದ' ಅಂತಲೆ ಶಿವೂ 'ನಿಂಗೂ ವಸಿ ಬೇಕ' ಅಂದನು. ಅದಕ್ಕವಳು 'ಬ್ಯಾಡ... ನಿಮ್ಮಣ್ಣನ್ಗು ವಸಿಕೊಟ್ಟು... ನೀನೊಸಿ ತಿಂದ್ಕ' ಅಂದಳು. ಶಿವೂ ಆ ಉಪ್ಪಿಟ್ಟನ್ನು ಎರಡು ಭಾಗ ಮಾಡಿ ಒಂದೊಂದು ಕೈಲು ಒಂದೊಂದು ಹಿಡಿದು ಅದರಣ್ಣ ದುಪ್ಪಿಕಮಿಷನರ ಬಳಿಗೆ ಬಂದು, ಒಂದು ಕಯ್ಯನೀಡಿ 'ಅಣ್ಣೋ ಅಣ್ಣೋ' ಅಂತು. ಆ ಅಣ್ಣ ಕುಂತೇ ಇದ್ದು, ಎಷ್ಟೊ ಹೊತ್ತು ಆದಮೇಲ ತಮ್ಮನ ದಿಕ್ಕ ತಿರುಗಿ ಕಯ್ಯ ನೀಡಿತು.

ಈಚಲ ಕಡ್ಡೀಗ ನೀಲಿ ಅಜ್ಜುಕೊಂಡು ಪುಟಗೌರಿ ನವುಲ ಕಾಲಿಂದ ಆರಂಭಿಸಿದಳು. ಪುಟಗೌರಿಯ ಕೈಗಳಿಗೆ ತನ್ನ ಕಣ್ಣು ಕೊಟ್ಟುಬಿಟ್ಟಿದ್ದ ಶಿವೂ "ಅಯ್ಯೋ ಚಿಕ್ಕಿ ಎಲ್ಲಾರು ಮೊದ್ಲು ಕಾಲು ಬರ್‍ದಾರ" ಎಂದು ಬೆರುಗಿಂದ ಅಂದಿತು. ಪುಟಗೌರಿ ಗೋಡೇಲಿ ಕೈಯ ಆಡಿಸುತ 'ನೀ ಸುಮ್ಕಿರಪ್ಪ, ನಾ ಬರೆಯಗಂಟ' ಅಂದು ಯಾವುದೋ ಪದ ಕುರುಕುತ್ತ ಕಯ್ಯ ಆಡಿಸಿದಳು. ಶಿವೂ ಸುಮ್ಮಾಗಿ ಕೈಲಿದ್ದ ಉಪ್ಪಿಟ್ಟು ಮುಗ್ಸಿ, ಪುಟಗೌರೀಯ ಬೆರಳುಗಳು ಆಡಿದ ಕಡೆ ತನ್ನ ಕಣ್ಣಾಡಿಸುತ್ತಲಿದ್ದು ಆಮೇಲ ನೆಲದಲಿ ಸಿಲೋಟ ಇಟ್ಟು ಆಮೇಲ ತನ್ನ ಇಡೀ ದೇಹವ ಅದರ ಮೇಲಕೆ ದಬ್ಬಾಕಿ ಆಮೇಲ ತಾನೂವಿ ನವುಲ ತಲೆಯಿಂದ ಆರಂಭಿಸಿ ಬಳಪ ಓಡಾಡಿಸಿದನು.

ಹೀಗಾಗುತ್ತ ಎಷ್ಟೊ ಹೊತ್ತಾದ ಮೇಲ ಪುಟಗೌರಿ 'ನೋಡಪುïŒ ಈಗ'ಅಂತಲೆ, ತಲೇನ ಸಿಲೋಟಲ್ಲಿ ಮುಳುಗಿಸಿ ನವುಲ ಬರೀತಿದ್ದ ಶಿವೂ ತಲ್ವ ಎತ್ತಿ ನೋಡಿದರೆ, ನಡುಮನೆ ಗೂಡಿನ ಬಲಪಕ್ಕದಲ್ಲಿ ನೀಲಿಲಿ ಮೂಡಿದ್ದ ನವುಲು ಶಿವುನ ನೋಡ್ತ ಕುಣೀತಿತ್ತು. ಶಿವೂಗೆ ತಡಕೊಳ್ಳಾಕಾಗದೆ 'ವುಜ್ಜೋ ಎಷ್ಟು ಚಂದಾಗದೆ...' ಎಂದು ಚಪ್ಪಾಳೆ ತಟ್ಟಲು ಅವನ ಆ ಚಪ್ಪಾಳೆ ಗಲುಗು ಹಜಾರದಲ್ಲಿ ತೂಕಡಿಸ್ತ ವಾಲಾಡ್ತ ಕೂತಿದ್ದ ಸಾಕವ್ವನ ಎಚ್ಚರ ಮಾಡಿತು. ಅವಳು ಕಣ್ಣು ಬುಡದೇನೆ ವಾಲಾಡ್ತಾನೆ — 'ಯಾರಮ್ಮಿ ಕೂಸ ಒಳ್ಗಾ' ಅಂದಳು. ಪುಟಗೌರಿ 'ನಾನುಕವ್ವೆ' ಅಂದಳು. ಸಾಕವ್ವ 'ನಡುಮನ ಗೂಡಲೀ ಒಂದೆಲ ಅಡ್ಕ ಇದ್ರ ಎಸಿ' ಎಂದು ವಾಲಾಡಿದಳು. ಪುಟಗೌರಿ 'ಇಲ್ಲಿ ಇಲ್ಲಕವ್ವೆ' ಅನ್ನುತ್ತಿದ್ದಂತೆ ಶೀವೂ ನಡಗೇಲಿ ಸಡಗರ ತುಂಬಿ ಅಜ್ಜಿ ಹತ್ತಿರಕ್ಕೆ ಬಂದು 'ಅಮ್ಮಯ್ ಪುಟಗೌರಿ ಚಿಕ್ಕಿ ನವುಲು ಬರ್‍ದವಳೆ! ನೋಡು ಬಾ...' ಅಂತು. ಸಾಕವ್ವ ಕಣ್ಬುಟ್ಟು 'ತಗಾ ಅದ್ಯಾರೊ ಒಬ್ಬಳು ಕುಟ್ಟೊ ಬತ್ತ ಬುಟ್ಟು ಹುಟ್ಟೋ..... ನೋಡ್ಕತ್ತಿದ್ಲಂತೆ...' ಅಂದು ಮತ್ತೂ ಕಣ್ಮುಚ್ಚಿ ನಿದ್ದೆ ತುಂಬಿಕೊಂಡು ವಾಲಾಟಕ್ಕೆ ಒಳಗಾದಳು. ಅವ್ವನ ಮಾತುಗಳು ಪುಟಗೌರಿ ಕಿವಿಗೆ ಚಿವುಟಲು ಅವುಳು 'ವೂಕವ್ವೊïº ಇಲ್ಲಿ

ಬತ್ತ ಕುಟ್ಟಾಕ ಗುಡ್ಡಾಕಿ ಮಡ್ಗದ' ಎಂದು ಮಾತೆಸೆದು ಇನ್ನೊಂದು ಪಕ್ಕದಲ್ಲಿ ನವುಲು ಬರೆಯಲು ಕಣ್ಣಂದಾಜು ಇಡುತ್ತ ನಿಂತಳು.

ಹೀಗಾಗುತ್ತ, ಕೊನೆಗೆ ಸಾಕವ್ವನ ಕಣ್ಗಳಿಂದ ನಿದ್ದ ಅನ್ನೋದು ನೆಗದು ಹೋಯಿತು. ನೋಡುತಾಳೆ — ಬಾನಿಂದ ಕತ್ತಲ ಹನಿಗಳು ಭೂಮಿಗೆ ಉದುರುತ್ತಿದ್ದವು.ಮೊಮ್ಮಗೂಸು ಶಿವೂ ಅಲ್ಲಿ ಇದ್ದಬದ್ದ ಬೆಳುಕನ್ನು ಕಣ್ಗೆ ತುಂಬುಕೊಂಡು ಪುಸ್ತಕ ಸಿಲೋಟ ಕಣ್ಗಂಟಿಸಿ, ನೂರು ರೂ. ಗೆ ವರ್ಷಕ್ಕೆ ಹನ್ನೆರಡು ರೂ. ಬಡ್ಡಿಯಂತೆ ಎರಡು ವರ್ಷಕ್ಕೆ ಎಷ್ಟು ಬಡ್ಡಿ— ಎಂದು ಬಾಯಲ್ಲಿ ಹೇಳ್ತ ಲೆಕ್ಕ ಮಾಡುತ್ತಿತ್ತು. ಹಿಂದಲ ನೆಪ್ಪಿಗೆ ಸಾಕವ್ವ ಬಿದ್ದು, ಶಿವೂನ ಕರೆದು 'ನೋಡಪ್ಪು ಆಗ ನಿಮ್ಮವ್ವ ನಿಂಗ ಏಡು ತಿಂಗಳ ಬಾಣ್ತಿ... ನಾನು ಕೊಳ್ಳೆಗಾಲದಿಂದ ಹನ್ನೆಡು ರೂಪಾಯ್ ಕೊಟ್ಟು ತಂದಿದ್ನಲ್ಲ, ಆ ದೊಡ್ಡ ಚಲುಗವ ರತುನವ್ವನ ಹಟ್ಟೀಲಿ ಆರು ರೂಪಾಯ್‌ಗೆ ಅಡು ಇಟ್ಟಿವ್ನಿ. ಈಗ್ಗ ಅಸ್ಲು ಬಡ್ಡಿ ಸೇರಿ ಎಷ್ಟಾದ್ದು ಹೇಳು ಮತ್ತ...' ಅಂದಳು. ಶಿವೂ ಹೇಳ್ತೀನಿ ತಗಾ ಅನ್ನೊ ಮೊಖ ಮಾಡಿ ಕೂಡ್ದ ಕಳ್ದ ಸಿಗಲಿಲ್ಲ. ಆಗ ಮಿಂಚಿನಂತೆ ಶಿವೂ 'ಬಡ್ಡಿ ಎಷ್ಟ' ಅಂದ. ಸಾಕವ್ವ 'ಅಷ್ಟೂ ಗೊತ್ತಿಲ್ವಾ ನಿಂಗ. ರುಪಾಯ್ಗ ತಿಂಗಳ್ಗ ಒಂದಾಣಿ ಬಡ್ಡಿ' ಅಂದಳು. ಶಿವೂ ಹಾಗೂ ಹೀಗೂ ಮಾಡೂ ದಕ್ಕದೆ 'ಹೋಗಮ್ಮೋ ನಾ ಓದ್ಕಬೇಕು...' ಎಂದು ಸಾಕವ್ವನ ಕೈ ಕೊಸರಿ ಎದ್ದು ಮೊದಲಿದ್ದಲ್ಲಿಗೆ ಬಂದನು.

ಈಗ ಶಿವೂ ಪುಸ್ತಕಕೆ ಕಣ್ಣಾಕಲು, ಕಣ್ಣಾಕಿದರೆ ಆಗಲೆ ಕತ್ತಲು ಅನ್ನೋದು ಇದ್ದ ಬದ್ದ ಬೆಳುಕನ್ನೆಲ್ಲ ನೆಲಕೆ ತುಳುದುಬುಟ್ಟಿತ್ತು. ಕಿರುಮನೇಲಿ ಮಾತ್ರ ಆಗ ಹಚ್ಚಿದ್ದ ದೀಪದ ಬೆಳಕು ಕೊಣಮಿಣಿ ಕೊಣಮಿಣಿ ಅಂತ ಕಿರುಮನೆ ವಸ್ತುಲ ಕಡದು ಹೊರಕ್ಕೆ ಮೊಖ ಹಾಕಿ ಒಳಕ್ಕೋಗದು, ಹೊರಕ್ಕ ಮೊಖಹಾಕಿ ಒಳಕ್ಕೋಗದು ಮಾಡ್ತಿತ್ತು. ಶಿವೂ ಕುಂತಲ್ಲಿಂದಲೆ 'ಸೊಳ್ಳ ಹತ್ಸವೊïº' ಅಂದನು. ಒಳಗಿಂದ ಗೌರಮ್ಮ ಬಂದು 'ತಾಡಪುïŒ, ಚಿಕ್ಕಿ ನಾಳಕ ಕಂಬ್ಳಕ ಬತ್ತೀನಿ ಅಂದ್ಬುಟ್ಟು ದುಡ್ಡ ಈಸ್ಕಬರಾಕ ವೋಗೌಳೆ... ಬಂದ್ಮೇಲ ಎಣ್ಣ ತತ್ತೀನಿ' ಅಂದಳು. ಶಿವೂ ಸುಮ್ಮನಾಗ್ದೆ 'ಈಗ ನಾ ಓದ್ಕಬೇಕಲ್ಲ' ಎಂದು ಅಳುಕಚ್ಚುತ್ತಲೇ ಗೌರಮ್ಮ ಖಾಲಿಸೊಳ್ಳ ಕೈಲಿಡಿದು ಕಿರುಮನೆಗೆ ಬಂದು ಚಲುವಮ್ಮನಿಗೆ 'ತಾಯೆ, ಒಂದು ಸೊಳ್ಳು ಎಣ್ಣ ಬುಟ್ಕೊಡವ... ತಂದ್ಮೇಲ ಕೊಡ್ತೀನಿ' ಅಂದಳು. ಚಲುವಮ್ಮ 'ಅಯ್ಯೋ ಎಲ್ಲಿದ್ದದು ಅತ್ಗಮ್ಮ... ಸಿವೂ ಬಾಪುïŒ ಇಲ್ಲೆ ಓದ್ಕ...' ಅನ್ನುತ್ತಲೆ ಶಿವೂ ಸಿಲೋಟು ಪುಸ್ತಕದೊಡನೆ ಕಿರುಮನೆಗೆ ಬಂತು. ಅದರವ್ವ ಖಾಲಿ ಸೊಳ್ಳ ಹಿಡಿದು ನಡುಮನೆಗೆ ನಡೆದಳು. ಪುಟಗೌರಿ ಬರಿಕಯ್ಯ ಬೀಸುತ್ತ ಒಳಬಂದಳು.

೪

ಅಲ್ಲೊಂದು ಇಲ್ಲೊಂದು ಹೊಗೆಯಾಡಿದವರ ಮನೆಗಳ ಹಿಟ್ಟುನ ಮಡಕೆ ಸದ್ದುಗಳು ಏಳ್ತ ಬೀಳ್ತ ಬಂದು ಸಾಕವ್ವನ ಕಿವೀಲಿ ನಿಂತು ಕರೆಯೋಲೆ ನೀಡಿದವು. ಸಾಕವ್ವ ಶಿವೂನ ಕರೆದಳು. ಶಿವೂ ಬಂತಲೆ 'ಬಾಪುïŒ ವಸಿ ನನ್ನುಂಜನ ನೋಡ್ಕಂಡು ಬರೋವು' ಅಂದಳು. ಶಿವೂ ಆ ಊ ಅಂದು 'ಹುಂಜ ಇದ್ದಿದ್ರ ಬಂದಿರೋದು... ಈಗ ಕತ್ಲಲ್ಲಿ ನಂಗ ಹೆದ್ರಕ... ಹೋಗಮ್ಮೊ' ಅಂದನು. ಸಾಕವ್ವ ಕಾಲು ನೀಟಿ ಕೂತವಳು ಅಂದಳು:

'ಅದ್ಯಾಕ ನಾ ಇಲ್ವ?'

'ನೀ ಇದ್ರ?'

'ಯಮದವರೂ ಓಡೋಯ್ತರ!'

ಶಿವೂಗೆ ಅದನ್ನು ತನ್ನ ಕಣ್ಣುಗಳಿಗೆ ತಂದುಕೊಳ್ಳಲು ಸಿಗಲಿಲ್ಲ. ಬೆಪ್ಗಣ್ಣು ಬುಟ್ಟು ನೋಡಿತು. ಸಾಕವ್ವ ಅಂದಳು:

'ಅವರ್ಗ ಆಲ್ದ ಮರ್ದ ಗಾತ್ರ ಮೀಸ... ದಾರಂದದಗಲ ಹಲ್ಲು...'

'ಅವ್ರು ನಿನ್ನ ಎಳಕೊಂಡೋದ್ರ...'

'ಅಯ್ ತಗ ತಗಾ... ನನ್ನ್ಯಾಕ ಎಳ್ಕಂಡುವೋದೀರಿ ಮೂದೇವ್ಗಳ... ನಾನೇ ಬತ್ತೀನಿ ನಡೀರಿ ಅಂತೀನಿ...'

'ಆಮೇಲ...'

'ಆಮೇಲ ಅವರ್ಗಿಂತ ಮೊದ್ಲು ನಾನೀಯ ಯಮಧರ್ಮರಾಜ್ನ ತವುಕವೊಯ್ತೀನಿ...'

ಸಾಕವ್ವನ ಬಾಯಿಂದ ಮಾತುಗಳು ಬರುತ್ತಿದ್ದಂತೆ... ಅವಳ ಸುಕ್ಕಿಂದ ಮಾಡಿದ ಅಲ್ಲಾಡುವ ಚರ್ಮ, ಅವಳ ಮೊಖದ ಹಲ್ಲಿಲ್ಲದ ಬಾಯಿ, ತಲೇಯ ನರೆಕೂದಲು ಮಾಯವಾದವು. ಸಾಕವ್ವನೊಳಗ ಪುಟಗೌರಿ ಚಿಕ್ಕಿ ಮೂಡಿದಳು.

'ಯಮಧರ್ಮರಾಜ ಏನ್ಮಾಡೀನು...?'

'ಅವ್ನಾ...? ನಮ್ಮ ಹಟ್ಟೀಗಾತ್ರದ ಸಿಮ್ಮಾಸನದ ಮೇಲ ಕೂತ್ಕಂಡು...
ಯಮದೂತರು ಕರ್ಕ ಬತ್ತಾರಲ್ಲ... ಅವರ್‍ಗ ಸೀಕ್ಸ ಕೊಡ್ತಾನ...'

'ಅದ್ಕೂನೂ ನಿಂಗ ಹೆದ್ರಕ ಆಗಲ್ವಾ?'

'ಅಯ್... ನರಲೋಕದಲ್ಲಿ ನಾನು ಪಟ್ಟಂಥ ಕಷ್ಟಕ, ಆ ಸೀಕ್ಸ ಎಲ್ಲಾಗದ್ದು ತಗಾ... ಅವ್ನ ಜೊತಲೂ ಅದ್ನೆ ಅಂತೀನಿಕನಾ...'

ಪುಟಗೌರಿ ಚಿಕ್ಕಿಯಾಗಿದ್ದ ಸಾಕವ್ವ ಈಗ ಬಿಳೀಸೀರೆ ಉಟ್ಟು ಹಾರಾಡುವ ಕೂದಲ ಗಾಳೀಗೆ ಬಿಟ್ಟು ಬಳುಕೂತ ದೇವಕನ್ನಿಕ ಆದಳು.

'ಅವ್ರು¦... ಅದ್ಕೇನಂದನು?'

'ಅದ್ಕ ಅವ.. ಆಯ್ತು ಮುದ್ಕಿ, ನಿನ್ನ ಧೈರಕ ಮೆಚ್ದೆ... ಏನ್ ವರ ಬೇಕು ಕೇಳ್ಕ ಅಂತಾನ'.

ಬೀಳಿ ಸೀರೆ ಉಟ್ಟು ಹಾರಾಡುವ ಕೂದುಲ ಗಾಳೀಗೆ ಬಿಟ್ಟು ಬಳುಕೂತ ದೇವಕನ್ನಿಕೆಯು ತನ್ನ ಕಿರುಬೆರುಳಲಿ ಭೂಲೋಕನ ಆಡಿಸತೊಡಗಿದಳು.

'ವರ ಕೇಳ್ಕ ಅಂದ್ಮೇಲ...'

'ಅದ್ಕ ನಾನು, ನೋಡು ಸ್ವಾಮಿ... ನನ್ನ ಮೊಮ್ಮೊಗಸು ನರಲೋಕದಲಿ ರಾಜ್‌ಭಾರ ಮಾಡುವಂಥ ವರ ಕೊಡು... ಅಷ್ಟು ಸಾಕು ಅಂತೀನಿ'

ಶಿವೂ ಧೇನಿಸುತ್ತ ಕೂತಿತ್ತು.

ಶಿವೂನ ಧ್ಯಾನವ ಸಾಕವ್ವ ಮುರುದು, 'ಈಗ ನನ್ನುಂಜನ ನೋಡ್ಕಂಬರವ್ ಬಾ ಕೂಸು' ಅಂದಳು. ಶಿವೂ ಎದ್ದಿತು. ಸಾಕವ್ವ 'ನಿಮ್ಮವ್ವನತವು ಒಂದು ಗಳಾಸ ಈಸ್ಕಬಾ' ಅಂದಳು. ಶಿವೂ ಅವ್ವ ಗಳಾಸ ಕೈಲಿಡಿದು ಬಂದು 'ಅವೊï° ಅದ್ಯಾಕ ಈ ಕತ್ಲಲಿ ಎದ್ದುಬಿದ್ದು ಬಂದಾಯಿ... ಹೋದ್ದು ಹೋಯ್ತು ಅಂದ್ಕಂಡು ಸುಮ್ಕಿರು' ಅಂದಳು. ಸಾಕವ್ವ ನೆಲಕ್ಕೆ ಕೈಕೊಟ್ಟು ಮೇಲೇಳುತ್ತ ಊರುಗೋಲು ಹಿಡಿದು 'ನೀ ಸುಮ್ನ ಗಳಾಸ್ ಕೊಡುಮತ್ತ, ಹೋದ್ದು ಹೋದ್ದಂತೆ ಎಲ್ಲೊ, ಅದು ಹೋಗ್ಲಿ... ಆಮೇಲ ತೋರಿಸ್ತೀನಿ. ಈ ನನ್ನ ಮನೆದೇವರ್‍ಗ ಮೆಣಸಿನಕಾಯ್ನ ಹೊಗ ಕೊಟ್ಟು ನನ್ನ ಹಳ ಕೆರದಲ್ಲಿ ಚಾರಮಾರ ಬಾರಿಸ್ದೆ ಬುಟ್ಟಾನ...' ಎಂದು ಗಳಾಸ ಹಿಡ್ಕಂಡು ನಿಂತಿದ್ದ ಶಿವೂ ಕಯ್ಯ ಹಿಡ್ಕಂಡು ಸಾಕವ್ವ ಕೋಲು ಊರುತ್ತ ಗವೊï°ೀ ಅನ್ನುತ್ತಿದ್ದ ಕತ್ತಲಿಗೆ ಬಿದ್ದರು.

ಆ ಕತ್ತಲಲ್ಲಿ ಸಾಕವ್ವ ಊರುಗೋಲು ಊರ್ಕಂಡು ಶಿವೂ ಕಯ್ಯ ಹಿಡ್ಕೊಂಡು ಎದುರಾದ ಹಟ್ಟಿ ಮುಂದ ನಿಲ್ಲುತ್ತಿದ್ದಳು. ನಿಂತು ಉಸುರ ಬಲವಾಗಿ ಎಳುದು ನೋಡುತ್ತಿದ್ದಳು. ನೋಡಿ ಮುಂದಕ ನಡೆಯೋದ ಮಾಡುತ್ತಿದ್ದಳು. ಹೀಗೆ ಹತ್ತು ಹಟ್ಟಿಗಳಾದವು, ಇಪ್ಪತ್ತು ಹಟ್ಟಿಗಳಾದವು, ಯಾರಾರು 'ಯಾರೋ' ಅಂದರೆ ಸಾಕವ್ವ 'ನಾನು ಕಪ್ಪ' ಅನ್ನೋದು. 'ಯಾಕಮ್ಮೊ' ಅಂದರೆ 'ಇಲ್ಲೆಕಪೊïŒ' ಅನ್ನುತ್ತ ನಡೆಯುವುದಾಗುತ್ತಿತ್ತು. ಕಾಲು ಸೇದುವವರೆಗೂ ನಿಂತು ಸವುತಿ ಕೆಂಪಮ್ಮನ ಹಟ್ಟೀವಾಸನೆಯನ್ನು ಹೀರಿದರೂ ಏನೂ ಮೂಗಿಗೆ ಸೋಂಕದೆ ಸಾಕವ್ವ ಪೇಚಿಕೊಂಡು ಮುನ್ನಡೆದಳು.

ಹೀಗಾಗುತಿರಲು, ಒಂದು ಬಲವಾದ ವಾಸನೆಯು ಸಾಕವ್ವನನ್ನು ಒಂದು ಹಟ್ಟೀಬಾಗಿಲಿಗೆ ಎಳದು ತಂದು ನಿಲ್ಲಿಸಿತು. ಅದು ಪರ್‍ವತಯ್ಯ ಅಂಬೋರ ಹಟ್ಟಿ. ಆ ಪರ್‍ವತಯ್ಯಗೂ ಸಾಕವ್ವಗೂ ಸುತ್ತೂ ಬಳಸಿ ನಂಟಾಗಬೇಕಿತ್ತು. ಸಾಕವ್ವ ದಾರಂದ ತಟ್ಟಿ 'ಅಮ್ಮೀ ತಾಯಿ... ಯಾರವ್ವ ಒಳ್ಗ' ಅಂದಳು. ಪರ್‍ವತಯ್ಯನ ಹೆಡ್ತಿ ದೇವಿರಮ್ಮ ಬಾಗಿಲು ತಗದು 'ಬನ್ಯಮ್ಮ ಒಳಕ್ಕ... ಏನ್ ಬಂದ್ರಿ' ಅಂದಳು. ಸಾಕವ್ವ ಉಸುರೆಳೆದು ಒಳಬಂದಾಗ ಪರ್‍ವತಯ್ಯ ಉಣ್ತಾ ಕೂತಿದ್ದನು. ಸಾಕವ್ವ ದೇವೀರಮ್ಮಗೆ 'ತಾಯೆ, ಮಾರಿಹಬ್ಬದ್ದು ಅರಪಾವು ಅಕ್ಕಿ ಉಳ್ದಿತ್ತು. ಅದ ನನ್ನ ಮೊಮ್ಮೊಗ್ಸಗ ಬೇಯಿಸಿವ್ನಿ. ನಮ್ಮ ಕೇರೀಲಿ ಯಾರವ್ವ ಹಿಟ್ಟ ಮಾಡ್ಕಂಡು ಉಣ್ಣೋರು. ಅದ್ಕ ನಿಮ್ಮಟ್ಗ ಏಡು ಉದ್ಕದ ನೀರ್‍ಗ ಬಂದಿವ್ನಿ ಕನವ್ವಾ'ಅಂದಳು. ದೇವೀರಮ್ಮ ಶಿವೂ ಕೈಲಿದ್ದ

ಗಳಾಸಿಗೆ ಒಂದಿಷ್ಟು ಉದುಕ ತಂದೂದಳು. ಸಾಕವ್ವ 'ಬತ್ತೀನಿ ನನ ಕಂದ' ಅಂದುಬುಟ್ಟು ಹೊರಬಂದ ಮೇಲ ಗಮಗುಟ್ಟುತ್ತಿದ್ದ ಗಳಾಸ ಮೂಗಿಗೆ ಹಿಡಿದಳು. ಆಮೇಲ ಉದುಕದಲ್ಲಿದ್ದ ತುಂಡು ತಗುದು ಶಿವೂಗೆ ಕೊಟ್ಟು 'ತಿಂದು, ಬಾಡ ಏನ ನೋಡು ಕೂಸು' ಅಂದಳು. ಶಿವೂ ಅದ ನೊಣೆದು 'ಬಾಡಲ್ಲಕಮ್ಮೆ ಅಣಬ' ಅಂತು. ಸಾಕವ್ವ ಎಲೆಲಾ ಅಂದುಕೊಂಡು ಇನ್ನುಳಿದ ಹಟ್ಟಿಗಳ ವಾಸನೇಯ ಜಪ್ತಿ ಮುಂದುವರಿಸಿ, ಸುಸ್ತಾಗಿ ಕೊನೆಗೂ ಹಟ್ಟಿ ಮುಟ್ಟಿದಳು.

ಅಲ್ಲಿ ಹಟ್ಟಿ ಸೂರಡಿಯಲ್ಲಿ ಚಲುವಮ್ಮ ಮತ್ತು ನೆರೆಮನೆ ಕಾಳಕ್ಕ ನಿಂತಿದ್ದರು. ಸಾಕವ್ವ ಶಿವೂ ಒಳ ಹೋಗಲು ಆಮೇಲ ಕಾಳಕ್ಕ-'ಅತ್ತಿಗೆಮ್ಮೊರ, ಒಂದು ಬದುಕ ಕೇಳ್ತೀನಿ... ಇಲ್ಲ ಅನ್ನಬೇಡಿ' ಅಂದಳು. ಆಗ ಚಲುವಮ್ಮ 'ಏನ್ನ ಹೇಳು ತಾಯಿ, ಇದ್ರೂವಿ ಇಲ್ಲ ಅಂದನಾ' ಅಂದಳು. ಆಗ ಕಾಳಕ್ಕ 'ಏನೂ ಇಲ್ಲಕನ್ನಿ ಅತ್ಗಮ್ಮ, ಒಲಮೇಲ ಹಿಟ್ಗ ಇಟ್ಟು ಬಂದೀನಿ. ಅಸಿಟ್ಟು ಸಾಲ್ದೀಯ ತೆಳ್ಳಗಾಗದೆ. ಒಂದ್ಪಾವು ಅಸಿಟ್ಟು ಕೊಟ್ರಿರಿ. ನಾಳ ಮಿಲ್ಲು ಮಾಡಸ್ಕಂಡು ಬಂದ್ಮೇಲ ಕೊಟ್ಟುಬುಡ್ತೀನಿ' ಅಂದಳು. ಚಲುವಮ್ಮ ಹಣೆಮುಟ್ಗಂಡು 'ನನ್ನ ಕಣ್ಣಾನೂ ಇಲ್ಲಕಾ ತಾಯಿ. ಇದ್ದರ ನಾನು ಇಲ್ಲ ಅಂತಿದ್ನಾ' ಅಂದಳು. ಕಾಳಕ್ಕನ ಮೊಖದ ರೀತಿ ಆ ಕತ್ಲಲ್ಲಿ ಕಾಣಿಸುತ್ತಿರಲಿಲ್ಲ. ಚಲುವಮ್ಮ ದಾರಂದವ ಮುಚ್ಚಿ ಒಳಬಂದಳು.

ಸಾಕವ್ವ ಮಾಮೂಲಿ ಜಾಗದಲ್ಲಿ ಕೂತಿದ್ದು ' ಕೊನ್ಗೂ ಸಿಗಲ್ವಲ್ಲಪ್ಪಾ ಸಿವ್ನೆ... ಅದ ಸಾಕಾಕ ನಾ ಎಷ್ಟು ಪಾಡುಪಟ್ಟಿದ್ನಪ್ಪ ದೇವ್ರೇ... ಅಯ್ಯೋ ನನ್ನ ಮನೆ ದೇವ್ರೆ, ಹಾಳು ಮುರುಮಗ್ನೇ..... ನೀನು ಕಣ್ಣು ಬುಟ್ಗಂಡು ಕೂತಿದ್ದೀಯೋ... ಇಲ್ಲಾ, ಕಣ್ಣ ಮುಚ್ಗಂಡು ಕೂತಿದ್ದೀಯೊ...' ಎಂದು ಪೇಚಿಕೊಳ್ಳುತ್ತಿದ್ದಳು. ಗಳಾಸಲ್ಲಿದ್ದ ಉದುಕವನ್ನು ರೋಗಿಷ« ಹೈದನ ನಾಲುಗ ರುಚಿ ಪಟ್ಟುಕೊಂಡು ನೆಕ್ಕುತ್ತಿತ್ತು.

೫

ರೋಗಿಷ« ಹೈದನ ನಾಲುಗ ರುಚಿಪಟ್ಟುಕೊಂಡು ನೆಕ್ಕುತ್ತಿರುವಾಗ್ಗೆ ಹೊರಗಿನ ಕತ್ತಲಿಂದ ಕಾಳಣ್ಣ ಒಳುಗಿನ ಕತ್ತಲಿಗೆ ಬಂದನು. ಹಟ್ಟಿ ಗವುಗುಡುತ್ತಿತ್ತು. ಕಾಳಣ್ಣ ಬೆನ್ನ ಮೇಲಿದ್ದ ಗೋಣಿಚೀಲದ ಹೊರೇನ ಹಜಾರದ ಒಲೆ ಮುಂದ ಇಳುಕಿ ಕುಗ್ಗಿದ ದನೀಲಿ ಹೆಂಡತೀನ ಕರೆದನು. ಮೂಟೆ ಹೊತ್ತ ಭಾರಕ್ಕೆ ಸಣ್ಣಗೆ ಬೆವುತೂ ಇದ್ದನು. ಕಿರುಮನೆ ದೀಪದ ಬೆಳುಕು ಇಣುಕಿ ನೋಡಿ ಒಳಕ್ಕೋತು. ಬಂದು ನಿಂತ ಹೆಡ್ತಿಗೆ ಕಾಳಣ್ಣ — 'ಒಲಮುಂದ ತರಗ ಕತ್ಸು... ಒಂದಿಷ್ಟು ಬೆಳುಕ ಮಾಡು' ಅಂದನು. ಅವಳು ಜೋಳದ ತರುಗನ್ನು, ಕಿರುಮನೇಲಿ ಜೀವ ಇಟಗೊಂಡು ಉರಿಯುತ್ತಿದ್ದ ಸೊಳ್ಳಿಂದ ಉರಿಮಾಡಿಕೊಂಡು ತಂದು, ಆ ಉರಿಗೆ ಕಸಕಡ್ಡಿ ತರಗು ತುಂಬಲು ಅಲ್ಲಿ ಹೊಗೆಯೊಡನೆ ಬೆಳುಕೆದ್ದಿತು. ಆ ಬೆಳುಕಿಂದ ಹಟ್ಟೀ, ಹಟ್ಟೀ ಒಳಗಲನ್ನು ಒಂದೇ ಸಲಕ್ಕೆ ಕಾಣುವಂತಾಯ್ತು.

ಕಾಳಣ್ಣ ಚೀಲದ ಅರ್ಧದಷ್ಟನ್ನು ಎದ್ದಿದ್ದ ಬಿಂಕಿ ಉರಿ ಹತ್ತಿರದಲ್ಲಿ ನೆಲಕ್ಕೆ ಸುರಿಯಲು ಕಡಲೆಕಾಯಿ ಚಲ್ಲಿಕೊಂಡು ಒಂದು ಗುಡ್ಡೆ ಆಯ್ತು. ಅಲ್ಲೆ ಸಾಕವ್ವ ಗೋಡೆಗೊರಗಿ ಕಾಲು ನೀಟಿಕೂತು ತಲೆ ಸುತ್ತಲೂ ಜೊಯ್ಯೋ ಎನ್ನುತ್ತಿದ್ದ ಸೊಳ್ಳೆಗಳೊಡನೆ ಹೋರಾಡುತ್ತಿದ್ದಳು. ಕುಂತ ಅವ್ವನ ಮೊಖಕ್ಕೆ ಇಲ್ಲೆದ್ದ ಬೆಳಕೋಗಿ ಬೀಳುತ್ತಿತ್ತು. ಆ ಬೀಳುತ್ತಿದ್ದ ಬೆಳುಕನ್ನು ಆ ಮೊಖ ಹೀರುತ್ತ ಸಾಕವ್ವ ಉರಿಯುತ್ತ ಕುಂತಂತೆ ಕಾಣುತ್ತಿದ್ದಳು. ಕಾಳಣ್ಣ ಬಾಯಿಗೆರಡು ಕಾಳಿಟ್ಟು 'ಅವ್ವೊïº ಬಾ... ಅಲ್ಯಾಕ ಕುಂತಿದ್ದಿ' ಅಂತಲೆ ಸಾಕವ್ವ 'ಬಾಪುïŒ ಸಿವೂ' ಎಂದು ಕಯ್ಯಿಗೆ ಕರೆದಳು.

ಇಳಿಯದೇರುತ್ತಿದ್ದ ಬಿಂಕಿ ಮುಂದಕ್ಕೆ ಬಂದು ಸಾಕವ್ವ ಶಿವೂ ಕೂತರು. ಆ ಬಿಂಕಿ ಉರಿ ಭೂಮತಾಯ ನಾಲುಗೆಯಂತೆ ಹೊಗೆ ಕಕ್ಕುತ್ತ ಸೊಳ್ಳೆ ಕ್ರಿಮಿಕೀಟಾದಿಗಳ ಉಸುರು ಕಟ್ಟಿಸುತ್ತ ಅಲ್ಲಿಂದೆದ್ದು ಹಟ್ಟಿಯ ನಾಕಾ ಮೂಲಕೂ ಚಾಚುತ್ತಿತ್ತು. ಕಾಳಣ್ಣನ ಹೆಡ್ತಿ ತರಲೆ ಪುರುಳೇನ ಉರಿಗೆ ತಳ್ಳುತ್ತ ನಡುಮನೆಗೆ 'ಬನ್ರವ್ವಾ ಅದೇನ್ ಮಾಡೀರಿ' ಅಂದಳು. ಅಲ್ಲಿಂದ ಗೌರಮ್ಮ ಪುಟಗೌರೀರು ಬಂದರು. ಪುಟಗೌರಿ ಮೊಖಕ್ಕೆ ಆ ಬಿಂಕಿ ಬೆಳುಕು ಬಿದ್ದು ಅವಳ ಮೊಖದಿಂದಲೇ ಬೆಳುಕು ಅನ್ನೋದು ಹುಟ್ಟಿ ಉಳಿದ ಕಡೆಗೆ ಹೊಂಟಂತಿತ್ತು. ಅವರೆಲ್ಲರೂ ಕಡಲೆಕಾಯಿ ಗುಡ್ಡೆಗೆ ಕಯ್ಯಾಕುತ್ತ ಸಿಪ್ಪೇನ ಬಿಂಕಿಗೆ ಎಸೆಯುತ್ತಿದ್ದರು.

ಗಂಡನ ಕಣ್ಸನ್ನೆ ತಿವಿಯಲು ಕಾಳಣ್ಣನ ಹೆಡ್ತಿ ಬಿಂಕಿ ಉರುಬುತ್ತಿದ್ದವಳು ಅಲ್ಲಿಂದ ಮೊಖ ತಗದು ಚಲುವಮ್ಮಗೆ 'ತಾಯೆ ಬಾ ನೀನೂವಿ' ಅಂದಳು. ಚಲುವಮ್ಮ 'ಐಕ ಮನಿಕಂಡವಕನಾ ಬುಡಿ ಅಕ್ಕಯ್ಯಾ' ಎಂದಳು. ಕಾಳಣ್ಣನ ಹೆಡ್ತಿ 'ಅದೊಳ್ಳೆ ಸರಿಕನಾ... ಐಕಳ ಏಳ್ಸಕಂಡು ಬವ್ವ' ಅಂದು ಎದ್ದು ಕಿರುಮನೆಗೆ ಬಂದು ಚಲುವಮ್ಮನ ಎರಡನೆ ಹೈದನ ಎಬ್ಬಿಸಿ ಅದರ ಕೈ ಹಿಡಿದುಕೊಂಡು ಬಂದಳು.

ಚಲುವಮ್ಮ ಮಲುಗಿದ್ದ ಕೂಸಿಗೆ ದುಪ್ಪಟಿ ಸರಿಮಾಡಿ ಉಳಿದೆರಡ ಪಿಸುಗುಟ್ಟಿ ಎಬ್ಬಿಸಿ ಕಣ್ಣುಜ್ಜುತ್ತಿದ್ದ ಅವುಗಳ ಒಂದೊಂದು ಕಯ್ಯ ಹಿಡಿದುಕೊಂಡು ಬಂದು ಕಾಳಣ್ಣನ ಹೆಡ್ತಿ ಪಕ್ಕ ಕೂರಿಸಿದಳು. ಚಲುವಮ್ಮ ಕೂತವಳು ಮತ್ತೆದ್ದು ಕಿರುಮನೆಯಲ್ಲಿ ಉರಿಯೂತ್ತಿದ್ದ ಸೊಳ್ಳು ತಂದು ಪೆಟ್ಟಿಗೆ ಮೇಲಿಟ್ಟಳು. ಗೌರಮ್ಮ 'ಅದ್ಯಾಕ ತಗೀರಿ' ಅಂತಲೆ ಚಲುವಮ್ಮ 'ಇಲ್ಲಿ ಬುಡಿ'ಎಂದು ಕಯ್ಯಿ ಬಾಯಾಡಿಸಲು ಕೂಡಿದಳು.

ಆ ಬಿಂಕಿ ಹೊಗೆಯಾಗ್ತ ನೆರಳಾಗ್ತ ಬೆಳುಕಾಗ್ತ ಸುತ್ತ ಕುಂತವರ ಮ್ಯಾಲ ಚಲ್ಲಾಡುತ್ತಿತ್ತು. ಪೆಟ್ಟಿ ಮೇಲಿದ್ದ ಸೊಳ್ಳು ತನ್ನ ಬೆಳುಕನ್ನು ಅವರ ಬೆನ್ನಿಗೆ ತನ್ನ ಶಕ್ತಾನುಸಾರ ಮುಟ್ಟಿಸುತ್ತಿತ್ತು. ಆಗ ಒಳ ಬಂದ ಸಣ್ಣಯ್ಯ ಚಿಲುಕ ಹಾಕಿ ಕಡಲೆಕಾಯ ಎಡುದೂ ಎಡುದೂ ಕಾಳು ಮಾಡುತ್ತಿದ್ದ ತನ್ನ ದೊಡ್ಡ ಹೈದನ ಪಕ್ಕದಲ್ಲಿ ಕೂತು ಬಿಂಕಿಗೆ ಕಯ್ಯ ಹಿಡಿದು 'ಏನಪ್ಪ ಸಳಿ ಸಿವ್ನ' ಅಂದನು.

ಆಗಾಗಲೇ ಎಲ್ಲರ ಕಯ್ಯನುಕೂಲಕ್ಕಾಗಿ ಕಡಲೆಕಾಯಿದು ಎರಡು ಗುಡ್ಡವಾಗಿದ್ದೊ. ಅಲ್ಲಿಂದ ರೇಷ್ಮೆಹುಳುಗಳ ತಟ್ಟೆಗೆ ಸೊಪ್ಪಾಕಿದಂಥ ಸದ್ದು ಹುಟ್ಟುತ್ತಿತ್ತು. ಇಲ್ಲಿ ಅಕಸ್ಮತ್ತು ಸದ್ದು ನಿಂತಲ್ಲಿ ಹೊರಗೀನ ಕಪ್ಪಗಳ ವಟವಟ ಕಿವಿ ಮುಟ್ಟುತ್ತಿತ್ತು. ಹೊರಗೊಂದು ನಾಯಿ ಬೊಗುಳುದ್ದೇ ಬೊಗುಳುತ್ತಿತ್ತು. ಆ ಎಲ್ಲವನ್ನೂ ಮಾರಿಗುಡಿ ಹಾರ್ಮನಿ ದನಿ ತನ್ನ ಒಡಲಿಗೆ ಹಾಕಿಕೊಳ್ಳುತ್ತಿತ್ತು.

ಸಣ್ಣಯ್ಯ: ಮಳಗಿಳ ಬಂದದೇನ

ಕಾಳಣ್ಣ : ಯಾವುರಿಂದಯ್ಯ ಮಳ ಬರಾದು. ಮಳ ಬಂದದಂತ ಮಳ.

ಸಾಕವ್ವ : ಈ ಸುಡುಗಾಡೂರ್ಗ ಮಳ ಬೇರೆ ಕೇಡು ತಕ್ಕ.

ಕಾಳಣ್ಣ : ಅಯ್ಯ, ನಾನೂವಿ ಸುಮಾರು ಊರ ಸುತ್ತುದೋನು. ಆ ಎತ್ತಪ್ಪನೋರು ಕಟ್ಸಿರೊ ದನದ ಹಟ್ಟಿ ನೋಡಿದ್ರ ಕಣ್ಣು ಕಳ್ಕತ್ತವಲ್ಲಯ್ಯ.

ಸಣ್ಣಯ್ಯ :ನಾನೋಡಿಲ್ವಣ್ಣ ಅದ. ನಡೀತ ಇದ್ರೂವಿ ಮುಗೀದು ಬಡ್ಡಿಮಗಂದು.

ಕಾಳಣ್ಣ : ನಮ್ಮವ್ವ ಅಂಥದೇನಾದ್ರು ಕಟ್ಟಿಸಿದ್ದರ ಇನ್ನೆಂಗಾಡ್ತಿದ್ಲೊ.

ಕಾಳಣ್ಣನ ಮಾತು ಕೇಳಿ ನಗೆ ಎದ್ದುದು ಸುಮಾರು ಹೊತ್ತು ಅಲ್ಲಿ ಸಂತೋಷದಿಂದ ಇತ್ತು.

ಆಗ ಶಿವೂ ಕಡಲೆಕಾಯ ಬಿಂಕಿಗೆಸದು ಸುಟ್ಕಂಡು ತಿಂತಿದ್ದನು. ಮಗನ ಮಾತಿಗೆ ಸಾಕವ್ವ 'ನೀವಿದ್ದೀರಲ್ಲಪ್ಪ... ವುಲಿಯಂಗ ಮೂರ್ಜನ ಗಂಡ್ಮಕ್ಕ, ಕಟ್ಸಿ' ಅಂದಳು.

ಆಗ ದಾರಂದ ಕುಟ್ಟಿದ ಸದ್ದು ಬಂದು ಇವರ ಮಾತು ಅಲ್ಲಿಗೇ ನಿಂತು 'ಅತ್ಗಮ್ಮೋರ' ಅನ್ನೊ ದನಿ ಹೊರಗಿಂದ ಬಂದಿತು. ಕಾಳಣ್ಣನ ಹೆಡ್ತಿ ದಾರಂದ ತಗದು 'ಯಾರ' ಅಂತಲೆ ಕಾಳಕ್ಕನ ದನಿಯು —'ನಾನು' ಅಂತು. ಕಾಳಕ್ಕ ಆ ಕತ್ತಲಲ್ಲಿ ಕಾಣಿಸುತ್ತಿರಲಿಲ್ಲ. ಅವಳ ದನಿಯು— 'ಅತ್ಗಮ್ಮೋರ, ನನ್ಗಂಡು ಅಸ್ಕಂಡು ಅಳ್ತ ಮಲುಗದೆ. ಮೂರು ಜಿನದಿಂದಲೂ ಕಳಕಂಬಳ್ಕ ಕರೆಯೋರು ಯಾರೂ ದಿಕ್ಕಿಲ್ಲ. ಏನಾರು ಇದ್ರ ಒಂದಿಷ್ಟು ಕೊಡಿ' ಎಂದಿತು. ಅಲ್ಲಿಂದ ಕಾಳಣ್ಣನ ಹೆಡ್ತಿ ಬಂದು, ಕರಗುತ್ತಿದ್ದ ಕಡಲೆಕಾಯ ಗುಡ್ಡದಿಂದ ಸೆರಗ್ಗ ನಾಕು ಬೊಗಸ ಹಾಕ್ಕೊಂಡು ಎದ್ದಳು. ಸಾಕವ್ವ ಕೈಸನ್ನೆ ಮಾಡಿ ಸೊಸ ಕರೆದು ಅವಳ ಮಳ್ಳಿಂದ ಒಂದು ಬೊಗಸ ತಗದು ಗುಡ್ಡಕ್ಕಾಕಿದಳು. ಆಮೇಲ ಕಾಳಣ್ಣನ ಹೆಡ್ತಿ ಬಿರಬಿರನೆ ಹೊರ ನಡದು ಬರಿಸೆರುಗಲ್ಲಿ ಒಳಬಂದಳು.

ಅಲ್ಲಿದ್ದವರು ಬಾಯಾಡಿಸುತ್ತ ಯಾವುದನ್ನೂ ಗಮನಿಸದೆ ಇದ್ದರು. ಕಡಲೆ ಬೀಜ ಹೊಟ್ಟೆಗ, ಸಿಪ್ಪ ಬಿಂಕಿಗ ಬೀಳ್ತಾ ಇದ್ವು. ಆ ರೀತಿಯಲ್ಲಿ ಇದ್ದಾಗ-

ಕಾಳಣ್ಣ : ಆ ಎತ್ತಪ್ಪನೋರ ದನದ ಹಟ್ಟಿ ಇಲ್ಲಿ. ಅಲ್ಲಿರೊ ದನ ಎಮ್ಮತಾನೆ ಏನಯ್ಯ!

ಸಣ್ಣಯ್ಯ : ಒಂದೊಂದುವಿ ಆನಥರ ಹಟ್ಟಿದಪ್ಪ ಅವ.

ಸಾಕವ್ವ : ಅಂಥ ಒಂದು ಎಮ್ಮ ಸತ್ರೀಗಪ್ಪ... ನಮ್ಮ ಕೇರಿ ದರಿದ್ರನಾರು ಒಂಜಿನ ಹಿಂಗ್ತದ.

ಗೌರಮ್ಮ : ಅವ್ವೆ ೖ ಸುಮ್ಕಿರು ವಸಿಯಾ. ನೀನು ಮೂರ್ಕಾಸ್ನ ಕೋಳೋದ್ದಕ್ಕೇ ಅಷ್ಟು ಪಾಡುಪಟ್ಟೆ. ಇನ್ನು ಅವರ್ಗ ಎಮ್ಮೋದ್ರ ಇನ್ನೆಂಗಾದ್ದು.

ಕಾಳಣ್ಣನ ಹೆಡ್ತಿ: ಸರಿಯಾಗಂದಿಕಾ ಅತ್ಗಮ್ಮ.

ಕಾಳಣ್ಣ: ಎತ್ತಪ್ಪನೇನ ದುಡುದು ಬೆವರಿಳಿಸಿ ರಗತ ಬಸುದು ಸಂಪಾದ್ನಮಾಡಿದ್ದನ ತಗಾ. ಹೋದ್ರ ಅವನ್ದೇನೋದ್ದು... ಗುಡ್ಡ ಹಾಕಿರೊ ಬಡ್ಡಿ ದುಡ್ಡಲ್ಲಿ ಒಂದು ಸಿವುರುಕನ.

ಚಲುವಮ್ಮ: ಸಿವಸಿವಾ ಅವುರ ಮಗಳ ಮದುವ ಇನ್ನೂವಿ ನನ್ನ ಕಣ್ಣೊಳಗ ಕುಂತದ ಕಣ್ರವ. ಬೋಂದಿ ಕಾಳ ಸಾಡುಮಕ್ರೀಲಿ ಇಕ್ಕದು ಎಲ್ಲಾರು ಉಂಟಾ! ಕೈ ನೀಡಿದವರ್ಗ ಒಂದೊಂದು ಬೊಗಸ... ಇಷ್ಟು... ಇಷ್ಟು... ಒಂದೊಂದು ಬೊಗಸ.

ಕಾಳಣ್ಣನ ಹೆಡ್ತಿ: ನಮ್ಮ ಪುಟಗೌರಿ ಮದುವಾನು ಅಂಗೇ ಮಾಡವು ತಕ್ಕಳ್ಳಿ.

ಸಣ್ಣಯ್ಯ: ಆ ಮಟ್ಟಕ್ಕ ಮಾಡಾಕ ನಮ್ಗ ಆದ್ದ ಅತ್ತಿಗವ್ವ. ನಮ್ಮ ಕೈಲಿ ಸಾಗೊ ಅಷ್ಟು...ನಾಕ್ ಜನ ಸರಿ ಸರಿ ಅನ್ನಂಗ ಮಾಡವು ತಕ್ಕಳ್ಳಿ.

ಪುಟ್ಟಗೌರಿ ಬಿಂಕಿ ಝುಳಕ್ಕೆ ತಿಳಿಯಾಗಿ ಬೆವುರೂತ ಕೂತಿದ್ದಳು.

ಸಾಕವ್ವ, ಮಕ್ಕಳ ಮಾತುಗಳ ಮೆಲುಕು ಹಾಕ್ತ ಬಾಯಾಡಿಸುತ್ತ 'ಅಷ್ಟು ಮಾಡ್ರಪ್ಪ ನನ್ನ ಕಂದ್ಗಳಾ...ನಾನು ಕಣ್ಮುಚ್ಚೊ ಒಳ್ಗೇನೆ ಆ ನನ್ನೇಡು ಐಕಳ್ಗುವಿ ಒಂದಾರಿ ತೋರ್ಸಿ' ಅಂದಳು. ಅವ್ವನ ಮಾತಿಗೆ ಸಣ್ಣಯ್ಯ 'ಅವ್ನೀಗ ನಮ್ಮ ಕೈಲಿ ಮದ್ವ ಮಾಡಿಸ್ಕಳವಕವ್ವ! ಯಾರಾರು ನಿಂತಿರೋರ ಕಟ್ಕಂಡು ಬತ್ತಾನ ತಕ್ಕ' ಅಂದನು. ಕಾಳಣ್ಣ ಶಿವೂಗೆ 'ಐಲೋ, ಆ ಚಿಕ್ಕ ಮಾವನ್ನೂವಿ ಕರ್ಕಬಾ ಮತ್ತ, ಹಾರ್ಮನಿ ಸದ್ದಿರೊತಾವು ಇರ್ತಾನ. ಅವುನೂ ಏಡುತಿನ್ಲಿ' ಅಂದನು. ಶಿವೂ 'ಈ ಕತ್ಲಲ್ಲಿ ನಾ ವೋದನ' ಅಂತು. ಪುಟಗೌರಿ 'ಬಾಪುïŒ ಅಲ್ಲಿ ನಾ ನಿಂತ್ಗತ್ತೀನಿ...ನೀನು ಕರ್ಕಂಬರ್ಯೆ' ಅನ್ನಲು ಇಬ್ಬರೂ ಎದ್ದರು. ಆಗ ಗೋಡೆಗೆ ಮೊಖ ಹಾಕಿ ಕುಂತು ಬೆಂಡಾಗಿದ್ದ ದುಪ್ಪಿಕಮಿಷನರು ನಡೆಯುವುದ ರುಜುವಾತು ಪಡಿಸುತ ತೂರಾಡುತ್ತ ಅಲ್ಲಿಗೇ ಬಂತು. ಮುಂದಿಟ್ಟ ಕಡಲೆ ಬೀಜಗಳ ಒಂದೊಂದನೆ ತಗುದು ನಿಧಾನವಾಗಿ ಬಾಯಿಗಿಟ್ಟುಕೊಳ್ಳಲಾರಂಭಿಸಿತು.

ಪುಟಗೌರಿ ಶಿವೂ ಕತ್ತಲಿಗಿಳಿದು ಅದರಲಿ ಹತ್ತುತ್ತಾ ಇಳೀತಾ ನಡೆದರು. ಕಣ್ಣಂದಾಜಲ್ಲೆ ಕಲ್ಲು ಮಣ್ಣು ಬಚ್ಚಲು ಬದೀನ ದಾಟ್ಕಂಡು ಮಾರಿಗುಡಿ ತಿರುವಲ್ಲಿ ಪುಟಗೌರಿ ನಿಂತಳು. ಮಾರಿಗುಡೀಲಿ ಆಗ ನಾಟಕದ ಪದ ಮಾತು ನಡೀತಾ ಇರಲಿಲ್ಲ. ಚಿನ್ನಸ್ವಾಮಿ ಅಂಬೋನು ಹಾರ್ಮನಿ ಮುಂದ ಆರ್ಭಟಿಸಿಕೊಂಡು —'ಯಾರು ತಿಳಿಯರು ನಿನ್ನ ಭುಜಬಲದ ಪರಾಕ್ರಮಾ ಆ... ಧರೆಯೊಳ್....' ಎಂದು ಸಿನಿಮಾ ಪದವ ಕುಟ್ಟುತ್ತಿದ್ದನು. ಹಾರ್ಮನಿ ಮೇಷ್ಟ್ರು ಆವೇಶದಿಂದ ತಲತೂಗಾಡಸ್ತ ಬಾರಿಸುತ್ತಿದ್ದರು. ಅವರು ಕಚ್ಚಿದ್ದ ಬೀಡಿ ಕೆಟ್ಹೋಗಿದ್ದರೂ ಅದೂ ಬಾಯಲ್ಲೆ ಪದವ ಆಡುತ್ತಿತ್ತು. ತಬಲದ ಹೈದ ಇನ್ನೂ ಕಲಿಕೇದು, ಇನ್ನು ಉಗಿಸ್ಕಂಡನು ಅಂದ್ಕಂಡು ಮೆಲ್ಲಮೆಲ್ಲಗೆ ತಪುïŒ ತಪುïŒ ಕುಟ್ಟುತ್ತಿತ್ತು.

ಮಾರಿಗುಡಿಯ ತೊಲೆಗೆ ಕಟ್ಟಿದ್ದ ಲಾಟೀನಿನಿಂದ ನೆಗೀತಾ ಇದ್ದ ಬೆಳುಕು ಅದರ ಕೆಳಗಿದ್ದ ಹತ್ತಾರು ಜನರ ಮೇಲೆ ಬೀಳುತ್ತಿತ್ತು. ಅದರಾಚೆಗೆ ಮಸಕು ಕತ್ತಲಾವರಿಸಿದ್ದು ಅದರಾಚೆಗೆ ಮೊಖ ಕಾಣಿಸದಂಥ ಕತ್ತಲು ನಿಂತಿತ್ತು. ಅಲ್ಲಿಂದ ಏಳುತಲಿದ್ದ ಬೀಡಿ ಹೊಗ ಹಾಡುವವನ ಆರ್ಭಟಕ್ಕೆ ತಕ್ಕಂತೆ ಅಲ್ಲಿದ್ದವರ ತಲಮೇಲ ನಲೀತಾ ಇತ್ತು. ಹಾಡುತ್ತಿದ್ದ ಚಿನ್ನಸ್ವಾಮಿ ಮಾರಿಗುಡಿಯೇ ವಾಲಾಡುವಂತೆ ಹಾಡುತ್ತಿದ್ದನಾದ್ದರಿಂದ ಅಲ್ಲಿದ್ದ ಜನವೂ ವಾಲಾಡ್ತ ಪದಕ್ಕೆ ತಕ್ಕಂತೆ ತಮ್ಮ ದೇಹವನ್ನು ತಾಳ ಕುಟ್ಟುತ್ತಿದ್ದರು. ಪುಟಗೌರೀನು ನಾಕು ಹೆಜ್ಜೆ ಮುಂದೆ ಬಂದು ನಿಂತಿದ್ದಳು.

ಮಾವನ ಬೆರಳಿಡುದು ಶಿವೂ— 'ಮಾವೊ ಹಿಟ್ಟುಂಡ್ಕಂಡು ಬರುವಂತೆ ಬಾ'; ಗುರುಸಿದ್ದು— 'ನೀ ನಡ ನಾ ಬತ್ತೀನಿ'; ಶಿವೂ— 'ಬಾ ಮಾವ ವೋಗವು'; ಗುರುಸಿದ್ದು —'ತಾಡು ವೋಗವು'; ಶಿವೂ— 'ಬಾ ಮಾವ'; ಗುರುಸಿದ್ದು— 'ತಾಡು'; ಇದು ನಡೆದಿತ್ತು. ಇದು ಬುಟ್ಟರೆ ಹಾಡಿಗೆ ಹೆಜ್ಜೆ ಇಟುಗೊಂಡು ಮಾರಿಗುಡಿ ವಾಲಾಡುತ್ತಿತ್ತು. ಹಾಡ್ತ ಇದ್ದ ಖುಷಿಗಾರ ಚಿನ್ನಸ್ವಾಮಿ ಮೀಸ ಕೆಳಗ ನಗು ತಂದ್ಕಂಡು ಕಣ್ಣ ಮೆಡ್ಡರಿಸಿ ಗುರುಸಿದ್ದೂಗೆ ಬೆರಳು ತೋರಿಸುತ್ತ 'ಹೋಗೊ ಹೋಗೆಲೊ ಶಿಕಂಡೀ' ಎಂದು ಪದವ ಅಲ್ಗೆ ನಿಲ್ಸಿದನು. ಅವುನು ನಿಲ್ಲುಸೂವ ಮೊದ್ಲೆ ಎಲ್ರ ಬಾಯಿಂದೂ ನಗು ಅನ್ನೋದು ಗುಲ್ಲಂದ್ಕಂಡು ಎದ್ದಿತು. ಗುರುಸಿದ್ದೂನು ನಗಾಡ್ತಲೆ ಶಿವೂನ ಕೈಹಿಡಿದು ಎದ್ದನು.

ಆಮೇಲ ಮುಂದ್‌ಮುಂದ ಗುರುಸಿದ್ದು, ಹಿಂದ್‌ಹಿಂದ ಪುಟಗೌರಿ ಶಿವೂ ನಡೆದರು. ಗುರುಸಿದ್ದು ಮುಂದಾದ ಮೇಲ ಪುಟಗೌರಿ ಶಿವೂ ಕಿವಿಗೆ ಬಗ್ಗಿ 'ಅದ್ಯಾರಪ್ಪ ಶಿವೂ, ಪದ ಹೇಳ್ತಾ ಇದ್ದೋರು' ಎಂದು ಕೇಳಿದಳು. ಅದಕ್ಕೆ ಶಿವೂ 'ಅದೀಯಾ ಚಿನ್ನಸೋಮಣ್ಣ ಚಿನ್ನಸೋಮಣ್ಣ ಅಂತಾರಲ್ಲ ಅವುï˛' ಅಂದನು. ಪುಟಗೌರಿ, ಅವೂï˛ ಅವ್ನ ಪದ ಎರಡನ್ನೂ ಕಣ್ಮುಂದಿರಿಸಿಕೊಂಡು ನಡೆದಳು.

ಗುರುಸಿದ್ದೂ ಬಂದಾಗ ಹುರಿದ ಕಡಲೆಕಾಯ ಸಣ್ಣ ಗುಡ್ಡವೊಂದು ರಡಿಯಾಗಿತ್ತು. ಅಲ್ಲಿಗೆ ಗುರುಸಿದ್ದೂನ ಕೈ ಬೀಳಲು ಅವನ ಕಯ್ಯಿ ಕಟ್ಟಿದ್ದಂಥ ವಾಚು ಬಿಂಕಿ ಬೆಳುಕಿಗೆ ಫಳಾರಂತು. ಎಲ್ಲರ ಕಣ್ಣೂ ಅದರ ಮೇಲ ಬಿದ್ದವು. ಕೆಲವರ ಬಾಯಾಡುವುದೂ ಚಣ ನಿಂತಿತು. ಗುರುಸಿದ್ದೂನ ಕಯ್ಯಾಡಿದ ಕಡೆ ಶಿವೂನ ಕಣ್ಣಾಡುತ್ತಿತ್ತು. ಕಾಳಣ್ಣ 'ಯಾರ್ದಯ್ಯ ಗಡಿಯಾರ' ಅಂತಲೆ ಗುರುಸಿದ್ದೂ 'ನನ್ದಿಯ, ತಕ್ಕಂಡಿ' ಅಂದನು. ಸಣ್ಣಯ್ಯ 'ವ್ಹೋ ತಕ್ಕತ್ತನಾ ಇವ...ಜೂಜಾಡ್ತ ಸಾಲ ಏರ್ಕಂಡು ಇವ್ನ ಸೈಕಲ್ಲೆ ವಜವಾಗ್ನಿಲ್ವ... ಆ ಥರ ಇವನ್ಗೂ ಯಾರ್ದೋ ವಜವಾಗಿರಬೇಕು' ಅಂದನು. ಗುರುಸಿದ್ದು ಕಡ್ಲೆಕಾಯ ಬಾಯಿಗಿಡುತ್ತ 'ಸುಮ್ಕಿರಣ್ಣೊ' ಅಂದು ಆಮೇಲ ಮಾತಿನ ದಾರಿ ತಿರುಗಿಸಿದನು-'ಅಣ್ಣೊ ನೆನ್ನ ತಗಡೂರ್ಗ ವೋಗಿದ್ದಿ.  ಅಲ್ಲಿ ನಮ್ಮವರು ಸಿವಬಸಪ್ನ ಹೋಟಲ್ಗ ನುಗ್ಗುದ್ದೂ ಅಂದ್ರ... ಸಿವಸಿವಾ ಆಪಾಟಿ ಜನ...ನಾವೇನ ಕಾಸ ಕೊಟ್ಟವೊ ಕಲ್ಲ ಕೊಟ್ಟವೊ? ಕಾಫಿ ತಿಂಡಿ ಕೊಡ್ರಿ ಅನ್ನೋರು. ಸಿವಬಸಪ್ಪ ಅನ್ನೋವ ಬೆವುತೋದ. ಆಮೇಲ ಪೋಲೀಸ್ನವರು ದಬ ದಬ ಇಳಿದವ್ರು, 'ನಾವ್ ಕೊಡ್ಸತೀವಿ ಸುಮ್ನಿರಿ, ಸುಮ್ನಿರಿ' ಅನ್ನೋರು. ಜನ ಅನ್ನೋದು ಪೋಜು ನೋಡೋಥರ ನಿಂತಿರೋದು. ತಕ್ಕಳಪ್ಪ, ನಾನ್ಯಾಕ ಸುಮ್ಕಿರೊದು ಅಂದುಬುಟ್ಟು ನಾನೂವಿ ಕಾಸ ಬಿಸಾಕಿ-ದೋಸ ಟೀ ಕೊಡ್ರಿ-ಅಂದೆ. ಸಿವಬಸಪ್ಪ ಅನ್ನೋನು ನನ್ನೇ ದುರಗುಟ್ಗಂಡು ನೋಡ್ತ ತಂದ್ಕೊಡೋನು...' ಎಂದು ಎಲ್ಲರನ್ನೂ ನೋಡಿದನು. ಎಲ್ಲರೂ ಗುರುಸಿದ್ದೂ ಮಾತಿಗೆ ಕಿವಿಕೊಟ್ಟು, ಕಿವಿಗೆ ಮುಟ್ಟಿದ್ದನ್ನು ಕಣ್ಣಲ್ಲಿ ಮೂಡಿಸಿಕೊಳ್ತ ಬಾಯಾಡಿಸುತ್ತಿದ್ದರು. ಗುರುಸಿದ್ದೂ ವಾಚ ನೋಡ್ಕಂಡು 'ತಾಳಪೊïŒ ನನ್ನ ಪಾರ್ಟು ಬರೋ ಟೈಮಾಯ್ತೇನ...' ಎಂದು ಮೇಲೆದ್ದನು. ಸಣ್ಣಯ್ಯ 'ತಾಳುಡ, ಬೆಲ್ಲ ಇದ್ರ ಟೀ ಕಾಯ್ಸವು' ಅಂದನು. ಗುರುಸಿದ್ದು ಕೈಯಾಡಿಸಿ ನಡೆಯಲು, ಪುಟಗೌರಿ— 'ಹೋಟ್ಲ ಟೀ ಕುಡಿಯಾವ... ಹಟ್ಟೀ ಗೊಡ್ಡಗಾಫಿ ಕುಡ್ದಾನ...' ಅಂದು ಅವನ ಹಿಂದೇನೆ ಹೋಗಿ ಚಿಲುಕ ಹಾಕಿ ಬಂದು ಕೂತಳು.

ಆಗ ಶಿವೂ ತಿಂತಾತಿಂತಾನೆ ತೂಕಡಿಸುತ್ತಿತ್ತು. ಅದರ ಮಾವ, ಶಿವೂನ ಎಚ್ಚರವಿರಿಸಲು 'ಲೋ ಸಿವೂ' ಅನ್ನಲು ಶಿವೂ ಕಣ್ಬುಡ್ತು. ಆಗ ಮಾವ 'ನಿನ್ನ ಕೈಲಿ ಹತ್ ಪೈಸ ಕೊಡ್ತೀನಿ...ಊರೊಳ್ಗ ಹಾಲ ಬುಡ್ಸಕಬಾ ಮತ್ತ. ಆಗಲೀಗ ನಿನ್ನ ಬುಟ್ರ ಇನ್ನೊಬ್ಬ ಧೀರ ಇಲ್ಲಕಯ್ಯ' ಅಂದನು. ಶಿವೂ 'ವುï© ಹೋಗು ಮಾವೊ. ಊರೊಳಗಲ ನಾಯ್ಗಳು ನನ್ನ ಕಂಡ್ರೂ ಅಂದ್ರ ದಬ್ಬಾಕತ್ತವ...' ಎಂದು ಕಣ್ಮುಚ್ಚಿ ಬಾಯಾಡಿಸಿದನು. ಉಳಿದವರು ಅವ್ನ ಮಾತು ರೀತಿಗೆ ನಗಾಡತೊಡಗಿದರು.

ಚಲುವಮ್ಮ ಒಂದು ಎತ್ತೊಲೆ ತಂದು ಅದರ ಮೇಲೊಂದು ದೊಡ್ಡ ಬೋಸಿ ಇಟ್ಟು ಅದರೊಳಗ ಮೂರು ತಪ್ಪಲಿ ನೀರೂದು ಅಲ್ಲಿಗೆ ಏಡಚ್ಚು ಬೆಲ್ಲ ಹಾಕಿ ಆಮೇಲ ಹತ್ತು ಪೈಸೇದ ಟೀಸೊಪುïŒ ಸುರ್ದು ಎತ್ತೊಲೆಗೆ ಬೆಂಕಿ ಇಟ್ಟಳು. ಭೂಮತಾಯಿ ವಚ್ಚೊರಿ ಮೊಗ್ಗಲಿಂದ ಇನ್ನೊಚ್ಚರಿ ಮೊಗ್ಗಲಿಗೆ ಹೊರಳಿ ಉಸ್ಸೊ ಎಂದು ಮಲುಗಿದಳು.

## ೬

ಆ ಹೊತ್ತಿನಲ್ಲಿ ಒಂದು ಕೈ ಬಂದು ಸಾಕವ್ವನ ಹಟ್ಟಿಗೆ ಚಿಲುಕವನ್ನು ಹಾಕಿತು. ಅದು ಪೋಲೀಸ್ ಕಾನ್ಸ್‌ಟೇಬಲ್ ರೇವಣ್ಣನವರ ಕಯ್ಯಾಗಿತ್ತು. ಕಳೆದಾರು ತಿಂಗಳ ಲಾಗಾಯ್ತಿನಿಂದಲೂ ಸಾಹುಕಾರ್ ಎತ್ತಪ್ಪನವರು ಇನ್ಸ್‌ಪೆಕ್ಟರ್ ಸಾಹೇಬರಿಗೆ ಹೇಳಿಕೊಂಡೇ ಬರುತ್ತಿದ್ದರು. ವಾರ ಹದಿನೈದು ದಿನ ಅನ್ನದೆ ಅವರ ಮಿಲ್ಲಿನ ಕಡಲೆಕಾಯಿ ಲಾಟಿನಲ್ಲಿ ಆಗೊಂದು ಮೂಟೆ ಈಗೊಂದು ಮೂಟೆ ಕಳ್ಳತನ ಆಗುತಲಿತ್ತು. ಆಸಾಮಿ ಹಿಡಿಯುವ ಎಲ್ಲ ಪಟ್ಟುಗಳೂ ಮುಗುದು ಆಸಾಮಿ ಸಿಗುತ್ತಿರಲಿಲ್ಲ, ಮಾಲು ಮಾತ್ರ ನಾಪತ್ತೆಯಾಗುತ್ತಿತ್ತು. ಎತ್ತಪ್ಪನವರು ಮತ್ತೂ ಇನ್ಸ್‌ಪೆಕ್ಟರಿಗೆ 'ಏನ್ ಸಾಹೇಬರೆ ಆಗದು ಆಗ್ತಾನೆ ಇದೆ' ಅಂದಾಗ ಇನ್ಸ್‌ಪೆಕ್ಟರು 'ಸುಮ್ಕಿರಿ ಸಾವ್ಕಾರ್ರೇ ಅಲ್ಗೊಬ್ಬ ಪೀಸ್ಯ ಡ್ಯೂಟಿಗೆ ಹಾಕುವ' ಅಂದಿದ್ದರು. ಆಡ್ದ ನುಡಿಗೆ ತಪ್ಪದೆ ಅವರು ಪೀಸಿ ರೇವಣ್ಣನನ್ನು ರವಾನಿಸಿದ್ದರು.

ಪೀಸಿ ರೇವಣ್ಣ ಎಲ್ಲ ರೀತೀಲು ರಿಟೈರ್ಡ್‌ಗಾಗಿ ಕಾಯುತ್ತಿದ್ದನು. ಅವನು ದೇವರು ಕೊಟ್ಟಿದ್ದ ಎರಡು ಕಡ್ಡಿ ಕೈಕಾಲುಗಳನ್ನು ಅಲ್ಲಾಡಿಸುತ್ತಾ ಬೀಡಿಸೇದುತ ಕೆಮ್ಮುತ್ತಾ ತೂಕಡಿಸೂತ ಸ್ಟೇಷನ್ನಲ್ಲೆ ಕೂತಿರುತ್ತಿದ್ದನು. ಅದು ಬಿಟ್ಟು ಅವನನ್ನು

ಯಾರೂ ಎಲ್ಲಿಗೂ ಕಳಿಸಿದ್ದೂ ಇಲ್ಲ, ಇವುನು ಹೋಗಿದ್ದೂ ಇಲ್ಲ. ಈರ್ವರು ಹೆಂಡೀರು ಮತ್ತು ಹತ್ತೊ ಹನ್ನೊಂದೊ ಮಕ್ಕಳು ಇದ್ದು ಅದೇ ಅವನ ಮೆರಿಟ್ಟಾಗಿತ್ತು. ಇವನ ಹೊಟ್ಟೆಗೆ ಹೊಡೆದರೆ ಅದು ಅವುನ ಹೆಡ್ತಿ ಮಕ್ಕಳ ಹೊಟ್ಟೆಗೆ ಬೀಳುತ್ತದೆ ಅಂದುಕೊಂಡು ಎಲ್ಲರೂ ಅನುಸರಿಸಿಕೊಂಡು ಬರುತ್ತಿದ್ದರು. ಹೀಗಿರಲು ಒಂದು ದಿನ ಸಾಹೇಬರು ಸ್ಪೆಷಲ್ ಡ್ಯೂಟಿಗೆ ನಿಯಮಿಸಿರುವುದ ತಿಳಿಸಿ 'ಹೋಗೋ ಭೊಸುಡಿ ಮಗ್ನೆ' ಅಂದಾಗ ರೇವಣ್ಣನನ್ನು ರೇವಣ್ಣನಿಗೇ ನಂಬಲಾಗಲಿಲ್ಲ. ಅಪರಿಚಿತ ಬದುಕಿಗೆ ಕೈಹಾಕಿದ ಸಂತೋಷ ಭಯಗಳಾದವು. ಏನಾಗದಿದ್ದರೂ ಒಂದಂತೂ ಆಗುತ್ತಿತ್ತು — ಹೆಂಡೀರು ಮಕ್ಕಳ ಕಾಟದಿಂದ ಅವುನು ಅತೀತನಾಗುತ್ತಿದ್ದನು.

ಇಲ್ಲಿ ರೇವಣ್ಣನವರು ಎರಡೊತ್ತು ಉಂಡುಕೋತ ತಮ್ಮ ಶಕ್ತಿಯನ್ನು ಬೆಳೆಸಿಕೋತ ತಮ್ಮ ಕಾರ್ಯಾಚರಣೆಯನ್ನು ಆತ್ಮವಿಶ್ವಾಸದಿಂದ ಆರಂಭಿಸಿದರು. ಅವರಿಗಿದ್ದ ಕೇವಲ ಆತ್ಮವಿಶ್ವಾಸವೂ ಒಂದಲ್ಲ ಒಂದಿನ ಫಲ ನೀಡಿತು. ಊರು ಮಲಗಿ ಮಾರಿಗುಡಿ ಚಾವುಡಿಗಳು ಕಣ್ಬಿಟ್ಟಿದ್ದಂಥ ಆ ಟೈಮಲ್ಲಿ ರೇವಣ್ಣನವರು ಕಂಬಳಿ ಹೊದ್ದು ಕಾಣದೆ ಕುಳಿತಿರಲು, ದಪ್ಪಗೆ ಎತ್ತರಕೆ ಇದ್ದ ಒಂದು ಆಸಾಮಿ ಬಂತು, ಚೀಲಕೆ ಕಡಲೆಕಾಯಿ ತುಂಬಿತು, ಮುಂದಕೆ ನಡೀತು, ಅದಾಗು ರೇವಣ್ಣನವರಿಗೆ ಆಸಾಮಿ ಹಿಡಿಯಲು ಕಯ್ಯಿಕಾಲು ಬರಲಿಲ್ಲ, ಕೂಗಲು ಬಾಯಿ ಬರಲಿಲ್ಲ, ಹಾಗಾಗಿ ರೇವಣ್ಣನವರು ತಮ್ಮ ಕಾಲನ್ನು ಕಣ್ಣು ಮಾಡಿಕೊಂಡು ಫಾಲೊ ಮಾಡುತಾ, ಆ ಆಸಾಮಿ ಒಂದು ಹಟ್ಟಿಗೆ ನುಗ್ಗಲು, ಹಿಡುದು ರಂಪ ಎಬ್ಬಿಸದ ತಮ್ಮ ವಿವೇಕಕ್ಕೆ ರೇವಣ್ಣನವರು ತಲೆದೂಗುತ್ತ ಆ ಹಟ್ಟಿ ಎದುರಿನ ಜಗುಲೀಲಿ ಬೊಗುಳುತ್ತಿದ್ದ ನಾಯಿಗೆ ಸಮಾಧಾನ ಪಡಿಸುವ ಪ್ರಯತ್ನ ಪಡುತ ಕೂತರು.

ರೇವಣ್ಣನವರು ಕುಂತಿದ್ದರೂ ಅವರ ಪೋಲೀಸು ವಿವೇಕ ಓಡಾಡುತ್ತಿತ್ತು. ಈಗ ಹೇಗೂ ಮಾಲು ಆಸಾಮಿಗೆ ದುಕಾ ಇಲ್ಲ. ಇದರೊಟ್ಟಿಗೆ ಈ ಕಳ್ಳತನದ ಹಿಂದಿರುವ ಜಾಲವನ್ನೂ ಪತ್ತೆ ಹಿಡಿದು ಒಂದೇ ಸಲಕ್ಕೆ ಢಂ ಅನ್ನಿಸುವ ಮನಸ್ಸಾಯ್ತು, — ಅದಕ್ಕಾಗಿ ಆ ಹಟ್ಟಿಗೆ ಹೋಗುವವರು ಬರುವವರ ಮೇಲ ನಿಗಾ ಇಟ್ಟು ಕೂತರು. ಕುಂತಿರುವಲ್ಲಿ, ಪಾಯಿಂಟ್ ನಂಬರ್ ಒನ್ — ಒಬ್ಬ ಪೀಚಲವನು ಹಟ್ಟಿ ಹೊಕ್ಕಮೇಲೆ, ಒಂದು ಹೆಂಗಸು ಬಹುಶಃ ಪ್ರಾಯ ಮೀರಿರದ್ದು ಬಂದು ಬಾಗಿಲ ಬಳಿ ಆ ಹಟ್ಟಿಗೆ ಸಂಬಂಧಪಟ್ಟಂಥ ಹೆಂಗಸಿನ ಜೊತೆ ಮಾತಾಡಿತು. ಈ ಹೆಂಗಸು ಆ ಹೆಂಗಸಿಗೆ ಕನಿಷ« ಒಂದು ಸೇರಷ್ಟು ಕಡಲೆಕಾಯಿ ಕೊಟ್ಟಿರಬಹುದು. ಪಾಯಿಂಟ್ ಟು— ಒಂದು ಪ್ರಾಯಕ್ಕೆ ಕಾಲಿಟ್ಟ ಹುಡುಗಿ ಇನ್ನೊಂದು ಹುಡುಗ ಎಂದು ನಡಿಗೆಯಿಂದ ತಿಳಿಯಬಹುದು. ಅವರು ಮಾರಿಗುಡಿಕಡೆ ಬಂದು ಪುನಃ ಇನ್ನೊಂದು ವ್ಯಕ್ತಿಯೊಡನೆ ಆ ಹಟ್ಟಿ ಹೊಕ್ಕರು. ಆ ವ್ಯಕ್ತಿ ಅಲ್ಲೊಂದು ಗಂಟೆ ಟೇಮಿದ್ದು ಹೊರಬಂದು ತಿರುಗಾ ಮಾರಿಗುಡಿ ಕಡೆ ನಡೀತು. ಆ ವ್ಯಕ್ತಿ ಬೀಡಿ ಹಚ್ಚಿದಾಗ ಕಂಡುಬಂದ ಚಹರೆ ಪ್ರಕಾರ ಅವನ ಎಡದ ಕೈಗೆ ವಾಚು ಕಟ್ಟಿತ್ತು. ಈ ಕಳ್ಳತನದ ಜಾಲದಲ್ಲಿ ಪ್ರಮುಖ ಪಾತ್ರವಹಿಸಿರುವ ಚಹರೆ ಆ ಮೊಖದಲ್ಲಿತ್ತು. ಇದನ್ನು ರೇವಣ್ಣನವರು ಮನಸ್ಸಲ್ಲೇ ನಾಕುಸಲ ನೋಟ್ ಮಾಡಿಕೊಂಡರು. ಇದಾದ ಮೇಲ ಯಾವ ಪಾಯಿಂಟು ಜರುಗದಿದ್ದರೂ ಮುಂದಿನ ಪಾಯಿಂಟಿಗಾಗಿ ರೇವಣ್ಣನವರು ಕಾದರು.

ಮೊದಲು ಬೊಗಳುತ್ತಿದ್ದ ನಾಯಿ ಈಗ ಬಂದು ರೇವಣ್ಣನವರ ಕಾಲು ನೆಕ್ಕುತ್ತ ಕೂತಿತ್ತು. ಮಾರಿಗುಡೀಲಿ ಪದ ನಗು ಕೇಕೆ ಹೋಗಿ ಸಾಮೂಹಿಕ ಗೊರಕೆ ಹೊರಡುತ್ತಿತ್ತು. ಕಣ್ಮುಚ್ಚದ ರೇವಣ್ಣನವರಿಗೆ ನಿದ್ದೆ ಅನ್ನೋದು ಹಗ್ಗಕಟ್ಟಿ ಎಳೀತಾ ಇತ್ತು. ಕೊನೆಗೆ ಬುದ್ದಿ ಕೈಲಿರುವಾಗಲೆ ಎದ್ದು ಆ ಹಟ್ಟಿಗೆ ಚಿಲುಕ ಹಾಕಿ ಮೊದಲಿದ್ದಲ್ಲಿಗೆ ಬಂದು ಕೂತು ಕಣ್ಮುಚ್ಚಿದರು. ಅಷ್ಟಕ್ಕೇ ನಿದ್ದೆ ಅನ್ನೋದು ಎಲ್ಲಿಗೊ ಎದ್ದು ಹೋಗಿತ್ತು. ರೇವಣ್ಣನವರು ಆ ಚಳಿಯ ಹೊಡತಕ್ಕೆ ತಮ್ಮ ಕೈಕಾಲುಗಳ ಟಕಟಕಗುಟ್ಟಿಸುತ್ತಿದ್ದರು. ಮೀಸಬುಟ್ಟು ತಾವೇ ಗಂಡ್ಸೆಂದು ಬೀಗುವ ಜೊತ ಪೀಸಿಗಳು, ಬಾಯಿಬಿಟ್ಟರೆ ಬಯ್ಯುವ ಸಾಹೇಬರು ನಾಳೆ ಹೇಗೆ ಈ ರೇವಣ್ಣನವರನ್ನು ನೋಡಬಹುದೆಂಬ ಕನಸಿಗೆ ಕಾವು ಕೊಡುತ್ತ ಚಳಿಯನ್ನೂ ತಮ್ಮನ್ನೂ ಮರೆಯುತ್ತ ಕೂತಿದ್ದರು.

ಯಾವಾಗ ಅಲ್ಲೊಂದೆಳೆ ಇಲ್ಲೊಂದೆಳೆ ಬೆಳುಕು ಬೀಳಲು ಆರಂಭಿಸಿತೊ ಆವಾಗ ರೇವಣ್ಣನವರು ನಾಯಿ ಜೊತೇಲಿ ತಡಬಡಾಯಿಸಿ ಎದ್ದು ಹಾರುತ ಸಾಹುಕಾರರ ಆಳಿನ ಗುಡಸಲಿಗೆ ಬಂದರು. ಆಳನ್ನು ಎಬ್ಬಿಸಿ 'ಇನ್ನು ಮಲುಗವ್ನೆ ಮಗಾ... ಓಡೋ ಭೋಸುಡಿಕೆ. ಪೋಲೀಸ್ ರೇವಣ್ಣನೋರು ಮಾಲು ಕಳ್ಳ ಎರಡ್ನೂ ಹಿಡ್ದವರೆ ಅಂತ ಸಾಹೇಬರಿಗೆ ಹೇಳಿ ಜರೂರ್ ಕರ್ಕಬಾ'
ಎಂದು ಓಡಿಸಿದರು. ಪುನಹ ಕುಳಿತಿದ್ದಲ್ಲಿಗೆ ಬಿರುಸಾಗಿ ಬಂದು, ಚಿಲುಕ ಅಲುಗಾಡದಿರುವುದ ಗಟ್ಟಿಮಾಡಿಕೊಂಡು ಜೀಪಿನ ಸದ್ದಿಗಾಗಿ ಧ್ಯಾನಸ್ಥರಾದರು.

ಕಣ್ಬೆಳಕು ಬರುವುದೂ ಜೊರ್ರೋ ಎಂದು ಜೀಪು ಇಳಿಯುವುದೂ ಕೂಡಿಕೊಂಡವು. ರೇವಣ್ಣನವರು ಬಟ್ಟೆ ನೀಟು ಮಾಡಿಕೊಂಡು ಪಕ್ಕದಲ್ಲಿದ್ದ ಪೇಟವ ಧರಿಸಿ ಅಟೆನ್ಷನ್‌ನಲ್ಲಿ ನಿಂತುಕೊಂಡರು. ಜೀಪು ನಿಲ್ಲುತಲೆ ಹಿಂದುಗಡೆಯಿಂದ ಚಟಕಪಟಕ ಪೋಲೀಸರು ಜಂಪ್ ಮಾಡಿದರು. ಮುಂದುಗಡೆಯಿಂದ ಇನ್ಸ್‌ಪೆಕ್ಟರು ಇಳಿದರು. ಜೀಪಿನ ಸದ್ದಿಗೆ ಒಂದೆರಡು ಹಟ್ಟಿಗಳು ತಂತಮ್ಮ ತಲೆ ಇಣುಕಿಸಿದವು.

ಇನ್ಸ್‌ಪೆಕ್ಟರು ಇಳಿದಮೇಲ ಅಟೆನ್ಷನ್‌ನಲ್ಲಿ ನಿಂತಿದ್ದ ರೇವಣ್ಣನವರು ಸೆಲ್ಯೂಟ್ ಹೊಡೆದರು. ಸಾಹೇಬರು ರೇವಣ್ಣನವರ ಕಡೆಗೆ, ಹುಳ ಹಿಡಿದು ತಂದ ತನ್ನ ಮರಿ ನೋಡುವ ಕೋಳಿಯಂತೆ ನೋಡಿದರು. ದಫೇದಾರಿ ರೇವಣ್ಣನವರಿಗೆ 'ಸಭಾಷ್ ಮಗ್ನೆ... ನಿನ್ನ ಕುಟುಕು ಜೀವ ಬದುಕಿದ್ದಕ್ಕೂ ಸಾರ್ಥಕ ಆಯ್ತು' ಅಂದರು. ಜೊತೆ ಪೀಸಿಗಳು ಕಣ್ಣಗಳಲ್ಲೆ ತಮ್ಮ ಸಖೇದಾಶ್ಚರ್ಯ ಸೂಸುತ್ತಿದ್ದರು. ರೇವಣ್ಣನಿಗೆ ಏನೂ ತೋಚದೆ ಪುಳಕಿತನಾಗಿ ನಿಂತನು. ಇನ್ಸ್‌ಪೆಕ್ಟರು 'ಹುಂ ಏನಯ್ಯ ಮುಂದೆ' ಅನ್ನಲು, ರೇವಣ್ಣ — 'ಮಾಸ್ವಾಮಿ, ಮಾಲು ಆಸಾಮಿ ಎರಡೂನು ಆ ಹಟ್ಟಿ ಒಳಗೇ ಅವೆ. ಹಟ್ಟಿಗೆ ಚಿಲಕ ಹಾಕಿ ಅದ ನೋಡ್ತ ರಾತ್ರ ಪೂರ್ತ ನಾನು ಕಣ್ಮುಚ್ಚಿಲ್ಲ' ಅಂದನು.

ಆಗ ದಫೇದಾರಿ ಮತ್ತು ನಾಕು ಪೀಸಿಗಳು ದಪದಪ ನಡೆದು ಆ ಹಟ್ಟಿದಾರಂದಕ್ಕೆ ಕೈಗಳಿಂದ ಕಾಲ್ಗಳಿಂದ ಬಡಿಯತೊಡಗಿದರು. ಅಷ್ಟಕ್ಕೆ ಹತ್ತಾರು ಜನ ದೂರದೂರದಲ್ಲೆ ನಿಂತು ಕಣ್ಣುಜಿಬುರೆ ತೊಡೀತ ನೋಡುತ್ತಿದ್ದರು. ಆ ಸದ್ದುಗಳು ಮಲಗಿದ್ದ ಸಾಕವ್ವಗೆ ಗುದ್ದಲು 'ಯಾವ ಮುರ್ಮಗ್ನ ಅವ್ನ ಆ್ಞ... ದಾರಂದ್ಕ ಆಪಾಟಿ ಬಡೀತಾನಲ್ಲ ಅವ್ನ ಕೈಸೇದೋಗ...' ಅನ್ನುತ್ತ ಎದ್ದು ಬಂದು ಬಾಗಿಲ ತಗದು ನೋಡುತ್ತಾಳೆ — ಯಮದೂತರಂತೆ ಪೋಲೀಸರು ನಿಂತಿದ್ದರು. ಅವಳ ಜೀವ ಝುಗ್ ಅಂದೋಯ್ತು. ನಡಗ್ತ — 'ಏನ್ ಸೋಮ್ಗಳಾ' ಅಂದಳು. ಅವಳನ್ನು ಲೆಕ್ಕಿಸದೆ ನುಗ್ಗಿದ ಪೋಲೀಸರ ಬೂಟುಗಳ ಶಬುದದಲ್ಲಿ ಅವಳ ಆ ಮಾತುಗಳು ಅಪ್ಪಚ್ಚಿಯಾಯ್ತು.

ಇನ್ಸ್‌ಪೆಕ್ಟರು ನಿಧಾನವಾಗಿ ಒಳಬಂದು ನಿಧಾನವಾಗಿ ಎಲ್ಲವನ್ನೂ ಒಂದ್ಸಲ ಅವಲೋಕಿಸಿದರು. ಇಡೀ ಹಟ್ಟೀನ ಕಣ್ಣಿಗ ಸಿಕ್ಸಿಕೊಂಡು ಆಮೇಲ ಸಾಕವ್ವನಿಗೆ 'ಯೇ ಮುದ್ಕಿ, ಎಲ್ಲಿ ನಿನ್ಮಕ್ಕಳು...' ಎಂದು ಗಡುಸಿಗೆ ದನಿ ತುಂಬಿ ಅಂದರು. ಸಾಕವ್ವ ಥರಗುಟ್ಟುತ್ತ 'ಮಲ್ಗವರೆ ಮಾಸೋಮಿ' ಅಂದಳು. ಕಾಳಣ್ಣನ ಹೆಡ್ತಿಗೂ ಎಚ್ಚರವಾಗಿ ನೆರುಕೆ ಕಿಂಡೀಲಿ ಕಂಡದ್ದು ಕಂಡು ಗಂಡನ ಎಬ್ಬಿಸಲೂ ಕೈ ಬರದೆ ಅಲ್ಲೆ ತಪರ್ನಾಡ್ತ ಕೂತಳು.

ಇಲ್ಲಿ ಕಿರುಮನೆಯಿಂದ ಸಣ್ಣಯ್ಯ ಕತ್ತನ್ನು ಇಣುಕಿಸಿದವನು ಅದನು ಹಿಂದಕ್ಕೆಳೆಯಲೊ ಮುಂದಕ್ಕೆಳೆಯಲೊ ಎಂದು ದೇಹವ ಕಿರುಮನೇಲಿಟ್ಟು ತಲೆಯ ಹೊರಗಿಟ್ಟು ನಿಂತನು. ಅವನ ತಲೆ ಕಂಡ ದಫೇದಾರಿ 'ಅವ್ನ್ಞ ಇಣುಕೋದ ನೋಡ್ರಪ್ಪ ಇಣುಕೋದ... ಆ್ಞ ಆ್ಞ ಹೊರಕ್ಕ ಬಾರೊಲೇ' ಎಂದನು. ಹಗ್ಗ ಕಟ್ಟಿ ಎಳೆದಂತಾಗಿ ಸಣ್ಣಯ್ಯ ತಡಬಡಾಯಿಸಿ ಬಂದು ಚಕ್ಕನೆ ನಿಂತನು. ಸಣ್ಣಯ್ಯನ ಕೈಗೂಸು ಕಿರುಚಲು ಆರಂಭಿಸಿತು. ಚಲುವಮ್ಮ ಆ ಕೂಸ ಒಂದು ಕೈಲಿ ತಟ್ಟೋದು ಇನ್ನೊಂದು ಕೈಲಿ ಜೀವ ಹಿಡ್ಕಳದು ಮಾಡ್ತ ಬೆವುರುತ್ತಿದ್ದಳು. ಸಣ್ಣಯ್ಯನನ್ನು ಸುಡುವಂತೆ ನೋಡಿ ಇನ್ಸ್‌ಪೆಕ್ಟರು ರೇವಣ್ಣನಿಗೆ ಕಣ್ಣಿಂದಲೆ ಮೀಟಿದರು. ರೇವಣ್ಣ 'ಇವ್ನಲ್ಲ ಮಾಸ್ವಾಮಿ' ಅಂದನು. ದಫೇದಾರಿ ನೆಲವ ಬಡಿಯುತ್ತ ಕಾಳಣ್ಣನ ನೆರುಕೇಗೆ ನುಗ್ಗಿದನು.

ಅಲ್ಲಿ ಕಾಳಣ್ಣ ಚಿಂತಿಲ್ಲದೆ ಮಲುಗಿದ್ದನು; ಹೆಡ್ತಿ ಪತರುಗುಟ್ಟುತ್ತಿದ್ದಳು. ಮಲಗಿದ್ದವನ ಕಂಡು ದಫೇದಾರಿ ಮೊಸಮೊಸ ಉಸುರು ಬುಡ್ತ ಕಾಳಣ್ಣನಿಗೆ ಲಾಟೀಲಿ ತಿವಿದನು. ಕಾಳಣ್ಣನ ಹೆಡ್ತಿ ದುಕ್ಕಳಿಸಿ ಅಳತೊಡಗಿದಳು. ಯಾವಾಗ ದಫೇದಾರಿ ಬೂಟ ನೆಲಕ್ಕೆ ಬಡಿದನೊ ಆವಾಗ ಅವುಳು ದುಕ್ಕವನ್ನು ಗಂಟಲಲ್ಲೆ ಮಡಗಿಕೊಂಡಳು. ಕಾಳಣ್ಣ ಗಕ್ಕರಿಸಿಕೊಂಡು ಎದ್ದು ಕುಂತವನಿಗೆ, ಕಣ್ಣಿಗೆ ಹೊಡೆದಂತೆ ಪೋಲೀಸು ಹಟ್ಟಿತುಂಬಾ ನಿಂತಿದ್ದನು.

ಕಯ್ಯಿಬಾಯಿ ಬರದೆ ಕಾಳಣ್ಣ ಬುಟ್ಟ ಕಣ್ಣು ಬುಟ್ಟು ನೋಡುವುದ ಮಾಡುತ ಇದ್ದನು. ದಫೇದಾರಿ ಕೈಕೋಲನು ಕಾಳಣ್ಣನ ಚೊಗದ ಕಾಲರಿಗೆ ಸಿಕ್ಸಿ ತಿರುಚಿ ಹಿಡುತವಾಗಿ ಮೇಲೆತ್ತುತ್ತ ಹಲ್ಮುಡಿ ಕಚ್ಚಿ 'ಮಗ ಕುಂತವ್ನೆ... ಏಳಲೆ' ಅಂದನು. ಅವುನು ಏಳುತ್ತಲೆ ಕಾಲರಿಗೆ ಸಿಕ್ಸಿದ್ದ ಕೈಕೋಲಲ್ಲೆ ತಳ್ತ ಇನ್ಸ್‌ಪೆಕ್ಟರ ಮುಂದಕೆ ತಂದು ನಿಲ್ಸಿದನು. ರೇವಣ್ಣ ಆನಂದಪರವಶನಾಗಿ 'ಇವ್ನೇನೆ ಮಾಸ್ವಾಮಿ' ಅಂದನು. ಸುತ್ತ ಇದ್ದ ಪೀಸಿಗಳು ತೋಳುಗಳ ಬೀಸ್ತ ಹಲ್ಮುಡಿ

ಕಚ್ಗೊಂಡು, ಕಾಳಣ್ಣನ ಮೇಲ ಇನ್ನೇನು ನೆಗದು ಬಿದ್ದರು ಅಂಬುವಂತೆ ನಿಂತರು. ಕಾಳಣ್ಣನ ಎದಗುಂಡಿಗೆಯೊಳಗಿಂದ ನಡುಕ ಅನ್ನೋದು ಹುಯ್ಲೋ ಅಂದುಕೊಂಡು ಬಂತು.

ಬಹಳ ಹೊತ್ತಿನವರೆಗೂ ಇನ್ಸ್‌ಪೆಕ್ಟರು ತಮ್ಮ ತಿವಿಯುವ ಕಣ್ಣುಗಳನ್ನು ಕಾಳಣ್ಣನ ಕಣ್ಣಳಿಗೆ ನೆಟ್ಟು ಕೊರೆಯುತ್ತಿದ್ದು ಆಮೇಲ 'ಏನ್ಲೇ... ಎಷ್ಟು ದಿನ್ದಿಂದ ಈ ಕಸುಬ ಮಾಡ್ತ ಇದ್ದಿ' ಎಂದು ಗುಡುಗಿದರು. ಕಾಳಣ್ಣನಿಗೆ ನಿಲ್ಲಾಕೆ ಕಾಲು ವದರುವುವು, ಮಾತಾಡಕೆ ಪದಗಳು ಕಲಸಿಕೊಳ್ಳುವುವು. ದಫೇದಾರಿ ಕಾಲರಿಗೆ ಕೈಕೋಲು ಸಿಕ್ಸಿಕೊಂಡು ನಿಂತಿದ್ದವನು ಆ ಕೋಲಲ್ಲಿ ಒಳುಗೇ ತಿರುಚಿ ತಿವಿದು ಕಾಳಣ್ಣನ ಕತ್ತುಗೆ ಚುರುಕು ಮುಟ್ಟಿಸಿದನು. ಕಾಳಣ್ಣ ಮುಗ್ಗರಿಸಿ 'ಮಾಸೋಮಿ' ಎಂದು ನಿಂತನು.

ಇನ್ಸ್‌ಪೆಕ್ಟರು ಮೀಸೆ ಕುಣಿಸ್ತ —

'ಕಡಲೆಕಾಯ್ಮೂಟೆ ಎಲ್ಲಿಟ್ಟಿದ್ದಿ...?'

'ಮಾಸೋಮಿ'

'ಬೊಗಳು'

'ಇಲ್ಲ ಮಾಸೋಮಿ'

'ಹೇ......'

ಗರ್ಜಿಸಿದರು.

'ಇಲ್ಲ ಮಾಸೋಮಿ...'

ನಡುಕ ಬಂದು ನಡುಗಿತು.

'ನಾವೇ ಹುಡ್ಕೋ ಮೊದ್ಲು ನೀನೆ ತೋರುಸ್ಕೋ ಬಚಾವಾದೆ                    ಮಗ್ನೇ...'

'...ಮಾಸೋಮಿ'

ಬಾಯಿಂದ ಮಾತು ಬೆವುತು ಬಂತು.

'ನಾವೇ ಹುಡ್ಕಿತಂದ್ರೆ, ನಿನ್ನ ಹೆಡ್ತ ್ಯ ಹರಾಜ್ ಹಾಕ್ತಿ ಏನ್ಲೇ....!'

ಹಿಂದ್ಲಿಂದ ಎಕ್ಕತ್ತಿಗೆ ಚುರುಕು ಮುಟ್ಟಿತು.

'.... .... '

'ಬೊಗಳು'

'ಇಲ್ಲ ಮಾಸೋಮಿ'

ಕಪಾಳಕ್ಕೊಂದು ಏಟು ಫಟೀರನೆ ಬಿತ್ತು.

ಕಾಳಣ್ಣನ ಕಣ್ಣಳಿಗೆ ಕತ್ತಲು ಕಟ್ಕಂಡು ಕೆಳಕೆ ಕೂತುಬುಟ್ಟನು. ಕೂತವನಿಗೆ ದಫೇದಾರಿ ಬಲವಾಗಿ ತಿವಿದು ನಿಂತು ಇನ್ಸ್‌ಪೆಕ್ಟರ ಅಪ್ಪಣೆಗೆ ಕಾದನು. ಮಾಸ್ವಾಮಿಗಳು ಒಂದ್ಸಲ ಕಣ್ಸನ್ನೆ ಮಾಡುದ್ದೇತಡ, ದಫೇದಾರಿಯಾದಿಯಾಗಿ ನಾಕಾರು ಪೋಲೀಸರು ಕಾಳಣ್ಣನ ನೆರುಕೆಗೆ ಬಿರುಗಾಳಿಯಂತೆ ನುಗ್ಗಿದರು. ಒಬ್ಬ ಪೋಲೀಸು ಕಾಳಣ್ಣನಿಗೆ ಒದ್ದುಕೊಂಡು ಸೇನಾನಿಯಂತೆ ನಿಂತನು.

ಪೋಲೀಸರು ನೆರುಕೆಗೆ ನುಗ್ಗಾಗ ಉಂಟಾದ ಗಾಳಿ ರಭುಸಕ್ಕೆ ಕಾಳಣ್ಣನ ಹೆಡ್ತಿ ತೂರಾಡಿ ಹೋದಳು. ಅವಳು ಪೋಲೀಸರ ಚುಚ್ಚುಗಣ್ಣಳಿಗೆ ಸಿಕ್ಕಿ ವದ್ದಾಡಿ ಸೆರುಗ ಬಾಯಿಗೆ ತುರುಕಿ ಹೊರಬಂದು ನಡೆಯಾಕು ಆಗ್ದೆ ನಿಂತು, ನಿಲ್ಲಾಕು ಆಗ್ದೆ ನಿಂತಲ್ಲೆ ಕುಂತುಬುಟ್ಟಳು. ಅಲ್ಲಿನ ಗದ್ದಲಕ್ಕೆ ನಡುಮನೆಯಿಂದ ಹಜಾರಕ್ಕೆ ನೆಗದು ಬಂದ ಶಿವು ಬಲೆಗೆ ಸಿಕ್ಕಿಕೊಂಡಂತಾಗಿ ನಿಂತಿತು. ನಡುಮನೆ ಒಳಗ ಅಕ್ಕಗೌರಮ್ಮ ತಂಗಿ ಪುಟಗೌರೀನ ನೋಡೋದು, ತಂಗಿ ಪುಟಗೌರಿ ಅಕ್ಕ ಗೌರಮ್ಮನ ನೋಡೋದು ಮಾಡ್ತ, ಮಾಡಲೇನು ತಿಳೀದೆ ನಡುಗೋದು ಮಾಡ್ತ, ನಡುಮನೆಯಿಂದ ಕೋಣೆಗೆ, ಕೋಣೆಯಿಂದ ನಡುಮನೆಗೆ ಎಡತಾಕುತ್ತಿದ್ದರು.

## ೮

ಆಚೆ ಹತ್ತಾಗಿ ಇಪ್ಪತ್ತಾಗಿ ಸೇರುತ್ತಿದ್ದ ಜನ, ಭೂಮಿಗೆ ಬೆಳಕು ಬೀಳುತ್ತಿದ್ದಂತೆಲ್ಲ ಹುಟ್ಟಿಕೊಂಡು ಡ್ರೈವರಿಗೆ ಕೇರುಮಾಡದೆ ನಿಲ್ಲುತ್ತಿದ್ದರು. ಕೆಲವರು ಸಾಸ ಮಾಡಿ ಹಟ್ಟಿ ಬಾಗಿಲ ಹತ್ತಿರಕೂ ಬಂದು ತಮ್ಮ ಕಣ್ಣು, ಸಾಧ್ಯವಾದರೆ ತಲೆಯನ್ನು ಒಳಕ್ಕೂ ತುರುಕುತ್ತಿದ್ದರು. ಒಂದ್ಸಲ ಇನ್ಸ್‌ಪೆಕ್ಟರು ಅವರನ್ನು ಕೆಕ್ಕರಿಸಿಕೊಂಡು ನೋಡಲು ಆ ನೋಟಕ್ಕೆ ಆ ಜನ ಹಿಂಜಿಗಿಯಿತು. ಸೇನಾನಿಯಂತೆ ಕಾಳಣ್ಣನ ಪಕ್ಕ ನಿಂತಿದ್ದ ಪೋಲೀಸು ಲಾಟೀ ಬೀಸ್ತ ಆ ಜನದ ಮೇಲ ನೆಗದನು. ಬಾಗಿಲಲಿ ನಿಂತ ಜನ ಗುಂಪಿಗೆ ಬಿದ್ದಿತು. ಆ ಹಟ್ಟಿ ಮುಂದ ಪೋಜಿನಂತೆ ನೆರೆದಿದ್ದ ಜನ ಕಂಡು ಆ ಪೀಸಿಯ ಎದೆ ಧಸಕ್ಕೆಂದರೂ ಕಾಕಿ ಬಟ್ಟೆ ಮಹಿಮೆ ಜನರನ್ನು ತಳ್ತ 'ಇಲ್ಲೇನು ಕೋತಿ ಕುಣೀತಾ ಇದ್ದಾದೇನ್ರಯ್ಯ... ಮಾಡೋ ಕೆಲ್ಸ ಮಾಡೋಗಿ' ಎನ್ನುತ್ತ ಜನರನ್ನು ಹಿಂಜಿಗಿಸುತ್ತಿತ್ತು.

ಆಗ ಗುಂಪು ತನ್ನಷ್ಟಕ್ಕ ಏಡುಭಾಗವಾಗಿ ಒಡೆದು ದಾರಿಬಿಟ್ಟುಗಂತು. ಆ ದಾರೀಲಿ ಕತ್ತಿಗೆ ಶಾಲು ಹೊದ್ದು ಕೈಲಿ ಸಿಕರೋಟು ಹಿಡಿದು ಎತ್ತಪ್ಪನವರು ಯಾವ ರೇಖೆಯನ್ನೂ ಮೊಖದಲ್ಲಿ ಹೆಚ್ಚುಕಮ್ಮಿ ಮಾಡದೆ ನಡೆದು ಬಂದರು. ಸೋಸಿ ತೆಗೆದರೂ ಒಂದು ಸಟುಗ ರಕ್ತಮಾಂಸ ಸಿಕ್ಕದ ರೇವಣ್ಣನ ಕಂಡಾಗ ಎತ್ತಪ್ಪನವರು 'ಇದಾ... ಕಳ್ನ ಹಿಡಿಯೋ ಮುಸುಡ್ಯ' ಅಂದುಕೊಂಡಿದ್ದು ಇದೀಗ ಅವರನ್ನು ಅವರೇ ನಂಬದಂತಾಗಿತ್ತು. ಶ್ರೀ ಎತ್ತಪ್ಪನವರನ್ನು ಕಂಡ ಪೋಲೀಸು ಸಲ್ಯೂಟು ಹೊಡೆದು ಅವರನ್ನು ಬಾಗಿಲವರೆಗೂ ಮುಟ್ಟಿಸಿ ಬಂದು ಕುಣಿದಾಟ ಮುಂದುವರೆಸಿದನು.

ಒಳಗೆ ಕಾಳಣ್ಣ ಕಣ್ಣು ಪಿಳಿಪಿಳಿ ಬುಡ್ತ ದೇಹವ ಕುಗ್ಗಿಸಿ ಕುಂತಿದ್ದನು. ಅವನ ಹೆಡ್ತಿ ಕಣ್ಣಿಗೆ ಮಂಕು ಅಂಟಿಸಿಕೊಂಡು ಕೂತಿದ್ದಳು. ಸಣ್ಣಯ್ಯ ಭೂಮಿಗೆ ನೆಟ್ಟ ಒಣಕಲ ಕಡ್ಡಿಯಂತೆ ನಿಂತಿದ್ದನು. ಬಲೆಗೆ ಸಿಕ್ಕ ಶಿವು ಮಿಲಮಿಲ ಅಂತಿತ್ತು. ಸಾಕವ್ವ, ಕುಗ್ಗಿ ಕುಂತಿದ್ದ ಮಗನ ದಿಕ್ಕ ಉಸುರಾಟದೊಡನೆ ಇಂಚಿಂಚು ತವೆಯುತ್ತಿದ್ದಳು. ಕಾಳಣ್ಣನ ನೆರುಕೆ ತಡಬಡಾಯಿಸುತ್ತಿತ್ತು. ಹೊರಗೆ ಜನ ಹೆಚ್ಚಿದಂತೆ ಪೋಲೀಸನ ಕುಣಿತವೂ ಹೆಚ್ಚುತ್ತಿತ್ತು.

ದಫೇದಾರಿ ಮುಂದಾಳ್ತನದಲ್ಲಿ ಜಪ್ತಿಗೆ ಒಳಗಾದ ಕಾಳಣ್ಣನ ಮೂರಂಕಣದ ನೆರುಕೆಯಲ್ಲಿ ಅಲ್ಲೇ ಸಿಕ್ಕಿದ್ದ ಫೋಟೋದಲ್ಲಿ ಮಲೆ ಮಾದೇಶ್ವರಸ್ವಾಮಿ ಹುಲಿವಾಹನದ ಮೇಲ ಕುಂತು ಕಣ್ಮುಚ್ಚಿದ ಭಂಗಿಯಲ್ಲಿ ಕಿರುನಗೆ ಸೂಸುತ್ತಿದ್ದನು. ಫೋಟೋದ ಕೆಳಗೊಂದು ಈಭೂತಿ ಹಲಗೆ ಅದರಲಿ ಒಂದೆರಡು ಈಭೂತಿ ಉಂಡೆ ಇದ್ದವು. ಹಗ್ಗದುರೀಲಿ ಒಂದು ತೇಪೆ ಸೀರೆ ಎರಡು ರವುಕೆ ಒಂದೆರಡು ಚೊಗನಿಕ್ಕರು, ಒಂದು ಇಪ್ಪತ್ತು ಕಿಂಡಿ ಪಂಚೆ ಇನ್ನೊಂದು ಕಾಫಿತೋಟದ ಕಂಬಳಿ ಮಂಕಾಗಿ  ನೇತಾಡುತ್ತಿದ್ದವು. ಮೂಲೇಲಿದ್ದ ರಾಗಿಕಲ್ಲು ಸೋಂಬೇರಿಯಾಗಿ ಮಲಗಿತ್ತು. ಅದರ ಮೇಲೊಂದು ಖಾಲಿಪುಟ್ಟಿ ಕುಂತಿತ್ತು. ನಡುಗೋಡೆಗೆ ಸೇರಿಕೊಂಡು ಒಂದು ಎತ್ತೊಲೆ ಆ ಎತ್ತೊಲೆ ಮೇಲೆ ಈಭೂತಿ ಕಟ್ಟು ಬಳಿದಿಟ್ಟಿದ್ದ ಹಿಟ್ಟು ಉದುಕದ ಮಡಕೆ, ಅಲ್ಲೇ ನೀರು ತುಂಬಿದ್ದೆರಡು ಅರುವೆ ಅಲ್ಲಿಂದ ಕೈಗೆಟುಕೋ ದೂರದಲ್ಲಿ ಉಣ್ಣೊ ಹರೋಣ ಗಳಾಸುಗಳು ಜೊತೆಯಾಗಿ ಮಲಗಿದ್ದವು. ಗೋಡೆಗೊರಗಿ ವಿಶ್ರಮಿಸಿದ್ದ ದೊಡ್ಡ ಅಳಗದ ಹೊಟ್ಟೇಲಿ ಅರ್ಧ ಸೇರಷ್ಟು ಹುರಳಿಕಾಳು ಆ ಅಳಗದ ಮೇಲೆ ಒಂದೆರಡು ಮಡಕೆಗಳು ಒಂದರ ಮೇಲೊಂದು ನಿಂತೊ ಕುಂತೊ ಇದ್ವು. ನೆಲ ಬಗದು ತೆಗದರೂ ಮಾಲು ಏಳದು ಎಂಬ ಸ್ಥಿತಿಯನ್ನು ಪೋಲೀಸರು ಮುಟ್ಟಲು ದಫೇದಾರಿ ಮುಂದಾಳ್ತನದಲ್ಲಿ ಪೀಸಿಗಳು ಹೊರಬಂದರು.

ದಫೇದಾರಿ ಕಂಡದ್ದನ್ನು ಸಾಹೇಬರೆದುರು ತೋಡಿಟ್ಟು ಹಜಾರದಲ್ಲಿ ನೆಗದಾಡ್ತ ಹುಡುಕುತ್ತಿದ್ದ ಪೋಲೀಸರ ಕೂಡಿಕೊಂಡನು. ಒಬ್ಬ ಪೀಸಿ ಸೌದೆಯ ಸರಿಸಿ ನೋಡುತ್ತಿದ್ದನು. ಇನ್ನೊಬ್ಬ ಹಜಾರದ ಪೆಟ್ಟಿಗೆಯ ಉಲ್ಟಾ ಮಾಡಿದನು. ಅಲ್ಲೆ ಎಮ್ಮೆ ದನಕ್ಕೆ ಮೇವಾಕುವ ಚಣುಗದಲ್ಲಿ ಬೂದಿಕಸ ತುಂಬಿತ್ತಲ್ಲಾ, ಅಲ್ಲಿಗೆ ಲಾಟೀ ಒಳಕ್ಕೆಟ್ಟು ತಗದು ಮತ್ತೊಬ್ಬ ಪೀಸಿ ಪರಿಕಿಸುತ್ತಿದ್ದನು. ಆ ಪರೀಕ್ಷೆಗೆ ಬೂದಿ ಕಣಗಳು ಹೆದರಿ ಹಟ್ಟಿ ತುಂಬಾ ಹಾರಾಡತೊಡಗಿದವು. ಆ ಚಣುಗ ಹತ್ತಿ ರೇವಣ್ಣನವರು ತೊಲೆ ಮೇಲಿದ್ದ ಸಾಡನ್ನು ಅಲ್ಲಾಡಿಸಿ ಇಳಿದರು. ಒಬ್ಬ ನೀರು ಕಾಯ್ಸುವ ಅಳುಗದ ಮುಚ್ಚುಳ ಎತ್ತಿ ಮೊಖ ಹಾಕಿ ಮೊಖ ತೆಗದನು. ಆಮೇಲ ಎಲ್ಲರೂ ಒಕ್ಕಡೆ ಸೇರಿ ಕಿರುಮನೆ ಎದುರಲ್ಲಿ ಅಡ್ಡಡ್ಡ ನೇತಾಕಿದ್ದ ದೊಡ್ಡ ತೊಂಬದೊಳಕ್ಕೆ ನಿಗುರಿ ನಿಗುರಿ ನೋಡಿಯೂ ಕಾಣಿಸದೆ, ಒಬ್ಬ ಪೀಸಿಯು ರೇವಣ್ಣನವರನ್ನು ಹೆಗಲಿಗೆ ಕೂರಿಸಿ ನೋಡೆಂದನು. ಆ ತೊಂಬೇಲಿ ಹಿಂದಲ ಕಾಲದ ಕತ್ತಲು ತುಂಬಿದ್ದು ಅಲ್ಲಾಡ್ಸಿದಾಗ ಅದು ಹೊರಬರುತ್ತಿತ್ತು. ಅದರೊಳಗ ಗವೀಲಿ ಹುದುಗಿದ್ದಂತೆ ಸುತ್ತಿಗೆ ಕುಡುಗೋಲು ಎಲಕೊಟ್ಟು ಗೋಣಿಚೀಲಾದಿಗಳು ತುಂಬಿದ್ದವು. ರೇವಣ್ಣನವರು ತೊಂಬದೊಳಕ್ಕ ಲಾಟಿ ಇಟ್ಟು ಮೇಲಿಂದ ಕೆಳಕ್ಕೆ ಕೆಳಗಿಂದ ಮೇಲಕ್ಕೆ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಅಲ್ಲಾಡ್ಸಿದರು. ಅದು ಲೊಳ ಲೊಳ ಎಂದು ಮಾತಾಡಿತು. ರೇವಣ್ಣನವರು ಏನೂ ಇಲ್ಲ ಅನ್ನುವ

ಮೊದ್ಲೆ ಹೊತ್ತಿದ್ದ ಪೀಸಿ ಅವುರನ್ನು ನೆಲಕೆ ಕುಕ್ಕಿದನು. ರೇವಣ್ಣನವರು 'ಬಂದೇ ಸ್ವಾಮಿ' ಎಂದು ದಫೇದಾರರಿಗೆ ಅಂದು ಹಿಂಜರ್ಕೊಂಡು ಇನ್ಸ್‌ಪೆಕ್ಟರ ಕಣ್ಣು ತಪ್ಪಿಸಿ ಹೊರಬಂದರು.

ಹೊರುಗೆ ಜನಸಾಗರ, ಆ ಜನಸಾಗರವ ತಡಗಟ್ಟುತ್ತಿದ್ದ ಜೊತಪೀಸಿಗೆ ಕಯ್ಯಾಡಿಸಿ ರೇವಣ್ಣನವರು ಬೀಡಿ ಹಚ್ಚಿಕೊಂಡು ನಡಗೇಗೆ ಠೀವಿ ಅಂಟಿಸಿಕೊಂಡು ಹಟ್ಟೀ ಹಿಂದಕ್ಕೆ ಬಂದರು. ಗೋಡೆ ಸಂದೀಲಿ ಮಾಲು ಸುರ್ದಿರಬಹುದಾ ಎಂಬ ಅನುಮಾನ ಆವರ ತಲೇಲಿ ಮಿಂಚಾಡಿತ್ತು. ಈ ಮಿಂಚಿನೊಟ್ಗೇ ಎತ್ತಿ ಕುಕ್ಕಿಸಿಕೊಂಡ ರಭುಸಕ್ಕೆ ಅವರಿಗೆ ಒಂದಾದ್ದು ಡಿಮಾಂಡ್ ಮಾಡುತ್ತಿತ್ತು. ಆ ವೋಣೀ ಉದ್ದಕ್ಕೂ ನಡೆದೂ ನಡುದೂ ಅಂಥ ಯಾವ ಸುಳುವೂ ಇಲ್ಲದೇನೆ ಕಾಲ್ಗಳ ನಡದಾಡಿಸಿದ ಸುಸ್ತಿಗೆ ಕಣ್ಗಳು ಮಂಜ್ಗಟ್ಟಿ ರೇವಣ್ಣನವರು ಆ ವೋಣಿಯಲ್ಲಿ ಒಂದಾ ಮಾಡಲು  ಕೂತರು.

ಅಲ್ಲಲ್ಲೆ ಗೋಡೆಗಂಟಿಕೊಂಡು ತಲೆಮಾತ್ರವ ಇಣುಕಿಸಿ ನೋಡುತ್ತಿದ್ದ ಹೆಂಗಳೆಯರು, ರೇವಣ್ಣನವರ ಠೀವಿ ಕಂಡು ಏನೋ ಅದೆ ಅಂದುಕೊಂಡು ವೋಣಿಗಿಣುಕಿ ಆ ಸ್ಥಿತಿಯಲ್ಲಿ ರೇವಣ್ಣನವರನ್ನು ಕಂಡರು. ಆಗ ಅವರುಗಳ ಬಾಯಿಂದ ನಗು ಅನ್ನೋದು ಉಕ್ಕೇರಲು ಸೆರಗು ಮುಚ್ಚಿ ಅದ ಅದುಮುತ್ತ ಮರೆಯಾಗುತ್ತಿದ್ದರು. ಯಾರಾರು 'ಯಾನ ಅದು' ಅಂತ ಕೇಳಿದರೆ ಅವರಿಗೆ ಹುಸಿಕೋಪ ಬಂದೂ ಕೇಳ್ದವರಿಗೆ 'ನೀನೆ ನೋಡದ' ಅನ್ನುತ್ತಿದ್ದರು. ನೋಡ್ದವಳು ಅವಳೂ ಅವರಂತೆನೆ ಆಗುತ್ತಿದ್ದಳು. ಒಬ್ಬಳು ಸೆರುಗ ಬಾಯೊಳಕ್ಕೆ ತುರುಕಿಕೊಂಡಷ್ಟೂ ನಗು ಒದ್ದುಕೊಂಡು ಬಂದು ಜೋರಾಗಿ ಕೀಕೀಕೀ ಮಾಡಿ ಸುತ್ತಲಿದ್ದ ಹೆಂಗಳೆಯರು ನಗುವಿನೊಡನೆ ವೀರಾವೇಶದಿಂದ ಹೋರಾಡುವಂತಾಯ್ತು. ಇತ್ತ ರೇವಣ್ಣನವರು ತಮ್ಮ ತೊಡೆಗಳ ನಡುಗಿಗೆ ಮನಸ್ಸಿಂದ ಬಲ ರವಾನಿಸಿ ಎದ್ದು ಹೆಜ್ಜೆ ಇಟ್ಟರು.

ರೇವಣ್ಣನವರು ಒಂದಾ ಕಾರ್ಯಕ್ರಮದಲ್ಲಿ ಇರುವಾಗ್ಯೇ ಇಲ್ಲಿ ಕಿರುಮನೆ ಜಪ್ತಿ ನಡೆಯುತ್ತಿತ್ತು. ಪೋಲೀಸರು, ಆ ಬಾಗಿಲು ಹಿಡಿಸದಂಥವರು ಒಳನುಗ್ಗಿದಾಗ ಕಿರುಮನೇಲಿ ಕತ್ತಲು ಕಟ್ಟಿಕೊಂಡಿತು. ಚಲುವಮ್ಮ, ಬೆದರಿಕೊಂಡು ಅಳುತ್ತಿದ್ದ ಮಕ್ಕಳು ಚೀರುವುದರೊಳಗಾಗಿ ಹೊರಕ್ಕೆಳೆದುಕೊಂಡು ಬಂದು ಕುಕ್ಕರಬಡಿದಳು.ಇನ್ಸ್‌ಪೆಕ್ಟರು ದುರುಗುಟ್ಟಿ ನೋಡುತ್ತಿದ್ದರು. ಚಲುವಮ್ಮನ ದೊಡ್ಡಜೀವ ಸಣ್ಣಜೀವ ಎರಡೂವೆ ನಾ ಮುಂದು ತಾ ಮುಂದು ಎಂದು ಹೊರಹೋಗಲು ಒಂದರ ಮೇಲೊಂದು ಬಿದ್ದು ನುಗ್ಗುತ್ತಿದ್ದವು. ಚಲುವಮ್ಮ, ಕಿರುಮನೇಲಿ ತನ್ನ ಪರಾಣಗಳಿಗಾಗುತ್ತಿದ್ದ ಜಖಂ ಅನ್ನು ಕಣ್ಣಿಂದ ನೋಡಕಾಗದೆ ತಲತಗ್ಸಿ ತನ್ನ ಕೂಸ ಎದೆಗವುಚಿಕೊಂಡು ತಟ್ಟತೊಡಗಿದಳು. ಅವಳ ಹಿಂದುಮುಂದಿದ್ದ ಹೈಕಳು, ಜೋರಾಗಿ ಅಳಲು ಗೋರಂಜ ಸಾಲ್ದೆ ಸೊರಗುಟ್ಟುತ್ತಿದ್ದವು.

ಪೋಲೀಸರು ಕಷ್ಟಪಟ್ಟು ಹೊಕ್ಕಂತ ಆ ಕಿರುಮನೇಲಿ ಅಂಥ ಎರಡು ಮನೆಗಾಗುವಷ್ಟು ಸಾಮಾನು ಸರಂಜಾಮು ಅಡಗಿದ್ದವು. ಪೀಸಿ ದಫೇದಾರರು ಹಬ್ಬದ ಸಡಗರದೊಡನೆ ಅಲ್ಲಿದ್ದವುಗಳ ಎತ್ತಿಕುಟ್ಟಿ ಒಡೆದು ನೋಡತೊಡಗಿದರು. ನೋಡ್ದ ಕಡೆಗೆ ಒಂದಲ್ಲಾ ಒಂದು ಚಂಬು ಚಲುಗ ಹರೋಣ ಗಳಾಸುಗಳಿದ್ದವು. ಒಂದರ ಮೇಲೊಂದು ಜೋತಿದ್ದ ದಪ್ಪದಪ್ಪ ಮಡಕೆಗಳಲ್ಲಿ ಒಂದರಲಿ ಆರೇಳು  ಸೇರಷ್ಟು ಜೋಳ, ಇನ್ನೊಂದರಲಿ ಅಸಿಟ್ಟನ್ನು ತಟ್ಟಿಡಲಾಗಿತ್ತು. ನಡುಮಧ್ಯದಲ್ಲಿ ಬೇಕಾಬಿಟ್ಟಿ ಬಿದ್ದಿದ್ದ ಟ್ರಂಕಲ್ಲಿ ಆತುರವಾಗಿ ತುರುಕಿದಂತೆ ಬಟ್ಟೆಬರೆಗಳು ಉಸುರು ಕಟ್ಕಂಡು ಇದ್ದವು. ಉಳಿದ ಬಟ್ಟೆಬರೆ ದುಪ್ಪಟಿಗಳು ಹಗ್ಗದುರೀಲಿ ಜೋಡಿಸಿಕೊಂಡು, ಮೊರ ಗೆರಸಿ ವಂದರಿಗಳು ಗೋಡೆಗಂಟಿಕೊಂಡು ಇದ್ದವು. ಕೆಳಗೊಂದು ಚಾಪೆ ಹಾಸ್ಕೊಂಡು ಮಲುಗಿತ್ತು. ಮಂದಲಿಗೆಯೊಂದು ಸುತ್ಕೊಂಡು ನಿಂತಿತ್ತು. ತನ್ನ ಸುತ್ತಾ ಒಂದೆರಡು ಹರೋಣ ಗಳಾಸು ಚಂಬುಗಳೊಡನಿದ್ದ ಕಂಚೀನ ಅಂಡೇಲಿ ನೀರು ತುಂಬಿತ್ತು. ಗೋಡೆ ಮೊಳೆಗಳಲ್ಲಿ ದೋಸಕಲ್ಲು ಸೀಸಗಳನ್ನು ನೇತಾಕಿದ್ದು ಒಂದರಲ್ಲಿ ಅರಸೀಸೆಯಷ್ಟು ಸೀಮೆ ಎಣ್ಣೆ ಇತ್ತು. ಪೀಸಿಯೊಬ್ಬ ತೊಂಬದ ಮಣ್ಮುಚ್ಚಳವ ಕಿತ್ತು ಬಿಸುಟು ಕೈಹಾಕಲು ಬೂದಿ ಬೆರಸಿಟ್ಟಿದ್ದ ಬಿತ್ತಣದ ಜೋಳದ ಕಾಳ್ಗಳು ಪೀಸಿ ಕೈಯಿಂದ ನೆಗೆದು ಬಿದ್ದವು. ಆ ನಾಕು ಜನರೂ ಬುಡುತ್ತಿದ್ದ ಬಿರುಸಾದ ಉಸುರಾಟಗಳು ಅವರವರನ್ನೆ ತಳ್ಳುತ್ತಿದ್ದು ಅವರೆಲ್ಲರೂ ಒಬ್ಬೊಬ್ಬರಾಗಿ ನಿಧಾನವಾಗಿ ಹೊರಬಂದರು.

ಬಂದವರು ಒಂದು ಚಣವೂ ನಿಲ್ದೆ ತತರಪತರ ನಡುಮನೆಗೆ ನುಗ್ಗತೊಡಗಿದರು. ಸಾಕವ್ವ ಜೀವ ಕೈಲಿಡಿದುಕೊಂಡು 'ಸ್ವಾಮ್ಗಳೊ... ದೇವ್ರಮನೆ ಬುದ್ಯೊ. ಬೂಟ್ಗಾಲಲ್ಲಿ... ' ಎಂದು ಕೈ ನೀಟಿದಳು. ದಫೇದಾರಿ ಒಂದ್ಸಲ ಬೂಟ್ಗಾಲ ನೆಲಕ್ಕ ಗುದ್ದಿ 'ಹೇ...ಬಾಯ್ಮುಚ್ಕೊಂಡು ಬಿದ್ದಿರು. ದುಸರಾ ಮಾತಾಡಿದ್ರ ಬಾಯ್ಗ ಬೂಟ ಎಟ್ತೀನಿ' ಅಂದು ಕೆಕ್ಕರಿಸಿಕೊಂಡು ನಡುಮನ್ಗೆ ನುಗ್ಗಿದನು. ಸಾಕವ್ವ ಬಾಯ ಬುಟ್ಕಂಡು ಕಣ್ಗುಡ್ಡೆಗಳ ಅಲುಗಾಡಿಸ್ದೆ ಕೂತಳು.

ನಡುಮನೆ ಒಳಗಿದ್ದ ಅಕ್ಕ ತಂಗೀರು ಉಸುರು ಬುಡ್ದೆ ಹೊರಬಂದು ಕಿರುಮನೆ ದಿಕ್ಕ ಮೊಖಹಾಕಿ ಉಸುರು ಬುಟ್ಟು ನಿಂತರು. ದುಪ್ಪಟಿ ಹೊದ್ದು ಗೋಡೆ ನೋಡ್ತ ಕೂತಿದ್ದ ದುಪ್ಟಿಕಮಿಷನರು 'ಅವ್ವೆ ಅವ್ವೆ' ಅನ್ನುತ್ತ, ತ್ರಾಣ ಕೂಡಿಸಿ ಎದ್ದು ನಡೆಯೂತ ಬಂದು ನಿಧಾನವಾಗಿ ಮುಂಡಿಗೆಗೊರಗಿ ನೆಲಕೆ ಕಯ್ಯಿಳಿಸಿತು.

ಹಟ್ಟಿ ಮುಂದಲ ಜನಪ್ರವಾಹಕ್ಕೆ ಇನ್ನೂ ಹತ್ತು ಜನರು ಸೇರಿಕೊಂಡರೇನೊ. ಆ ಗುಂಪನ್ನು ಭಾಗಮಾಡಿಕೊಂಡು ಒಬ್ಬ ಮುಂದ್‌ಮುಂದಕ ನುಗ್ಗುತ್ತಿದ್ದನು. ಜನ ತಡಗಟ್ಟುತ್ತಿದ್ದ ಪೀಸಿ ಅವನನ್ನು ಹಿಂದ್‌ಹಿಂದಕ ತಳ್ಳುತ್ತಿದ್ದನು. ಕೊನೆಗವನು 'ನಾನೂವಿ ಈ ಹಟ್ಟಿವ್ನೆ ಸ್ವಾಮೆ, ಬುಡಿ' ಅಂದನು. ಈ ಪೀಸಿ ಗಬಕ್ಕ ಅವನ ತೋಳಹಿಡಿದು 'ನೀನೆ ಬೇಕಾಗಿದ್ದವ್ರು ಬಾ ಬಾ' ಎಂದು ಎಳೆದು, ಸೂಲು ಕೂಡಿಸಿಕೊಳ್ಳುತ್ತಿದ್ದ ರೇವಣ್ಣನಿಗೆ ಒಪ್ಪಿಸಿದನು. ರೇವಣ್ಣನು ಮನದಲ್ಲೆ ಗುರುಸಿದ್ದೂನ ಚಹರೆಯನ್ನು ನಾಕುಸಲ ನೋಟ್ ಮಾಡಿಕೊಂಡಿದ್ದರಿಂದ ಪತ್ತೆ ಸಿಕ್ಕಿ ಗುರುಸಿದ್ದೂನ ತೋಳ ಹಿಡಿದು ಒಳಕ್ಕೆಳೆದು ತಂದು ಸಾಹೇಬರ ಮುಂದಕ ತಳ್ಳಿ 'ಇವ್ನೆ ಮಾಸ್ವಾಮಿ ರಾತ್ರಿ ಬಂದು ಹೋದವನು' ಎಂದು ನಿಂತನು. ಇನ್ಸ್‌ಪೆಕ್ಟರು ಒಂದು ಸಲ ಕಣ್ಣಲ್ಲೆ ಗುದ್ದರಿಸಿದರು.

'ನೀನೇನಾ ರಾತ್ರಿ ಬಂದು ಹೋದವನು?

''ಅಹುದು ಸ್ವಾಮಿ'

'ಯಾಕ್ ಬಂದಿದ್ದೆ?'

'ಹಿಟ್ಟುಣ್ಣಾಕೆ ಸ್ವಾಮಿ'

'ಆಮೇಲೆ ಎಲ್ಲಿಗೆ ಹೋದೆ?'

'ಮಾರಿಗುಡಿಗೆ ಮಲಗಾಕೆ ಸ್ವಾಮಿ'

'ಹೊತ್ಕೊಂಡು ಹೋದ ಕಡಲೆಕಾಯಿ ಏನ್ಮಾಡ್ದೆ?'

'ಇಲ್ಲ ಸ್ವಾಮಿ'

ಇನ್ಸ್‌ಪೆಕ್ಟರ ತಲೆ ಚಿಟ್ಟೋ ಅಂತು.ಇನ್ಸ್‌ಪೆಕ್ಟರು ತಿರುಗಾಡುತ್ತಿದ್ದವರು ನಿಂತು ಪುಟಗೌರಿ ಕಡೆ ಬೆರಳು ತೋರಿಸಿ 'ಹೇ ಹುಡ್ಗಿ, ಬಾ ಇಲ್ಲಿ' ಅಂದರು. ಪುಟಗೌರಿ ಕಣ್ಣೆತ್ತಿ ನೋಡಿ ಕಣ್ಣ ಇಳುಸಿ ನಿಂತಂತೆ ನಿಂತಳು. ಸಾಹೇಬರು ಈಗ ಗುಡುಗಿಕೊಂಡರು. ಪುಟಗೌರಿ ಬಂದು ನಿಂತು ನಡುಗಿದಳು.

'ಲೇ ಹುಡ್ಗಿ...ನಿಜ ಹೇಳು ನಿಂಗೇನು ಮಾಡೋಲ್ಲ...'

ಪುಟಗೌರಿ ತುಟಿಕಚ್ಚಿಕೊಂಡಳು.

'ಕಡ್ಲೆಕಾಯ್ ಮೂಟೆ ಎಲ್ಲಿ?'

ಪುಟಗೌರಿ ಬಾಯಿ ಬಿಡಲಿಲ್ಲ.

'ಮಾತಾಡು'

ಪುಟಗೌರಿ ಮಾತಾಡಲಿಲ್ಲ.

'ಮಾತಾಡು ಚಿನಾಲಿ'

ಪುಟಗೌರಿ ಬಾಯ್ಗೆ ಸೆರಗು ತುರುಕಿಕೊಂಡಳು.

ಇನ್ಸ್‌ಪೆಕ್ಟರ ರೂಲುಗೋಲು ಪುಟಗೌರಿ ಗಲ್ಲವನ್ನು ಸವುರುತ್ತಿತ್ತು. ಪುಟಗೌರಿ ಮಾತುಗಳು ಹೊಟ್ಟೆ ಒಳ್ಗ ಅವುತುಕೊಳ್ಳುತ್ತಿದ್ದವು. ಗುರುಸಿದ್ದು, ಇನ್ಸ್‌ಪೆಕ್ಟರ ದುರುಗುಟ್ಟಿ ನೋಡುತ್ತಿದ್ದನು. ಸಾಹೇಬರು ರೂಲುಗೋಲನ್ನು ಪುಟಗೌರಿ ಗಲ್ಲದಿಂದ ತೆಗೆದು ಗುರುಸಿದ್ದೂನ ಕಣ್ದಿಕ್ಕ ಚಾಚಿ 'ಮಗ ನೋಡದ್ ನೋಡು ನೋಡದ. ಕಣ್ಗುಡ್ಡೆ ಮೀಟಾಕ್ತೀನಿ......ಹೇ' ಎಂದು ಹಲ್ಲ ನೊರಗುಟ್ಟಿದರು. ಗುರುಸಿದ್ದು ನೋಟಕ್ಕೆ ಸಾಹೇಬರ ಒಂದೆರಡು ರೋಮಗಳು ಅಳುಕುಪಟ್ಟಿದ್ದವು. ಸಾಹೇಬರು ಸಿಕರೋಟು ಹಚ್ಚಿದರು.

ನಡುಮನೆಗೆ ನುಗ್ಗಿದ ಪೀಸಿಗಳಿಗೆ ಆ ಕಡೆಗೊಂದು ಗಿಣಿ ಈ ಕಡೆಗೊಂದು ಗಿಣಿ ನಡು ಮಧ್ಯ ಕುಂತ ಕೃಷ್ಣ ಪರಮಾತ್ಮನ ಗೊಂಬೆ ಎದುರುಗೊಂಡಿತು. ಆ ಗೊಂಬೆಗಳ ಉದ್ದಕ್ಕೂ ನಲೀವಂತೆ ಬಳೆಮಾಲೆಯ ಸಿಂಗರಿಸಿತ್ತು. ಪಕ್ಕದಲಿ ದೀಪಾಲೆ ಕಂಬವೊಂದಿದ್ದು ಆ ದೀಪಾಲೆ ಕಂಬದ ಮೇಲೊಂದು ದೀಪವಿದ್ದು ಆ ದೀಪದೊಳಗ ಎಣ್ಣೆ ಇತ್ತೊ ಇಲ್ವೊ

ಯಾರೂ ನೋಡಲಿಲ್ಲ. ಕೆಳಗೊಂದು ಮುಚ್ಚಳದ ಬಿದಿರು ಪುಟ್ಟೀಲಿ ಒಂದೆರಡು ಲಂಗ ಸೀರೆ ರವುಕೆ, ಸಿವೂನ ಅಂಗಿ ಚಡ್ಡಿ ಮಡಿಸಿಡಲಾಗಿತ್ತು. ಗೋಡೆಗೆ ಕೂಡಿಸಿದ್ದ ಬೊಂಬಿನ ಮೇಲೊಂದು ಪುಟ್ಟೀ, ಆ ಪುಟ್ಟೀಲಿ ಸೇರು ಪಾವು ಇದ್ವು. ಬೊಂಬಿನ ಉಳಿದೆಡೆ ದುಪ್ಪಿ, ಹರಿದಿದ್ದ ಹಳೆ ಸೀರೆ ಮತ್ತು ಹೊಸ ಚೀಟಿ ಸೀರೆ ಹಾಗೂ ಪಂಚೆ ಚೊಗ ಮುಂತಾಗಿದ್ದವು. ನೀರಳಗ ತನ್ನ ಸುತ್ತಲೂ ಗಳಾಸು ಚಂಬು ಹರೋಣ ತಟ್ಟೆಯ ಓತುಕೊಂಡಿತ್ತು. ಮುಂದೆ ಬಾಗಲಿಲ್ಲದ ಕೋಣೇಲಿ ಒಂದು ಮಜ್ಜಿಗೆ ಕಡಿಯೋ ಕಂಬ ಒಂಟಿಬಡ್ಕ ಸುಂಟ್ರಗಾಳಿಯಂತೆ ನಿಂತಿತ್ತು. ಮೇಲಿಂದ ಹಗ್ಗ ಕಟ್ಟಿ ಇಳಿಬಿಟ್ಟಿದ್ದ ನೆಲುವಿನಲ್ಲಿ ಬಟ್ಟೇಲಿ ಬಾಯಿ ಕಟ್ಕಂಡು ಎಣ್ಣೆ ಇಲ್ದ ಎಣ್ಣೆಗಡ್ಗ, ತುಪ್ಪ ಇಲ್ದ ತುಪ್ಪದ ಗಡ್ಗ ಒಂದರ ಮೇಲೊಂದು ತೂಕಡಿಸುತ್ತಿದ್ದವು. ಆ ನೆಲು ಉದ್ದಕ್ಕೂ ಅರಸಿನದ ಬಟ್ಟೇಲಿ ಕಟ್ಟಿದ್ದ ಹರಕೆ ಕಾಸುಗಳು ನೇತಾಡುತ್ತಿದ್ದವು. ಅದರ ಕೆಳಗೇನೆ ಒಂದೆರಡು ದ್ಯಾವರ ಪೋಟೊ ಮೊಳೆಗೊಡದಿದ್ದು ಆಗಾಗ್ಗೆ ಊದುಬತ್ತಿ ಸಿಕ್ಸಿದ್ದ ಗುರ್ತು ನಿಂತಿತ್ತು. ಒಲೆಯ ಕೆಳಗೆ ಮೇಲೆ ಅಕ್ಕಪಕ್ಕ ಆ ಮಡಕೆ, ಈ ಮಡಕೆ, ಹಿಟ್ನ ಮಡಕೆ, ಉದುಕ್ದ ಮಡ್ಕಗಳು ಸುಡುಗಾಡಲ್ಲಿ ಬಿದ್ದಿರುವಂತೆ ಬಿದ್ದಿದ್ದು, ಗೋಡೆಯ ದೊಡ್ಡ ಮೊಳೇಲಿ ನೂಲೊರಾಟೆಯ ಕತ್ತಿಗೆ ಹಗ್ಗ ಬಿಗುದು ನೇಣಾಕಿತ್ತು. ಕೋಣೆಯಿಂದ ಪೋಲೀಸರು ಕಣ್ಣಮೇಲು ಮಾಡಿಕೊಂಡು ನಡುಮನೆಗೆ ಬಂದರು.

ಇನ್ನು ನಡುಮನೆಯ ಅಟ್ಲು ನೋಡುವುದು ಉಳಿದಿತ್ತು. ಎಲ್ಲವೂ ದಪ್ಪ ದಪ್ಪವಾಗಿದ್ದ— ಮೀಸೆ ಹೊಟ್ಟೆ ಕೈಕಾಲು ಇಟ್ಟುಕೊಂಡಿದ್ದ ಪೀಸಿಯೊಬ್ಬ, ನಡುಮನೆ ದಾರಂದಕ್ಕೆ ಕಾಲುಕೊಟ್ಟು ಅಟ್ಲುಗೆ ಹತ್ತಿದನು. ಅಲ್ಲಿ ಇಲಿಪಿಕ್ಕ ಇಲ್ಲಣಗು ಹಳೇಚಾಪೆಗಳ ನಡುವೆ ಜಾಯಕಾಯಿ ಪೆಟ್ಟಿಗೆಯೊಂದಿತ್ತಷ್ಟೆ. ಅದ ಎತ್ತಿ ಕೆಳಕ್ಕೊಗದು ಪೀಸಿಯು ಹೊಟ್ಟ ಕುಲುಕುಸ್ತ ಇಳಿದು ಬೊಸ ಬೊಸ ಉಸುರುಬುಡ್ತ ನಿಂತನು.ಜಾಯಕಾಯಿ ಪೆಟ್ಟೀಲಿ ನಡೆಯದ ಮತ್ತು ಸವಕಲು ಕಾಸುಗಳು ಚೆಲ್ಲಿಕೊಂಡಿದ್ದವು. ದಫೇದಾರಿ ಪೀಸಿಗಳು ಕೈಚೆಲ್ಲಿ ಇನ್ನೊಂದ್ಸಲ ಕಣ್ಲೆ ಜಪ್ತಿಮಾಡಿ ಹೊರಬಂದರು. ಯಾವ ಜಪ್ತಿಗೂ ಸಿಗದೆ ಗೋಡೆ ಮೇಲಿನ ನವುಲುಗಳು ಕುಣಿಯುತ್ತಿದ್ದವು.

ದಫೇದಾರಿ ಪೀಸಿಗಳು ಬಂದು ನಿಂತ ಥರದಲ್ಲೆ ಇನ್ಸ್‌ಪೆಕ್ಟರಿಗೆ ಇಲ್ಲ ಅನ್ನಿಸಿತು. ದಫೇದಾರಿ ಕಂಡದ್ದನ್ನೆಲ್ಲ ಕಣ್ಣಿಂದ ತಗ್ದು ಸಾಹೇಬರ ಮುಂದಿಟ್ಟನು. ಅಟ್ಟಲು ಹತ್ತಿಳಿದಿದ್ದಂಥ ಪೀಸಿ ಮೇಲುಕೂ ಕೆಳಕೂ ತಿದಿಯೊತ್ತುತ್ತಿದ್ದನು. ಸಾಹೇಬರು ಕಣ್ಣಿಂದಲೇ ರೇವಣ್ಣನನ್ನು ಸೆಳ್ದುಕೊಂಡರು. ರೇವಣ್ಣ ಬಂದು ನಡುಗುತ್ತಿದ್ದ ತೊಡೆಗಳಿಗೆ ಕಯ್ಯ ಜೋಡಿಸಿಕೊಂಡು ಅಟೆನ್‌ಷನ್‌ನಲ್ಲಿ ನಿಂತನು.

'ಎಲ್ಲಯ್ಯಾ...?'

'ಮಾಸ್ವಾಮಿ ನಮ್ಮ ತಾಯಾಣ್ಗೂ...'

'ಬೊಗಳು......'

'ನಾನು ಖುದ್ದು ನೋಡ್ದೆ...'

'ಬೇಕೂಫ ಸರಿಯಾಗು ಹೇಳು...'

'ಸರಿಯಾಗೇ ನೋಡ್ದೆ ಮಾಸ್ವಾಮಿ... ಇವ್ನ್ನೆ ಒಂದ್ಮೂಟೆ ಹೊತ್ಗಂಡು...'

'ನೀನೆಲ್ಲಿ ಸಾಯಾಕ್ ಹೋಗಿದ್ದೆ...?'

'ನಾ......ನು ಕಣ್ಮುಚ್ಚದೆ ಕಾಯ್ಕಂಡೇ ಇದ್ದಿ ಬುದ್ದೀ'

'ಮತ್ತೇನಾಯ್ತು ಅದು...?'

'ಮಾಸ್ವಾಮಿ...'

'ಮನೆಯವರೆಲ್ಲ ಸೇರಿ ಒಂದಕ್ಕೆರಡು ಅಂತ ತಿಂದ್ರೂನೂವೆ ಮೂಟೆ ಮುಗೀತದೇನಯ್ಯ...?'

'ಮಾಸ್ವಾಮಿ...'

'ಥು...ತೊಲಗು'

ರೇವಣ್ಣನವರ ಕಡ್ಡಿಕೈಕಾಲುಗಳು ಒಂದಕ್ಕೊಂದು ಬಡ್ದುಕೊಂಡವು.

ಅಷ್ಟೊತ್ತಿಗೆ ಹಾಗೂ ಹೀಗೂ ಹತ್ತಾರು ಜನವೂ ಒಳಬಂದು ಗಪ್ಪಚಿಪ್ ನಿಂತಿದ್ದರು. ಸಾಹುಕಾರರಿಗೂ ಏನೂ ತೋಚದಾಗಿ ಹೊಟ್ಟ ಒಳಗ ಬಿಂಕಿ ಇರೋ ಈ ರಾಕ್ಷ ಜನ ತಿಂದಿರಲೂಬಹುದಾ ಅನ್ನಿಸಿತು. ಇನ್ಸ್‌ಪೆಕ್ಟರು ರೂಲುದೊಣ್ಣೆಲಿ

ಕಾಳಣ್ಣನ ಗಲ್ಲವ ಎತ್ತಿ 'ಈ ಸಲ ಬದುಕ್ದೆ ನನ್ ಮಗ್ನೆ, ನೀನು ಎದ್‌ಗಳಿಗೆ ಚೆನ್ನಾಗಿತ್ತು. ಇನ್ನೊಂದ್ಸಲ ಏನಾರು ಚೂರು ಸುಳಿವು ಸಿಕ್ಕೊ... ನಿನ್ ಚಮ್ಡ ಸುಲ್ದು ಬುಡ್ತೀನಿ' ಎಂದು ಹೂಂಕರಿಸಿದರು.

ಆ ಹೂಂಕಾರವು ಚಣಗದ ಬಳಿ ನೆಲ ತುಳಿಯುತ್ತಿದ್ದ ರೇವಣ್ಣನಿಗೆ ಬಂದು ಗುದ್ದಿತು. ರೇವಣ್ಣ, ದೇಹ ಮನಸು ಆತ್ಮಗಳ ಶಕ್ತಿಯನ್ನೆಲ್ಲ ಸಮ್ಮಿಳನಗೊಳಿಸಿ ಒಂದ್ಸಲ ಆ ನೆಲಕ್ಕೆ ಎರಡೂ ಕಾಲುಗಳಿಂದಲೂ ಗುದ್ದಲು ಅವನ ಭಾರಕ್ಕೊ ಅವನ ಬೂಟುಗಳ ಭಾರಕ್ಕೊ ಅಲ್ಲಿ ಶಬುದದೊಡನೆ ನೆಲ ದೊಸ್ಕಂಡು ಹಳ್ಳ ಉಂಟಾಯ್ತು. ರೇವಣ್ಣ 'ಈ ನೆಲ ಯಾಕೊ ಅನುಮಾನ ಮಾಸ್ವಾಮಿ... ಸೌಂಡು ಮಾಮೂಲಿ ಇಲ್ಲ' ಎಂದು ಎರಡೂ ಕೈಲೂ ಹಳ್ಳದ ಮಣ್ಣು ತೋಡಲು ಅಲ್ಲಿಂದ ಹಟ್ಟಿಯ ನಾಕಾದಿಕ್ಕೂಇಲಿಬಿಲಗಳು ಹೊರಟದ್ದವು. ಒಂದೆರಡು ಇಲಿಗಳು ಹೊರಕ್ಕೆ ನೆಗದು ಓಡಾಡಿ ಹೋದವು. ರೇವಣ್ಣನವರು ಒಂದು ಬಿಲದೊಳಕ್ಕೆ ಕಯ್ಯ ಸಲೀಸಾಗಿ ತುರುಕಿ ಹಿಂದಕ್ಕೆಳೆಯಲು ಅವರ ಕೈಲಿ ಹತ್ತಾರು ಕಡ್ಲೆಬೀಜಗಳು ಇದ್ದು, ದೈವ ಸಾಕ್ಷಾತ್ಕಾರವಾದಂತಾಗಿ 'ಸಿಕ್ತು ಮಾಸ್ವಾಮಿ' ಎಂದು ಕೈಚಾಚಿ ರೇವಣ್ಣನವರು ಕೂಗಿದರು. ಮಾಸ್ವಾಮಿಗಳು ನೋಡಿ 'ಅವ್ನೆಲ್ಲ ಗಂಟುಮೂಟೆ ಕಟ್ಟಿ ಹೊತ್ಗೊ ...ನಿನ್ನ ಹೆಂಡ್ತಿ ಮಕ್ಕಳ್ಗೆ ಕೊಡುವಂತೆ' ಅಂದರು. ರೇವಣ್ಣನವರ ಕೈಗೆ ನಡುಕ ಬಂದು, ಕಡ್ಲೆ ಬೀಜಗಳು ನೆಲಕಂಡು ಖುಷಿಗೊಂಡವು. ರೇವಣ್ಣನವರು ಆ ಇಲಿ ಬಿಲಗಳ ನೋಡ್ತ ಕಣ್ಣುಗುಡ್ಡೇನ ಆ ಬಿಲದೊಳಕ್ಕೆ ನೆಟ್ಟು ಅಲ್ಲಿಂದ ಕಣ್ಣು ಎತ್ತದೆ ನಿಂತರು.

ಅಟ್ಟಲು ಹತ್ತಿಳಿದಿದ್ದ ಆ ದಪ್ಪ ಪೀಸಿ ಇನ್ನೂ ನಗರುತ್ತಿದ್ದನು. ಇನ್ಸ್‌ಪೆಕ್ಟರು 'ಸಾವ್ಕರ್ರೆ ಕಳ್ತನ ಹಿಡಿಯೋದು ನನ್ಮೇಲೆ ಇರ್ಲಿ' ಅಂದು, ಕಾಳಣ್ಣನ್ನ ಕಣ್ಲೆ ತಿಂದು ಹೊರಡಲು ತಿರುಗಿದರು. ಆಗ ಸಾಕವ್ವ ಸುಮ್ಮನಿರಲಾರದೆ 'ಮಾಸ್ವಾಮ್ಯೊ' ಅಂದಳು. ಇನ್ಸ್‌ಪೆಕ್ಟರು, ಅವರೊಡನೆ ದಫೇದಾರಿ ಪೀಸಿಗಳು ತಿರುಗಿ ನೋಡಿದರು

'ಮಾಸೋಮಿ...'

'ಏನ್ ಮುದ್ಕಿ...'

'ನನ್ನ ಕೋಳಿವುಂಜ ಮೊನ್ನಜಿನ ಚಂದಗಾಣವಾಗಿ ಹಟ್ಟಿಬುಡ್ತು ನನ್ನೊಡ್ಯ'

'ಏನಾಯ್ತು'

'ಇನ್ನೂವಿ ಹಟ್ಟಿ ಮುಟ್ಟಿಲ್ಲ ನನ್ನಪ್ಪ'

ಇನ್ಸ್‌ಪೆಕ್ಟರಿಗೆ ನಗು ಬಂತು.

'ಹುಂಜ ಯಾವ ರೀತಿ ಇತ್ತು ಮುದ್ಕಿ...'

'ತಾಳಿ ನನ್ನಪ್ಪ...'

ಸಾಕವ್ವ ಎದ್ದು ಕೋಲನ್ನೂ ಮರೆತು ಕಾಲಲ್ಲೆ ನಡೆದು ಪಂಜರ ಎತ್ತಿದಳು. ಕೊಕ್ಕರಿಸುತ್ತಿದ್ದ ಹುಂಜ, ಕೋಳಿ, ಮರಿಗಳು ನೆಗೆಯುತ್ತ ಹೊರಬಂದ್ವು. ಸಾಕವ್ವ ಒಂದು ದಪ್ಪನೆ ಹುಂಜನ ತೋರಿಸಿ ಅಂದಳು:

'ಅದೂನು ಇದ್ರ ಜೊತೇದೆ ಬುದ್ದಿ....'

'ಭೇಷ್ ಚೆನ್ನಾಗಿದೆ ಮುದ್ಕಿ. ಈ ಹುಂಜ್ನ ಹಿಡ್ಕೊಡು... ಅದನ್ನ ಹುಡುಕ್ಕೊಂಡು ಬರಾಕೆ ಇದನ್ನ ಕಳಿಸ್ತೀನಿ.'

'ಅಷ್ಟುಮಾಡಿ ನನ್ನಪ್ಪ... ನನ್ನ ಹೊಟ್ಟ ಕಟ್ಕಂಡು ಅದ ಸಾಕಿದ್ದಿ ನನ್ನೊಡ್ಯ...'

ನಗು ಅನ್ನೋದು ಅಲ್ಲಿಂದ ಎದ್ದು ಬಿದ್ದೂ ಬಿದ್ದು ನಗಾಡತೊಡಗಿತು.

ಅದು ಸಾಕವ್ವಗೆ ನಿಧಾನವಾಗಿ ಅರುವಾಯ್ತು. ಆಮೇಲ ಅವುಳು 'ಅಯ್ಯೊ ಅಯ್ಯೊ' ಅಂದುಕೊಂಡದ್ದು ಯಾರ್ಗೂ ಕೇಳಿಸಲಿಲ್ಲ. ಕಾಳಣ್ಣ ಕುಂತವ್ನು ಎದ್ದು, ಸಣ್ಣಯ್ಯ ನಿಂತವ್ನು ನಡ್ದು ಆ ಹುಂಜನ ಹಿಡಿಯಲು ತೊಡಗಲು ಅವುರೊಟ್ಟಿಗೆ ಉಳಿದವರೂ ಕೂಡಿಕೊಂಡರು. ಸಾಹುಕಾರರು ಒಂದು ರುಪಾಯ ನೋಟ ತಗದು ಮಡಿಚಿ ಸಾಕವ್ವನಿಗೆ 'ತಗೋ ಮುದ್ಕಿ... ಎಲೆ ಅಡುಕೇಗೆ' ಅಂದರು. ಸಾಕವ್ವ 'ಅಯ್ಯೋ... ಬ್ಯಾಡಿ ಸ್ವಾಮಿ, ಅಯ್ಯೋ ಬ್ಯಾಡಿ ನನ್ನಪ್ಪ' ಅನ್ನುತ್ತ ಈಸಿಕೊಂಡಳು.

ಇತ್ತ ಆ ಹುಂಜನ ಹಿಡಿಯಲು ಒಂದು ಗುಂಪೇ ಆಗಿ, ಆ ಹುಂಜ ನಡೆದರೆ ಈ ಗುಂಪೂ ನಡೀತ, ಆ ಹುಂಜ ನೆಗೆದರೆ ಈ ಗುಂಪೂ ನೆಗೀತ, ಹಟ್ಟಿ ತುಂಬ ನೆಗದಾಡಿ ಕುಣಿದಾಡಿ ಕೊನೆಗ ಆ ಹುಂಜನ ಕಾಲ್ಗ ಹಗ್ಗ ಬಿದ್ದು ಅದು ಜೀಪಿಗೆ ಬಿತ್ತು. ಆ ಜೀಪು ಧೂಳೆಬ್ಬಿಸುತ್ತ ಬರ್ರ್‍ರೋ ಅಂತು. ಜೀಪು ಬುಟ್ಹೋದ ಆ ಧೂಳು ಬೀದಿ ಒಳಗ ಆಡುತ್ತಿತ್ತು.

(೧೯೭೮)

## ಸ್ಥಳಿಕ ಪದಗಳಿಗೆ ಅರ್ಥ

ಅಟ್ಲು = ಅಟ್ಟ, ಅಟ್ಟಲು
ಅನೂನ್ಯ = ಅನ್ಯೋನ್ಯ
ಅಣಿ = ಸಿದ್ಧ
ಅರುವೆ = ಮಣ್ಣಿನ ಹರವಿ - ಬಿಂದಿಗೆ
ಅಸಿಟ್ಟು = ಹಸಿ ಹಿಟ್ಟು / ಧಾನ್ಯದ ಹಿಟ್ಟು
ಅಳಗ = ದೊಡ್ಡ ಮಣ್ಣಿನ ಪಾತ್ರೆ
ಇಲ್ಲಣಗು = ಹೊಗೆ ಹಿಡಿದ ಜೇಡರಬಲೆ
ಉದುಕ = ಸಾರು ನೀರು
ಎಕ್ಕತ್ತು = ಕತ್ತಿನ ಹಿಂಭಾಗ
ಎಡುದೂ = ಸುಲಿದೂ
ಎಲುಕೊಟ್ಟು = (ಗುದ್ದಲಿ) ಹಾರೆ
ಏಡು = ಎರಡು
ಏಡುಬೇಳೆ = ಎರಡು ಬೇಳೆ (ಮೊಳಕೆ ಸಸಿ)
ಒಡಬಾಳ = ಬಡತನದ ಬಾಳು / ಕಷ್ಟದ ಬದುಕು
ಒಂಟಿಬಡ್ಕ = ಏಕಾಂಗಿ
ಕತ್ಸು = ಹತ್ತಿಸು / ಹಚ್ಚು
ಕಪ್ಪ = ಕಪ್ಪೆ
ಕಳಕಂಬಳ = ಕೂಲಿ
ಕಂಕಳು = ತೋಳಸಂದಿ
ಕ್ಯಾಬಿನೈ = ಏನೂ ಇಲ್ಲ /ಕಳಪೆ/ಬುರ್ನಾಸು
ಕ್ಯಾಣ = ಕೋಪ
ಕುಂಡು = ಕುರುಡು
ಕುರುಕು = ಗುನುಗು / ಮೆಲುಕು ಹಾಕು
ಕೇಮಿಲ್ದಿಯ = ಕೆಲಸವಿಲ್ಲದೆ
ಕೇರುಮಾಡದೆ = ಲೆಕ್ಕಿಸದೆ
ಗಕ್ಕಿಡು = ಬೆಚ್ಚು
ಗಣ್ಯೆ = ಗೇಲಿ
ಗಡ್ಗ = ಗಡಿಗೆ/ಬಿಂದಿಗೆ
ಗರ್ತಿ = ಗರತಿ
ಗಲುಗು = ಗಲಗಲ ಶಬ್ದ / ಗದ್ದಲ
ಗಳಾಸು = ಗ್ಲಾಸ್, ಲೋಟ
ಗೋರಂಜ = ಎದೆಗಾರಿಕೆ/ಹೃದಯ
ಚಂದಗಾಣ = ಚೆನ್ನಾಗಿ/ ಆರೋಗ್ಯವಾಗಿ
ಚಕಳ/ ಚರಮ/ ಚಮ್ಡ= ಚರ್ಮ
ಚಣುಗ = ದನಕರುಗಳಿಗೆ ಮೇವು ಹಾಕುವ ಸ್ಥಳ
ಚಲುಗ = ಬಿಂದಿಗೆ
ಚಿನಾಲಿ = ಬೆಡಗಿ

ಚುಕ್ತ = ಮುಗಿದು
ಚೊಗ = ಅಂಗಿ
ಜಪಾತಿ = ಜೊತೆ
ಜೋತಿದ್ದ = ಜೋಡಿಸಿಟ್ಟಿದ್ದ
ತರಗು = ಪುರಳೆ,ಪುಡಿಸೌದೆ
ತಪರ್ಾಡ್ತ = ತೂರಾಡುತ್ತಾ
ತವೆಯು = ತೆವಳುವುದು
ತಾಡು = ತಾಳು
ತಿಪ್ಪೆ = ಗೊಬ್ಬರದ ಗುಂಡಿ
ತಿಪ್ಪೆಗೆ ಕುಂತಂತೆ = ಕಕ್ಕಸಿಗೆ ಕುಂತಂತೆ
ತೊಂಬ = ಧಾನ್ಯ ತುಂಬುವ ಬಿದಿರಿನ ಕಣಜ, ಕದಿಕೆ
ತೊಡೀತ = ತೆಗೆಯುತ್ತ
ದಬ್ಬಾಕತ್ತಾವ = ಮೈಮೇಲೆ ಬೀಳುತ್ತವೆ
ದಾರಂದ = ಕದ
ದುಕಾ = ಮೋಸ
ದುಕ್ತಿ = ದುಃಖ
ದುಡ = ದೃಢತೆ
ದೊಸ್ಕಂಡು = ಕುಸಿದು
ನಗರು = ಏದುಸಿರು
ನೀರಳಗ = ಮಣ್ಣಿನ ಪಾತ್ರೆ
ನೆಪ್ಪಿಡಿ = ನೆನಪಿಡುವುದು
ನೆರುಕೆ = ತೆಂಗಿನಗರಿಯಲ್ಲಿ ಹೆಣೆದ ತಟ್ಟಿ
ನೆಲು = ಮಡಿಕೆ ಇಡುವ ನೇತಾಡುವ ಹಗ್ಗದ ಸಾಧನ
ಪೆಕರು = ಪೆದ್ದು
ಪರಾಣ = ಪ್ರಾಣ
ಪೋಜು = ಮೆರವಣಿಗೆ
ಪೋಣಿ = ಓಣಿ
ಬಿಂಕಿ = ಬೆಂಕಿ
ಬಿತ್ತಣ = ಬಿತ್ತನೆ
ಬೀರುಗುಣಿಕೆ = ಬಿಗಿದು ಕಟ್ಟುವ ಗಂಟು
ಬೆಂಡು = ರಸಹೀನ
ಬೆಬಗೆರೆ = ತೊದಲಿಸಿ ಮಾತಾಡುವುದು
ಬೆಪ್ಗಣ್ಣು = ಪೆದ್ದಾಗಿ ಕಣ್ಣು ಬಿಡು
ಬೋಸಿ = ಪಾತ್ರೆ
ಮಳ್ಳು = ಮಡಿಲು
ಮುರಮಗ್ನ = ಒಂದು ಬೈಗುಳ
ಮುಂಡಿಗೆ = ಕಂಬ
ಮೆಡರಿಸು = ಕಣ್ಣು ಅಗಲಿಸು
ಮೆಡುಗಾರಿಕೆ = ಜಂಬ, ದರ್ಪ, ಶೋಕಿ
ಮೊರ ಗೆರಸಿ = ಬಿದಿರಿನ ಧಾನ್ಯ ಶುದ್ಧಿಸಾಧನ
ಮೊಖ,ಮುಸುಡಿ = ಮುಖ
ಯಮ್ಮ = ಹೆಂಗಸು (ಹೆಣ್ಣು ಮಕ್ಕಳು)
ರಾವುಳಾಸುರ = ರಾವಣಾಸುರ
ರಾಕ್ಷ = ರಾಕ್ಷಸ
ರಡಿ = (Ready) ಸಿದ್ಧ

ವಂದರಿ = ಧಾನ್ಯ ಶುದ್ಧೀಕರಿಸುವ ಜರಡಿ
ವಜ್ಜೋರಿ = ಒಂದೆಡೆ/ಒಂದು ಪಕ್ಕ
ವಸ್ತುಲು = ಹೊಸ್ತಿಲು
ವಾಕ್ಷ = ವಾಕ್ಯ
ಸಾಡು ಮಕ್ರಿ = ಬಿದಿರಿನ ದೊಡ್ಡ ಮಂಕರಿ
ಸಾಣೆ = ಮಸೆದು
ಸಾಸ = ಸಾಹಸ
ಸ್ವಾರ್ಜತ = ಸ್ವಯಾರ್ಜಿತ
ಸಿವುರು = ಚುಚ್ಚುವ ಸೌದೆ ಸೂಕ್ಷ್ಮ ಚೆಕ್ಕೆ
ಸಿಲೋಟು = ಸ್ಲೇಟ್
ಸೀಕ್ಷ = ಶಿಕ್ಷೆ
ಸೂಲು = ಜೀವ
ಸೊಳ್ಳು = ಸೊಡರು, ದೀಪ
ಹಂಚು = ಹೆಂಚು
ಹರೋಣ = ಹರಿವಾಣ (ತಟ್ಟೆ)
ಹೈದ = ಹುಡುಗ

**ಸೂಚನೆ : ಇನ್ನೂ ಯಾವುದಾದರೂ ಪದಗಳಿಗೆ ಅರ್ಥ ಬೇಕೆನಿಸಿದರೆ ದಯವಿಟ್ಟು ಬರೆದು ತಿಳಿಸಿ**